'ದಾದಾ ಭಗವಾನ್'ರ ಪ್ರಸ್ತುತಿ

# ನಾನು ಯಾರು?



ನಾನು, ನನ್ನನ್ನು ತಿಳಿದುಕೊಳ್ಳದೆ ಎಷ್ಟು ಕಾಲ ಹೀಗೆಯೇ ಇರುವುದು?

'ನಾನು ಯಾರು?'
ಎಂದು ತಿಳಿದುಕೊಳ್ಳುವುದು ಬಹಳ ಮುಖ್ಯವಾಗಿದೆ!

Kannada

'ದಾದಾ ಭಗವಾನ್'ರ ಪ್ರಸ್ತುತಿ

# ನಾನು ಯಾರು?

ಮೂಲ ಗುಜರಾತಿ ಸಂಕಲನೆ: ಡಾಕ್ಟರ್ ನಿರುಬೇನ್ ಅಮೀನ್

ಕನ್ನಡ ಅನುವಾದ: ಮಹಾತ್ಮ ವೃಂದ

**ಪ್ರಕಾಶಕರು: ಶ್ರೀ ಅಜಿತ್ ಭಾಯ್ ಸಿ. ಪಟೇಲ್**

**ದಾದಾ ಭಗವಾನ್ ವಿಜ್ಞಾನ ಫೌಂಡೇಶನ್**

1, ವರುಣ್ ಅಪಾರ್ಟ್ಮೆಂಟ್, 37, ಶ್ರೀಮಾಲಿ ಸೊಸೈಟಿ,

ನವರಂಗಪುರ ಪೊಲೀಸ್ ಸ್ಟೇಷನ್ ಎದುರು,

ನವರಂಗಪುರ, ಅಹಮದಾಬಾದ್:380009

**ಫೋನ್:** (079) 35002100

**© All Rights Reserved – ದಾದಾ ಭಗವಾನ್ ಫೌಂಡೇಶನ್**

5, ಮಮತಾ ಪಾರ್ಕ್ ಸೊಸೈಟಿ, ನವ ಗುಜರಾತ್ ಕಾಲೇಜು ಹಿಂಭಾಗ, ಉಸ್ಮಾನ್ ಪುರ,

ಅಹಮದಾಬಾದ್ -380014, ಗುಜರಾತ್

E: info@dadabhagwan.org

T: +91 79 35002100

No part of the book may be used or reproduced in any manner

Whatsoever without written permission from the holder of the copyrights.

**Second Edition: February 2021**

**ಭಾವ ಮೌಲ್ಯ: 'ಪರಮ ವಿನಯ ಹಾಗೂ ನಾನು ಏನನ್ನೂ ತಿಳಿದಿಲ್ಲ' ಎಂಬ ಭಾವನೆ!**

**ದ್ರವ್ಯ ಮೌಲ್ಯ:** 20 ರೂಪಾಯಿ

**ಮುದ್ರಣ:** ಅಂಬಾ ಮಲ್ಟಿಪ್ರಿಂಟ್

ಬಿ-99, ಎಲೆಕ್ಟ್ರಾನಿಕ್ಸ್ GIDC,

ಕೆ-6 ರೋಡ್, ಸೆಕ್ಟರ್-25,

ಗಾಂಧಿನಗರ-382044. ಗುಜರಾತ್

**ಫೋನ್:** (079) 35002142

# ತ್ರಿಮಂತ್ರ

ನಮೋ ಅರಿಹಂತಾಣಂ

ನಮೋ ಸಿದ್ಧಾಣಂ

ನಮೋ ಆಯರಿಯಾಣಂ

ನಮೋ ಉವಜ್ಝಾಯಾಣಂ

ನಮೋ ಲೋಏ ಸವ್ವಸಾಹೂಣಂ

ಏಸೋ ಪಂಚ ನಮುಕ್ಕಾರೋ;

ಸವ್ವ ಪಾವಪ್ಪಣಾಸಣೋ

ಮಂಗಲಾಣಂ ಚ ಸವ್ವೇಸಿಂ;

ಪಢಮಂ ಹವಈ ಮಂಗಲಂ

ಓಂ ನಮೋ ಭಗವತೇ ವಾಸುದೇವಾಯ

ಓಂ ನಮಃ ಶಿವಾಯ

ಜೈ ಸಚ್ಚಿದಾನಂದ್

# ‘ದಾದಾ ಭಗವಾನ್’ ಯಾರು?

1958ರ ಜೂನ್ ಮಾಸದ ಒಂದು ಸಂಜೆ, ಸುಮಾರು ಆರು ಗಂಟೆಯಾಗಿರಬಹುದು. ಜನಜಂಗುಳಿಯಿಂದ ತುಂಬಿಹೋಗಿದ್ದ ಸೂರತ್ ಪಟ್ಟಣದ ರೈಲ್ವೇ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂ. 3ರ ಒಂದು ಬೆಂಚಿನ ಮೇಲೆ ಶ್ರೀ ಎ. ಎಮ್. ಪಟೇಲ್ ಎಂಬ ಹೆಸರಿನ ದೇಹರೂಪಿ ಮಂದಿರದಲ್ಲಿ, ಅಕ್ರಮ ರೂಪದಲ್ಲಿ, ಪ್ರಕೃತಿಯ ಲೀಲೆಯಂತೆ, ‘ದಾದಾ ಭಗವಾನ್’ರವರು ಸಂಪೂರ್ಣವಾಗಿ ಪ್ರಕಟರಾದರು. ಪ್ರಕೃತಿಯು ಅಧ್ಯಾತ್ಮದ ಅದ್ಭುತ ಆಶ್ಚರ್ಯವನ್ನು ಸೃಷ್ಟಿಸಿತು. ಒಂದು ಗಂಟೆಯೊಳಗೆ ಅವರಿಗೆ ವಿಶ್ವದರ್ಶನವಾಯಿತು. ‘ನಾನು ಯಾರು? ದೇವರು ಯಾರು? ಜಗತ್ತನ್ನು ನಡೆಸುವವರು ಯಾರು? ಕರ್ಮ ಎಂದರೆ ಏನು? ಮುಕ್ತಿ ಎಂದರೆ ಏನು?’ ಎಂಬ ಜಗತ್ತಿನ ಎಲ್ಲಾ ಆಧ್ಯಾತ್ಮಿಕ ಪ್ರಶ್ನೆಗಳ ಸಂಪೂರ್ಣ ರಹಸ್ಯ ಪ್ರಕಟಗೊಂಡಿತು. ಈ ರೀತಿ, ಪ್ರಕೃತಿಯು ಜಗತ್ತಿನ ಮುಂದೆ ಒಂದು ಅದ್ವಿತೀಯ ಪೂರ್ಣ ದರ್ಶನವನ್ನು ಪ್ರಸ್ತುತಪಡಿಸಿತು ಹಾಗು ಇದಕ್ಕೆ ಒಂದು ಮಾಧ್ಯಮವಾದರು, ಗುಜರಾತಿನ ಚರೋತರ್ ಪ್ರದೇಶದ ಭಾದರಣ್ ಎಂಬ ಹಳ್ಳಿಯ ಪಟೇಲರಾಗಿದ್ದ, ವೃತ್ತಿಯಲ್ಲಿ ಕಾಂಟ್ರಾಕ್ಟರಾಗಿದ್ದ, ಸಂಪೂರ್ಣವಾಗಿ ರಾಗದ್ವೇಷದಿಂದ ಮುಕ್ತರಾಗಿದ್ದ ಶ್ರೀ ಎ. ಎಮ್. ಪಟೇಲ್‌ರವರು!

‘ವ್ಯಾಪಾರದಲ್ಲಿ ಧರ್ಮವಿರಬೇಕು, ಧರ್ಮದಲ್ಲಿ ವ್ಯಾಪಾರವಲ್ಲ’, ಎಂಬ ಸಿದ್ಧಾಂತದ ಪಾಲನೆ ಮಾಡುತ್ತಾ ಇವರು ಇಡೀ ಜೀವನವನ್ನು ಕಳೆದರು. ಜೀವನದಲ್ಲಿ ಅವರು ಯಾರಿಂದಲೂ ಹಣ ತೆಗೆದುಕೊಳ್ಳಲಿಲ್ಲವಷ್ಟೇ ಅಲ್ಲ, ತಮ್ಮ ಭಕ್ತರಿಗೆ ತಮ್ಮ ಸಂಪಾದನೆಯ ಹಣದಲ್ಲಿ ಯಾತ್ರೆ ಮಾಡಿಸುತ್ತಿದ್ದರು.

ಅವರು ಅನುಭವಿಗಳಾಗಿದ್ದರು. ಅದೇ ರೀತಿ, ಅವರು ಸಿದ್ಧಿಸಿಕೊಂಡ ಅದ್ಭುತವಾದ ಜ್ಞಾನಪ್ರಯೋಗದ ಮೂಲಕ ಕೇವಲ ಎರಡೇ ಗಂಟೆಗಳಲ್ಲಿ ಬೇರೆ ಮುಮುಕ್ಷುಗಳಿಗೂ ಸಹ ಆತ್ಮಜ್ಞಾನದ ಅನುಭವ ಉಂಟಾಗುವಂತೆ ಮಾಡುತ್ತಿದ್ದರು. ಇದನ್ನು ಅಕ್ರಮ ಮಾರ್ಗ ಎಂದು ಕರೆಯಲಾಯಿತು. ಅಕ್ರಮ, ಅದರರ್ಥ ಯಾವುದೇ ಕ್ರಮವಿಲ್ಲದ ಹಾಗು ಕ್ರಮ ಎಂದರೆ ಹಂತ ಹಂತವಾಗಿ, ಒಂದರ ನಂತರ ಒಂದರಂತೆ ಕ್ರಮವಾಗಿ ಮೇಲೇರುವುದು ಎಂದು. ಅಕ್ರಮ ಎಂದರೆ ಲಿಫ್ಟ್ ಮಾರ್ಗ, ಒಂದು ಶಾರ್ಟ್‌ಕಟ್.

ಅವರು ತಾವೇ ಪ್ರತಿಯೊಬ್ಬರಿಗೂ ‘ದಾದಾ ಭಗವಾನ್ ಯಾರು?’ ಎಂಬುದರ ರಹಸ್ಯದ ಬಗ್ಗೆ ಹೇಳುತ್ತಾ ನುಡಿಯುತ್ತಿದ್ದರು “ನಿಮ್ಮ ಎದುರು ಕಾಣುತ್ತಿರುವವರು ‘ದಾದಾ ಭಗವಾನ್’ ಅಲ್ಲ. ನಾನು ಜ್ಞಾನಿ ಪುರುಷ. ನನ್ನೊಳಗೆ ಪ್ರಕಟಗೊಂಡಿರುವವರು ‘ದಾದಾ ಭಗವಾನ್’. ದಾದಾ ಭಗವಾನ್ ಹದಿನಾಲ್ಕು ಲೋಕಗಳಿಗೂ ಒಡೆಯರು. ಅವರು ನಿಮ್ಮಲ್ಲೂ ಇದ್ದಾರೆ, ಎಲ್ಲರಲ್ಲೂ ಇದ್ದಾರೆ. ನಿಮ್ಮಲ್ಲಿ ಅವ್ಯಕ್ತರೂಪದಲ್ಲಿದ್ದಾರೆ ಮತ್ತು ‘ಇಲ್ಲಿ’ ನನ್ನೊಳಗೆ ಸಂಪೂರ್ಣ ರೂಪದಲ್ಲಿ ಪ್ರಕಟಗೊಂಡಿದ್ದಾರೆ. ದಾದಾ ಭಗವಾನ್‌ರವರಿಗೆ ನಾನೂ ನಮಸ್ಕಾರ ಮಾಡುತ್ತೇನೆ.”

# ನಿವೇದನೆ

ಜ್ಞಾನಿ ಪುರಷರಾದ, ಪೂಜನೀಯ ದಾದಾ ಭಗವಾನರ ಶ್ರೀಮುಖದಿಂದ ಆಧ್ಯಾತ್ಮಿಕ ಹಾಗೂ ವ್ಯವಹಾರ ಜ್ಞಾನ ಸಂಬಂಧದ ವಿಚಾರಧಾರೆಗಳ ವಾಣಿಯನ್ನು ರೆಕಾರ್ಡಿಂಗ್ ಮಾಡಲಾಗಿತ್ತು. ಅವುಗಳನ್ನು ನಂತರ ಕ್ರೋಡಿಕರಿಸಿ ಪುಸ್ತಕಗಳ ರೂಪದಲ್ಲಿ ಪ್ರಕಟಿಸಲಾಗಿದೆ. ಹಾಗೂ ಮೂಲ ಪುಸ್ತಕವು ಗುಜರಾತಿ ಭಾಷೆಯಲ್ಲಿದ್ದು, ನಂತರ ಕನ್ನಡ ಭಾಷೆಯಲ್ಲಿ ಅನುವಾದಗೊಂಡು ಹೊರಬಂದಿರುವ ಆ ಸರಸ್ವತಿಯ ಅದ್ಭುತ ಸಂಕಲನವು ಇದಾಗಿದೆ. ಇದು ಓದುಗರಿಗೊಂದು ವರದಾನವೇ ಆಗಿದೆ.

ಭಾಷಾಂತರ ಮಾಡುವಾಗ, ಓದುಗರಿಗೆ ದಾದಾರವರ ವಾಣಿಯನ್ನೇ ಆಲಿಸುತ್ತಿದ್ದೇವೇನೋ ಎನ್ನುವ ಅನುಭವವು ಉಂಟಾಗಲೆಂದು ವಿಶೇಷವಾದ ಗಮನವನ್ನು ಹರಿಸಲಾಗಿದೆ. ಆದರೂ, ಕನ್ನಡಕ್ಕೆ ಅನುವಾದಿಸುವಾಗ ಪದಗಳ ಸೀಮಿತದಿಂದಾಗಿ ವಾಕ್ಯಗಳ ರಚನೆಯಲ್ಲಿ ಲೋಪದೋಷಗಳು ಕಂಡುಬರಬಹುದು. ಆದರೆ, ಓದುಗರು ಪುಸ್ತಕದ ಮೂಲ ಉದ್ದೇಶವನ್ನು ಅರಿತುಕೊಂಡು ಹೆಚ್ಚಿನ ಲಾಭವನ್ನು ಪಡೆಯಬೇಕೆನ್ನುವುದೇ ನಮ್ಮ ಆಶಯವಾಗಿದೆ.

ಪ್ರಸ್ತುತ ಪುಸ್ತಕದಲ್ಲಿ ಕೆಲವೊಂದು ಕಡೆ bracketಗಳನ್ನು ನಮೂದಿಸಲಾಗಿದೆ. ಅದರಲ್ಲಿರುವ ಪದಗಳಾಗಲಿ ಅಥವಾ ವಾಕ್ಯಗಳಾಗಲಿ, ಅವು ಪರಮ ಪೂಜ್ಯ ದಾದಾಶ್ರೀಯವರಿಂದ ಹೇಳಲ್ಪಟ್ಟ ವಾಕ್ಯಗಳಿಗೆ ಹೆಚ್ಚಿನ ಸ್ಪಷ್ಟತೆಯನ್ನು ವ್ಯಕ್ತ ಪಡಿಸುವುದಕ್ಕೋಸ್ಕರ ಬರೆಯಲಾಗಿರುತ್ತದೆ. ಹಾಗೂ ದಾದಾಶ್ರೀಯವರಿಂದಲೇ ಹೇಳಲ್ಪಟ್ಟ ಇಂಗ್ಲಿಷ್ ಪದಗಳನ್ನು ಬದಲಾವಣೆ ಮಾಡದೆ ಹಾಗೆಯೇ ಬರೆಯಲಾಗಿದೆ. ದಾದಾಶ್ರೀಯವರ ವಾಣಿ ಗುಜರಾತಿ ಭಾಷೆಯ ಪದಗಳಾಗಿರುವುದರಿಂದ ಅದಕ್ಕೆ ಸರಿಯಾದ ಅರ್ಥಕೊಡುವ ಕನ್ನಡದ ಪದಗಳು ಸಿಗದೆ ಇರುವಲ್ಲಿ, ದಾದಾರವರು ಹೇಳಿರುವ ಗುಜರಾತಿ ಪದವನ್ನೇ ಬಳಸಲಾಗಿದೆ.

ಜ್ಞಾನಿ ಪುರುಷರ ವಾಣಿಯನ್ನು ಯಥಾರ್ಥವಾಗಿ ಭಾಷಾಂತರಿಸಲು ಹೆಚ್ಚಿನ ಪ್ರಯತ್ನವನ್ನು ಮಾಡಲಾಗಿದೆ. ಆದರೂ, ದಾದಾಶ್ರೀಯವರ ಆತ್ಮಜ್ಞಾನವನ್ನು ಸಂಪೂರ್ಣವಾಗಿ, ನಿಖರವಾಗಿ ತಿಳಿಯಬೇಕಿದ್ದರೆ ಮೂಲ ಭಾಷೆಯಿಂದಲೇ ಸಾಧ್ಯವಾಗುವಂತಹದ್ದು. ಹಾಗಾಗಿ, ಯಾರಿಗೆ ಜ್ಞಾನವನ್ನು ಆಳವಾಗಿ ತಿಳಿಯಬೇಕೆನ್ನುವ ಹಂಬಲವಿದೆಯೋ ಅಂಥವರು ಮೂಲ ಗುಜರಾತಿ ಭಾಷೆಯ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಭಾಷಾಂತರಕ್ಕೆ ಸಂಬಂಧಪಟ್ಟಂತೆ ಉಂಟಾಗಿರುವ ತಪ್ಪುಗಳಿಗೆ ತಮ್ಮಿಂದ ಕ್ಷಮೆಯಾಚಿಸುತ್ತೇವೆ. ಹಾಗೂ ಇನ್ನು ಹೆಚ್ಚಿನ ಸುಧಾರಣೆಗಾಗಿ ತಮ್ಮಿಂದ ಸಲಹೆ, ಸೂಚನೆಗಳನ್ನು ಬಯಸುತ್ತೇವೆ. ಸಂಪರ್ಕಿಸಲು ನಮ್ಮ **Email ID: nlt.m@dadabhagwan.org**.

# ಸಂಪಾದಕೀಯ

ಜೀವನದಲ್ಲಿ ಏನೇನೆಲ್ಲಾ ಎದುರಾಗುತ್ತವೆ, ಅವುಗಳನ್ನು ಸಂಪೂರ್ಣವಾಗಿ realisation ಮಾಡಿಕೊಳ್ಳದ ವಿನಃ ಮನುಷ್ಯನಿಗೆ ಸಮಾಧಾನವಿರುವುದಿಲ್ಲ. ಎಲ್ಲವನ್ನೂ realisation ಮಾಡಿಕೊಳ್ಳಲಾಗುತ್ತದೆ. ಆದರೆ, Self ಅನ್ನು ಮಾತ್ರ realisation ಮಾಡಿಕೊಂಡಿಲ್ಲ! ಅನಂತ ಜನ್ಮಗಳಿಂದಲೂ 'ನಾನು ಯಾರು?' ಎನ್ನುವುದನ್ನು ಕಂಡುಕೊಳ್ಳಲಾಗದೆ ಸಿಕ್ಕಿಹಾಕಿ ಕೊಂಡಿರುವುದಾಗಿದೆ. ಹಾಗಾಗಿಯೇ ಅಲೆದಾಟಕ್ಕೆ ಅಂತ್ಯವು ಸಿಗುತ್ತಿಲ್ಲ! ಅದಕ್ಕೆ ಅಂತ್ಯವನ್ನು ಯಾವ ರೀತಿಯಿಂದ ಕಂಡುಕೊಳ್ಳುವುದು?

ಅದೇನಿದ್ದರೂ ಯಾರಿಗೆ ಕಂಡುಕೊಳ್ಳಲಾಗಿದೆಯೋ ಆ ವ್ಯಕ್ತಿ ಮಾತ್ರವೇ ಉಳಿದವರಿಗೆ ಸುಲಭವಾಗಿ ತಿಳುಹಿಸಿಕೊಡಲು ಸಾಧ್ಯ! ಅಂತಹ ವಿಭೂತಿಗಳೇ ಸ್ವಯಂ 'ಜ್ಞಾನಿ'ಗಳು! ಜ್ಞಾನಿ ಪುರುಷರು ಯಾರೆಂದರೆ, ಈ ಜಗತ್ತಿನಲ್ಲಿ ಯಾರಿಗೆ ತಿಳಿಯಬೇಕಾಗಿರುವುದು ಅಥವಾ ಮಾಡಬೇಕಾಗಿರುವುದು ಏನೂ ಬಾಕಿ ಉಳಿದಿರುವುದಿಲ್ಲವೋ ಅವರೇ! ಅಂತಹ ಜ್ಞಾನಿ ಪುರುಷರಾದ ಪರಮ ಪೂಜ್ಯ ದಾದಾಶ್ರೀ ಈ ಕಾಲದಲ್ಲಿ ನಮ್ಮ ನಡುವೆ ಇದ್ದು, ನಮ್ಮದೇ ಭಾಷೆಯಲ್ಲಿ, ನಮಗೆ ತಿಳಿದುಕೊಳ್ಳಲು ಸಾಧ್ಯವಾಗುವಂತಹ ಸರ್ವೇ ಸಾಮಾನ್ಯ ಭಾಷೆಯಲ್ಲಿ, ಪ್ರತಿಯೊಬ್ಬರ ಮೂಲ ಪ್ರಶ್ನೆಯಾಗಿರುವ, 'ನಾನು ಯಾರು?' ಎನ್ನುವ ಗೊಂದಲದ ಪ್ರಶ್ನೆಯನ್ನು ಸಹಜವಾಗಿಯೇ ಪರಿಹರಿಸಿಬಿಟ್ಟಿದ್ದಾರೆ.

ಅದಷ್ಟೇ ಅಲ್ಲ, ಈ ಜಗತ್ತು ಎಂದರೆ ಏನು? ಯಾವ ರೀತಿಯಿಂದ ನಡೆಯುತ್ತಿದೆ? ಅದನ್ನು ನಡೆಸುವವರು ಯಾರು? ಭಗವಂತ ಅಂದರೆ ಯಾರು? ಮೋಕ್ಷ ಅಂದರೆ ಏನು? ಜ್ಞಾನಿ ಪುರುಷರು ಎಂದು ಯಾರನ್ನು ಕರೆಯುತ್ತಾರೆ? ಸಿಮಂಧರ್-ಸ್ವಾಮಿ ಅಂದರೆ ಯಾರು? ಸಂತರು, ಗುರುಗಳು ಹಾಗೂ ಜ್ಞಾನಿ ಪುರುಷರ ನಡುವೆ ಇರುವ ವ್ಯತ್ಯಾಸವೇನು? ಜ್ಞಾನಿ ಎಂದು ನಮಗೆ ತಿಳಿಯುವುದು ಹೇಗೆ? ಜ್ಞಾನಿ ಏನು ಮಾಡಬಲ್ಲರು? ಹಾಗೂ ಪರಮ ಪೂಜ್ಯ ದಾದಾಶ್ರೀಯವರ ಈ ಅಕ್ರಮ ಮಾರ್ಗ ಅಂದರೇನು? ಅಲ್ಲದೆ, ಎಲ್ಲರು ಅನಂತ ಜನ್ಮಗಳಿಂದ ಕ್ರಮಾನುಸಾರವಾಗಿ ಮೋಕ್ಷ ಮಾರ್ಗವನ್ನು ಹಿಡಿದುಕೊಂಡು ನಿಧಾನವಾಗಿ ಮೇಲೇರುತ್ತಾ ಮುಂದೆ ಸಾಗುವುದಾಗಿದೆ. ಆದರೆ, 'lift' (elevator)ನ ಹಾಗೆ ಶೀಘ್ರವಾಗಿ ತಲುಪಲು ಸಾಧ್ಯವಾಗುವಂತಹ ಮೋಕ್ಷದ ಮಾರ್ಗವು ಇರಬಹುದಲ್ಲವೇ? ಅಕ್ರಮ ಮಾರ್ಗದಿಂದ ಈ ಕಾಲದಲ್ಲಿ, ಸಂಸಾರದಲ್ಲಿ ಇದ್ದರೂ ಸಹ ಮೋಕ್ಷವು ಪ್ರಾಪ್ತಿಯಾಗುವಂತೆ ಹಾಗೂ ಅಂತಹ ಮೋಕ್ಷವನ್ನು ಯಾವ ರೀತಿಯಿಂದ ಪ್ರಾಪ್ತಿ ಮಾಡಿಕೊಳ್ಳುವುದು ಎನ್ನುವುದರ ಸಂಪೂರ್ಣ ತಿಳುವಳಿಕೆಯನ್ನು ಹಾಗು ಆ ದಿಕ್ಕಿನ ಪ್ರಾಪ್ತಿಯನ್ನು ಪರಮ ಪೂಜ್ಯ ದಾದಾಶ್ರಿಯವರು ಅನುಗ್ರಹಿಸಿದ್ದಾರೆ.

'ನಾನು ಯಾರು?' ಎನ್ನುವ ಅರಿವು ಮೂಡಿದ ನಂತರದ ಅನುಭೂತಿಯು ಹೇಗಿರುತ್ತದೆಂದರೆ, 'ಸಂಸಾರದಲ್ಲಿನ ಎಲ್ಲಾ ಜವಾಬ್ಧಾರಿಗಳನ್ನು ನಿಭಾಯಿಸುತ್ತಿದ್ದರೂ ಸಹ, ಸಂಸಾರದಿಂದ ಸಂಪೂರ್ಣ ನಿರ್ಲಿಪ್ತರಾಗಿ ಆತ್ಮ ಸ್ಥಿತಿಯ ಅನುಭವದಲ್ಲಿ ಇದ್ದುಬಿಡಲಾಗುತ್ತದೆ. ಆಧಿ-ವ್ಯಾಧಿ ಹಾಗು ಉಪಾಧಿಗಳಲ್ಲೂ ಸಹ ನಿರಂತರವಾಗಿ ಸ್ವ-ಸಮಾಧಿಯಲ್ಲಿ ಇರಲಾಗುತ್ತದೆ.' ಅಂತಹ ಅನುಭವವು ಸಾವಿರಾರು ಮಹಾತ್ಮರಿಗೆ ಈ ಅಕ್ರಮ ಜ್ಞಾನವು ಪ್ರಾಪ್ತಿಯಾದ ನಂತರ ಕಂಡುಬಂದಿದೆ! ಹಾಗಾಗಿ ಸರ್ವರಿಗೂ ಪ್ರಾಪ್ತಿಯಾಗಲೆಂದು, ಈ ಪ್ರಸ್ತುತ ಸಂಕಲನವು ಮುಮುಕ್ಷುಗಳಿಗೆ ಮೋಕ್ಷ ಮಾರ್ಗದಲ್ಲಿ ದಾರಿದೀಪದಂತೆ ಸಹಾಯವಾಗಲಿ ಎನ್ನುವುದೊಂದೇ ಅಭಿಲಾಷೆಯಾಗಿದೆ.

-ಡಾಕ್ಟರ್ ನಿರುಬೇನ್ ಅಮೀನ್

# ಆತ್ಮಜ್ಞಾನದ ಪ್ರಾಪ್ತಿಗಾಗಿ ಪ್ರತ್ಯಕ್ಷ ಲಿಂಕ್

'ನಾನಂತೂ ಬಹಳಷ್ಟು ಮಂದಿಗೆ ನನ್ನ ಹಸ್ತ ಮುಖೇನ ಸಿದ್ಧಿಯನ್ನು ನೀಡುವುದಾಗಿದೆ. ಅದು, ನಂತರ ಮುಂದಕ್ಕೂ ಬೇಕೋ ಬೇಡವೋ? ನನ್ನ ನಂತರವೂ ಜನರಿಗೆ ಈ ಮಾರ್ಗವು ಬೇಕಲ್ಲವೇ?'

**-ದಾದಾ ಭಗವಾನ್**

ಪರಮ ಪೂಜ್ಯ ದಾದಾ ಭಗವಾನ್ (ದಾದಾಶ್ರೀ) ಹಳ್ಳಿ-ಹಳ್ಳಿಗಳಿಗೆ, ದೇಶ-ವಿದೇಶಗಳ ಪರ್ಯಟನೆಯನ್ನು ಮಾಡಿ ಮುಮುಕ್ಷುಗಳಿಗೆ ಸತ್ಸಂಗ ಮತ್ತು ಆತ್ಮಜ್ಞಾನದ ಪ್ರಾಪ್ತಿಯನ್ನು ಮಾಡುತ್ತಿದ್ದರು. ಹಾಗೂ ದಾದಾಶ್ರೀಯವರು ಇರುವಾಗಲೇ ಪೂಜ್ಯ ಡಾಕ್ಟರ್ ನಿರುಬೇನ್ ಅಮೀನ್ (ನಿರುಮಾ) ಅವರಿಗೆ ಆತ್ಮಜ್ಞಾನವನ್ನು ಮುಮುಕ್ಷುಗಳಿಗೆ ಪ್ರಾಪ್ತಿ ಮಾಡಲು ಸಿದ್ಧಿಯನ್ನು ಅನುಗ್ರಹಿಸಿದ್ದರು. ದಾದಾಶ್ರೀಯವರ ದೇಹ ವಿಲಯದ ನಂತರ ನಿರುಮಾ, ಅದೇ ರೀತಿಯಲ್ಲಿ ಮುಮುಕ್ಷುಗಳಿಗೆ ಸತ್ಸಂಗ ಹಾಗು ಆತ್ಮಜ್ಞಾನದ ಪ್ರಾಪ್ತಿಯನ್ನು ನಿಮಿತ್ತ ಭಾವನೆಯಿಂದ ಮಾಡುತ್ತಿದ್ದರು. ಪೂಜ್ಯ ದೀಪಕ್ ಭಾಯ್ ದೇಸಾಯ್, ಅವರಿಗೆ ದಾದಾಶ್ರೀಯವರು ಸತ್ಸಂಗವನ್ನು ನಡೆಸಲು ಸಿದ್ಧಿಯನ್ನು ಅನುಗ್ರಹಿಸಿದ್ದರು. ನಿರುಮಾರವರ ಉಪಸ್ಥಿತಿಯಲ್ಲೂ ಅವರ ಆಶೀರ್ವಾದದೊಂದಿಗೆ ಪೂಜ್ಯ ದೀಪಕ್ ಭಾಯ್ ದೇಸಾಯ್ ದೇಶ-ವಿದೇಶಗಳಲ್ಲಿನ ಬಹಳಷ್ಟು ಪಟ್ಟಣಗಳಿಗೆ ಪ್ರವಾಸ ಮಾಡಿ ಆತ್ಮಜ್ಞಾನದ ಪ್ರಾಪ್ತಿಯನ್ನು ನಿಮಿತ್ತ ಭಾವನೆಯಿಂದ ಮಾಡುತ್ತಿದ್ದರು. ಹಾಗೂ ನಿರುಮಾರವರ ದೇಹ ವಿಲಯದ ನಂತರವೂ ನಡೆಯುತ್ತಲೇ ಇರುವುದಾಗಿದೆ. ಈ ಆತ್ಮಜ್ಞಾನವನ್ನು ಪಡೆದ ಸಾವಿರಾರು ಮುಮುಕ್ಷು ಬಾಂಧವರು ಸತ್ಸಂಗದಲ್ಲಿ ಪಾಲ್ಗೊಳ್ಳುವುದರ ಜೊತೆಗೆ ತಮ್ಮೆಲ್ಲಾ ಸಂಸಾರದ ಜವಾಬ್ದಾರಿಗಳನ್ನು ಪೂರ್ಣಗೊಳಿಸುತ್ತಾ ಸಂಪೂರ್ಣ ಮುಕ್ತರಾಗಿ ಆತ್ಮಾನಂದವನ್ನು ಅನುಭವಿಸುತ್ತಿದ್ದಾರೆ.

ಪುಸ್ತಕದ ರೂಪದಲ್ಲಿ ಮುದ್ರಣಗೊಂಡಿರುವ 'ದಾದಾಶ್ರೀ'ಯವರ ವಾಣಿಯು ಮುಮುಕ್ಷುಗಳಿಗೆ ಗೈಡ್ ರೀತಿಯಲ್ಲಿ ಅತ್ಯುತ್ತಮವಾದ ಉಪಯೋಗಕಾರಿ ಕೈಪಿಡಿಯಾಗಿದೆ. ಆದರೆ, ಮೋಕ್ಷವನ್ನು ಪಡೆಯಬೇಕಿದ್ದರೆ, ಆತ್ಮಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ. ಅಕ್ರಮ ಮಾರ್ಗದಿಂದ ಆತ್ಮಜ್ಞಾನದ ಪ್ರಾಪ್ತಿಯನ್ನು ಈಗಲೂ ಕೂಡಾ ಪಡೆಯಬಹುದಾಗಿದೆ. ಅದಕ್ಕಾಗಿ ಪ್ರತ್ಯಕ್ಷ ಆತ್ಮಜ್ಞಾನಿಯನ್ನು ಭೇಟಿಯಾಗಿ, ಅವರಿಂದ ಆತ್ಮಜ್ಞಾನದ ಪ್ರಾಪ್ತಿಯನ್ನು ಮಾಡಿಕೊಳ್ಳಬೇಕಾಗುತ್ತದೆ. 'ಬೆಳಗುತ್ತಿರುವ ದೀಪವನ್ನು ಸ್ಪರ್ಶಿಸಿದಾಗ ಮಾತ್ರವೇ ಮತ್ತೊಂದು ದೀಪವು ಹೊತ್ತಿಕೊಳ್ಳಲು ಸಾಧ್ಯ!'

# ನಾನು ಯಾರು?

## (1) 'ನಾನು' ಯಾರು?

### ಬೇರೆಯಾಗಿದೆ, ಹೆಸರು ಹಾಗು 'ತಾನು'

**ದಾದಾಶ್ರೀ:** ನಿಮ್ಮ ಹೆಸರೇನು?

**ಪ್ರಶ್ನಕರ್ತ:** ನನ್ನ ಹೆಸರು ಚಂದುಲಾಲ್.

**ದಾದಾಶ್ರೀ:** ನಿಜವಾಗಿಯೂ ನೀವು ಚಂದುಲಾಲ್ ಹೌದಾ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಚಂದುಲಾಲ್ ನಿಮ್ಮ ಹೆಸರು, ಅದು ನಿಮ್ಮ ಹೆಸರಲ್ಲವೇ? ನೀವು ಸ್ವತಃ ಚಂದುಲಾಲ್ ಹೌದಾ ಅಥವಾ ನಿಮ್ಮ ಹೆಸರು ಚಂದುಲಾಲ್ ಎಂದಿದೆಯೋ?

**ಪ್ರಶ್ನಕರ್ತ:** ಅದು ನನ್ನ ಹೆಸರು.

**ದಾದಾಶ್ರೀ:** ಹಾಗಾದರೆ 'ನೀವು' ಯಾರು? ನಿಮ್ಮ ಹೆಸರು ಚಂದುಲಾಲ್ ಎನ್ನುವುದಾದರೆ, ನೀವು ಯಾರು? ಇಲ್ಲಿ ನಿಮ್ಮ ಹೆಸರು ಹಾಗು ನೀವು ಬೇರೆಯಾಗಲಿಲ್ಲವೇ? ನೀವು, ನಿಮ್ಮ ಹೆಸರಿನಿಂದ ಬೇರೆ ಎಂದಮೇಲೆ ನೀವು ಯಾರು? ಈ ನನ್ನ ಮಾತು ನಿಮಗೆ ತಿಳಿಯಲಾಗುತ್ತಿದೆಯಲ್ಲವೇ? ನಾನೇನು ಹೇಳಬಯಸುತ್ತಿದ್ದೇನೆ ಎನ್ನುವುದು ನಿಮಗೆ ಅರ್ಥವಾಗುತ್ತಿದೆ ಅಲ್ಲವೇ? 'ಇದು ನನ್ನ ಕನ್ನಡಕ' ಎಂದು ಹೇಳುವಾಗ, ಕನ್ನಡಕ ಹಾಗು ನಾನು ಬೇರೆ ಎಂದಾಯಿತಲ್ಲವೇ? ಅದೇ ರೀತಿ ನೀವು ಹೆಸರಿನಿಂದ ಬೇರೆ ಎಂದು ಇನ್ನೂ ಕೂಡಾ ನಿಮಗೆ ಅನ್ನಿಸುತ್ತಿಲ್ಲವೇ?

ಹೇಗೆ ಅಂಗಡಿಗೆ 'ಜನರಲ್ ಟ್ರೇಡರ್ಸ್' ಎಂದು ಹೆಸರಿಡುತ್ತಾರೆ, ಅದೇನು ತಪ್ಪಲ್ಲ. ಆದರೆ, ಅದರ ಮಾಲೀಕನಿಗೆ ನಾವು 'ಏಯ್, ಜನರಲ್ ಟ್ರೇಡರ್ಸ್ ಇಲ್ಲಿ ಬಾ' ಎಂದು ಕರೆಯಲಾಗುತ್ತದೆಯೇ? ಆಗ ಮಾಲೀಕ ಏನು ಹೇಳುತ್ತಾನೆ, 'ನನ್ನ ಹೆಸರು ಜಯಂತಿಲಾಲ್ ಹಾಗು ಜನರಲ್ ಟ್ರೇಡರ್ಸ್ ಎನ್ನುವುದು ನನ್ನ ಅಂಗಡಿಯ ಹೆಸರು'. ಅಂದರೆ, ಅಲ್ಲಿ ಅಂಗಡಿಯ ಹೆಸರು ಬೇರೆ, ಒಳಗಿರುವ ಮಾಲೀಕ ಬೇರೆ, ಸರಕುಗಳು ಬೇರೆ, ಎಲ್ಲವೂ ಬೇರೆಯಾಗಿವೆ ಅಲ್ಲವೇ, ನಿಮಗೇನು ಅನ್ನಿಸುತ್ತದೆ?

**ಪ್ರಶ್ನಕರ್ತ:** ಹೌದು, ಅದು ನಿಜ.

**ದಾದಾಶ್ರೀ:** ಆದರೂ ಅಲ್ಲಿ ಹೇಳುವುದೇನು? 'ಇಲ್ಲ, ನಾನು ಚಂದುಲಾಲ್'. ಹಾಗಾದರೆ ಅಂಗಡಿಯ ಬೋರ್ಡ್ ಕೂಡಾ ನಾನು ಹಾಗೂ ಮಾಲೀಕನೂ ನಾನು?! ನಿಮ್ಮನ್ನು ಚಂದುಲಾಲ್ ಎಂದು ಕರೆಯಲ್ಪಡುವುದು, ನಿಮ್ಮನ್ನು ಗುರುತಿಸುವ ಸಲುವಾಗಿ ಇರುವ ಒಂದು ಸಾಧನ.

## ಪರಿಣಾಮಗಳು? ಅವು ಆತ್ಮಸ್ವರೂಪ ಅಲ್ಲ

ಸಂಪೂರ್ಣವಾಗಿ ನೀವು ಚಂದುಲಾಲ್ ಅಲ್ಲ ಎಂದು ಹೇಳಲಾಗುವುದಿಲ್ಲ. ವ್ಯವಹಾರದ ದೃಷ್ಟಿಯಿಂದ ನೀವು ಚಂದುಲಾಲ್ ಹೌದು. By relative view point, you are Chandulal is correct.

**ಪ್ರಶ್ನಕರ್ತ:** ನಾನು ಆತ್ಮ, ಆದರೆ ನನ್ನ ಹೆಸರು ಚಂದುಲಾಲ್.

**ದಾದಾಶ್ರೀ:** ಹೌದು, ಆದರೆ ಈಗ ಯಾರಾದರು 'ಚಂದುಲಾಲ್'ಗೆ ಬೈಯುವಾಗ, 'ನಿಮಗೆ' ಅದರಿಂದಾಗಿ ಪರಿಣಾಮವು ಉಂಟಾಗುವುದು ನಿಜ ಅಲ್ಲವೇ?

**ಪ್ರಶ್ನಕರ್ತ:** ಪರಿಣಾಮ ಬೀರುತ್ತದೆ.

**ದಾದಾಶ್ರೀ:** ಹಾಗಾದರೆ, 'ನೀವು' ಇನ್ನೂ 'ಚಂದುಲಾಲ್', 'ಆತ್ಮ' ಅಲ್ಲ. 'ನೀವು' ಆತ್ಮವಾಗಿದ್ದರೆ, ನಿಮಗೆ ಪರಿಣಾಮವು ಉಂಟಾಗುವುದಿಲ್ಲ ಹಾಗೂ ಪರಿಣಾಮವು ಉಂಟಾಗುತ್ತಿದೆ ಎಂದಮೇಲೆ, ನೀವು ಚಂದುಲಾಲ್ ಎಂದೇ ಪರಿಗಣಿಸಲಾಗುತ್ತದೆ.

'ಚಂದುಲಾಲ್' ಎನ್ನುವ ಹೆಸರಿನವರಿಗೆ ಬೈಯುತ್ತಿರುವುದಾಗಿದೆ ನೀವು ಅದನ್ನು ಸ್ವೀಕರಿಸುವುದಾಗಿದೆ. 'ಚಂದುಲಾಲ್' ಎನ್ನುವ ಹೆಸರಿನವರಿಗೆ ಯಾರಾದರು ದೂಷಣೆ ಮಾಡುತ್ತಿದ್ದರೆ, ಅದನ್ನು ನೀವು ಗೋಡೆಗೆ ಕಿವಿಕೊಟ್ಟು ಕೇಳಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಆಗ ನಾವು, 'ಗೋಡೆ ಏನು ಹೇಳುತ್ತಿದೆ?' ಎಂದು ಕೇಳಿದರೆ, ನೀವೇನು ಹೇಳುತ್ತೀರಿ? 'ಗೋಡೆಯಲ್ಲ, ಒಳಗೆ ನನ್ನ ಬಗ್ಗೆ ಮಾತನಾಡುತ್ತಿದ್ದಾರೆ ಅದನ್ನು ಕೇಳಿಸಿಕೊಳ್ಳುತ್ತಿದ್ದೇನೆ' ಎಂದು. ಯಾರ ಬಗ್ಗೆ ಮಾತನಾಡುತ್ತಿದ್ದಾರೆ? ಎಂದು ಪ್ರಶ್ನಿಸಿದರೆ, 'ಚಂದುಲಾಲ್ ಎಂದು ಮಾತನಾಡುತ್ತಿದ್ದಾರೆ' ಎಂದು ಹೇಳುತ್ತೀರಿ. ಆದರೆ ನೀವು ಚಂದುಲಾಲ್ ಅಲ್ಲವಲ್ಲಾ. ನೀವು ಆತ್ಮ ಆಗಿದ್ದರೆ, ಚಂದುಲಾಲ್ ಬಗ್ಗೆ ಮಾತನಾಡುತ್ತಿರುವುದನ್ನು ನಿಮಗೆಂದು ತೆಗೆದುಕೊಳ್ಳುವುದೇ ಬೇಕಾಗಿಲ್ಲ.

**ಪ್ರಶ್ನಕರ್ತ:** ನಿಜವಾಗಿ ನೋಡಿದರೆ, 'ನಾನು ಆತ್ಮವೇ' ಅಲ್ಲವೇ?

**ದಾದಾಶ್ರೀ:** ಇನ್ನೂ ನೀವು ಆತ್ಮವನ್ನು ಹೊಂದಿಲ್ಲವಲ್ಲಾ. ಈಗ ನೀವು, ನಿಮ್ಮನ್ನು ಚಂದುಲಾಲ್ ಎಂದೇ ತಿಳಿದಿದ್ದೀರಿ! 'ನಾನು ಚಂದುಲಾಲ್' ಎನ್ನುವುದು ಆರೋಪಣೆಯ ಭಾವನೆಯಾಗಿದೆ.

ನಿಮಗೆ, 'ನಾನು ನಿಜವಾಗಿ ಚಂದುಲಾಲ್' ಎನ್ನುವ belief ಕುಳಿತುಬಿಟ್ಟಿದೆ, ಅದು wrong belief ಆಗಿದೆ.

# (2) 'ಬಿಲೀಫ್'ಗಳ, ರಾಂಗ್-ರೈಟ್ (ತಪ್ಪು-ಸರಿ)

## ಎಷ್ಟೊಂದೆಲ್ಲಾ ರಾಂಗ್ 'ಬಿಲೀಫ್'ಗಳು

'ನಾನು ಚಂದುಲಾಲ್' ಎಂಬ ಕಲ್ಪನೆಯನ್ನು ಹೊಂದಲಾಗಿದೆ. ಈ ಬಿಲೀಫ್ ಎಷ್ಟರ ಮಟ್ಟಿಗೆ ಕುಳಿತು ಬಿಟ್ಟಿದೆಯೆಂದರೆ, ನಿದ್ರಿಸುವಾಗಲೂ ಸಹ ಮರೆತುಹೋಗುವುದಿಲ್ಲವಲ್ಲಾ! ಆಮೇಲೆ, ಜನರು ಸೇರಿಕೊಂಡು ಮದುವೆ ಮಾಡಿಸಿ ನಮಗೆ ಹೇಳುತ್ತಾರೆ, 'ಇನ್ನು ಮುಂದೆ ನೀನು ಈ ಹುಡುಗಿಯ ಗಂಡ' ಎಂದು. ಅವರುಗಳ ಹೇಳಿಕೆಯಂತೆ ನಾವು ಕೂಡಾ ಅವಳ ಗಂಡನೆಂಬ ಪಟ್ಟವನ್ನು ಒಪ್ಪಿಕೊಳ್ಳುತ್ತೇವೆ ಹಾಗು 'ಅವಳ ಗಂಡ ನಾನು', 'ನಾನು ಅವಳಿಗೆ ಯಜಮಾನ' ಎಂದು ಹೇಳಿಕೊಂಡು ಓಡಾಡುವುದಾಗಿದೆ. ಶಾಶ್ವತವಾಗಿ ಯಾರಾದರೂ ಗಂಡನಾಗಿಯೇ ಉಳಿದಿರುವುದು ಉಂಟೇ? ಅವಳಿಗೆ ಡೈವೋರ್ಸ್ ಕೊಟ್ಟ ಮರುದಿನದಿಂದ ಯಜಮಾನನ ಪಟ್ಟ ಎಲ್ಲಿ ಹೋಯಿತು? ಹೀಗೆ ಇಂತಹದೆಲ್ಲಾ ಎಷ್ಟೊಂದು ರಾಂಗ್ 'ಬಿಲೀಫ್'ಗಳು ಗಾಢವಾಗಿ ಉಳಿದುಬಿಟ್ಟಿವೆ.

ಆದುದರಿಂದ ಇಲ್ಲಿ 'ನಾನು ಚಂದುಲಾಲ್' ಎನ್ನುವುದು ಮೊಟ್ಟಮೊದಲನೆಯ ರಾಂಗ್ ಬಿಲೀಫ್ ಆಗಿದೆ ಮತ್ತೆ 'ನಾನು ಅವಳ ಗಂಡ' ಎನ್ನುವುದು ಎರಡನೆಯ ರಾಂಗ್ ಬಿಲೀಫ್ ಆಗಿದೆ. 'ನಾನು ವೈಷ್ಣವ' ಎನ್ನುವುದು ಮೂರನೆಯ ರಾಂಗ್ ಬಿಲೀಫ್. 'ನಾನು ವಕೀಲ' ಎನ್ನುವುದು ನಾಲ್ಕನೆಯ ರಾಂಗ್ ಬಿಲೀಫ್, 'ನಾನು ಆ ಹುಡುಗನ ತಂದೆ' ಇದು ಐದನೆಯದ್ದಾಗಿದೆ, 'ನಾನು ಅವನ ಮಾವ' ಇದು ಆರನೆಯದ್ದಾಗಿದೆ, 'ನಾನು ಬೆಳ್ಳಗಿದ್ದೇನೆ' ಎನ್ನುವುದು ಏಳನೆಯ ರಾಂಗ್ ಬಿಲೀಫ್. 'ನಾನು ನಲವತ್ತೈದು ವರ್ಷದವನು' ಎನ್ನುವುದು ಎಂಟನೆಯ ರಾಂಗ್ ಬಿಲೀಫ್. 'ನಾನು ಮತ್ತು ಅವನು, ಇಬ್ಬರೂ ಪಾಲುದಾರರು' ಎಂದು ಹೇಳುವುದೂ ರಾಂಗ್ ಬಿಲೀಫ್ ಆಗಿದೆ. 'ನಾನು Income tax ಕಟ್ಟುತ್ತೇನೆ' ಎಂದು ಹೇಳುವುದೂ ಸಹ ರಾಂಗ್ ಬಿಲೀಫ್ ಆಗಿದೆ. ಹೀಗೆ ಅದೆಷ್ಟೊಂದು 'ರಾಂಗ್ ಬಿಲೀಫ್'ಗಳು ಕುಳಿತುಕೊಂಡು ಬಿಟ್ಟಿವೆ ಅಲ್ಲವೇ?

## 'ನಾನು' ಎನ್ನುವ ಸ್ಥಾನದ ಬದಲಾವಣೆ

ಈ 'ನಾನು ಚಂದುಲಾಲ್' ಎನ್ನುವುದು ಅಹಂಕಾರವಾಗಿದೆ. ಏಕೆಂದರೆ, ಎಲ್ಲಿ 'ನಾನು' ಇಲ್ಲ, ಅಲ್ಲಿ 'ನಾನು' ಎಂದು ಆರೋಪಣೆಯನ್ನು ಮಾಡಲಾಗಿದೆ, ಅದರ ಹೆಸರೇ ಅಹಂಕಾರ.

**ಪ್ರಶ್ನಕರ್ತ:** 'ನಾನು ಚಂದುಲಾಲ್' ಎಂದು ಹೇಳಿದರೆ, ಅದರಲ್ಲಿ ಏನಿದೆ ಅಹಂಕಾರ? 'ನಾನು ಹಾಗೆ, ನಾನು ಹೀಗೆ' ಎಂದು ಹೇಳಿಕೊಂಡು ಓಡಾಡಿದರೆ, ಅದು ಬೇರೆ ಮಾತಾಗಿದೆ. ಆದರೆ, ಸಹಜವಾಗಿ ಹೇಳುವಾಗ, ಅದರಲ್ಲಿ ಏನು ಅಹಂಕಾರ?

**ದಾದಾಶ್ರೀ:** ಸಹಜವಾಗಿ ಹೇಳಿದರೂ ಕೂಡಾ ಅಲ್ಲಿ ಅಹಂಕಾರ ಏನು ಹೋಗಿರುತ್ತದೆಯೇ? 'ನನ್ನ ಹೆಸರು ಚಂದುಲಾಲ್' ಎಂದು ಸಹಜವಾಗಿಯೇ ಹೇಳಿದರೂ ಸಹ ಅದು ಅಹಂಕಾರವೇ ಆಗಿದೆ. ಏಕೆಂದರೆ ನೀವು ಯಾರು ಎನ್ನುವುದು ನಿಮಗೆ ತಿಳಿದಿಲ್ಲ ಹಾಗು ಯಾವುದು ನೀವಲ್ಲವೋ ಅದನ್ನು ನಾನೇ ಎಂದು ಆರೋಪಣೆಯನ್ನು ಮಾಡುತ್ತಿರುವುದಾಗಿದೆ. ಇದೆಲ್ಲವೂ ಅಹಂಕಾರವೇ ಆಗಿದೆಯಲ್ಲಾ!

'ನೀವು ಚಂದುಲಾಲ್' ಎನ್ನುವುದು dramatic ವಸ್ತುವಾಗಿದೆ. ಹಾಗಾಗಿ 'ನಾನು ಚಂದುಲಾಲ್' ಎಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ, 'ನಾನೇ ಚಂದುಲಾಲ್' ಎನ್ನುವ ಬಿಲೀಫ್ ಇರಬಾರದು.

**ಪ್ರಶ್ನಕರ್ತ:** ಹೌದು. ಅದರಿಂದಾಗಿ 'ನಾನು' ಎನ್ನುವ ಪಟ್ಟ ಬಂದುಬಿಡುತ್ತದೆ.

**ದಾದಾಶ್ರೀ:** 'ನಾನು' ಎನ್ನುವುದು 'ತನ್ನ' ಸ್ಥಳದಲ್ಲಿ ಇದ್ದುಬಿಟ್ಟರೆ, ಆಗ ಅದು ಅಹಂಕಾರ ಅಲ್ಲ. ಈ 'ನಾನು' ಎನ್ನುವುದು ಈಗ ತನ್ನ ಮೂಲ ಸ್ಥಾನದಲ್ಲಿ ಇಲ್ಲದೆ, ಆರೋಪಣೆಯ ಸ್ಥಾನದಲ್ಲಿ ಕುಳಿತಿರುವುದರಿಂದ ಅದನ್ನು ಅಹಂಕಾರವೆಂದು ಕರೆಯಲಾಗುತ್ತದೆ. ಆರೋಪಣೆಯ ಸ್ಥಾನದಿಂದ ಈ 'ನಾನು' ಎನ್ನುವುದು ಎದ್ದು ತನ್ನ ಮೂಲ ಸ್ಥಾನಕ್ಕೆ ಬಂದುಬಿಟ್ಟರೆ, ಆಗ ಅಹಂಕಾರವು ಹೊರಟುಹೋಗುತ್ತದೆ. ಇಲ್ಲಿ 'ನಾನು' ಎನ್ನುವುದನ್ನು ಕಿತ್ತೊಗೆಯ ಬೇಕಾಗಿಲ್ಲ, ಕೇವಲ 'ನಾನು' ಎನ್ನುವುದನ್ನು ತನ್ನ 'exact place'ನಲ್ಲಿ (ಯಥಾರ್ಥ ಸ್ಥಾನದಲ್ಲಿ) ಸ್ಥಿರಗೊಳಿಸಬೇಕಾಗಿದೆ.

## 'ತಾನು' ತನ್ನಿಂದಲೇ ಅಪರಿಚಿತನೇ?

ಅನಂತ ಜನ್ಮಗಳಿಂದಲೂ 'ತಾನು' ತನ್ನಿಂದ ಗುಪ್ತವಾಗಿ ಇದ್ದುಬಿಡುವ ಪ್ರಯತ್ನವಾಗಿದೆ. 'ತಾನು' ತನ್ನಿಂದ ಗುಪ್ತವಾಗಿದ್ದು, ಹೊರಗಿನ ಎಲ್ಲವನ್ನೂ ತಿಳಿದಿರುವುದಾಗಿದೆ, ಇದು ಆಶ್ಚರ್ಯಕರವಾಗಿದೆ ಅಲ್ಲವೇ! ಹೀಗೆ ತಾನು, ತನ್ನಿಂದ ಎಷ್ಟು ಸಮಯ ಗುಪ್ತವಾಗಿರುವುದು? ಎಲ್ಲಿಯವರೆಗೆ ಇರುವುದು? 'ತಾನು ಯಾರು?' ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿಯೇ ಈ ಜನ್ಮವಾಗಿದೆ. ಮನುಷ್ಯ ಜನ್ಮವು ಅದನ್ನು ತಿಳಿಯುವುದಕ್ಕಾಗಿಯೇ ಆಗಿದೆ. 'ನಾನು ಯಾರು?' ಎನ್ನುವುದನ್ನು ತಿಳಿದುಕೊಳ್ಳಬೇಕು. ಇಲ್ಲದೆ ಹೋದರೆ, ಅದನ್ನು ತಿಳಿಯುವವರೆಗೂ ಅಲೆದಾಟವೇ ಆಗಿದೆ. 'ನಾನು ಯಾರು?' ಎನ್ನುವುದನ್ನು

ತಿಳಿದುಕೊಳ್ಳಬೇಕು ಅಲ್ಲವೇ? ನೀವು 'ಸ್ವತಃ ಯಾರು?' ಎನ್ನುವುದನ್ನು ತಿಳಿದುಕೊಳ್ಳಬೇಕೋ ಅಥವಾ ಬೇಡವೋ?

## (3) 'I' ಮತ್ತು 'My' ಎನ್ನುವುದನ್ನು ಬೇರೆ ಮಾಡುವ ಪ್ರಯೋಗ!

### Separate 'I' and 'My' (ಬೇರೆ ಮಾಡಿ, ನಾನು ಮತ್ತು ನನ್ನದು ಎನ್ನುವುದನ್ನು)

ನಿಮಗೆ, 'Separate I and My with the Separator' ಎಂದು ಹೇಳಿದರೆ, ಆಗ ನೀವು 'I' and 'My' ಎನ್ನುವುದನ್ನು Separate ಮಾಡಬಲ್ಲಿರಲ್ಲ? 'I' and 'My' ಎನ್ನುವುದನ್ನು Separate ಮಾಡಬೇಕಾಗಿರುವುದು ನಿಜಾ ಅಲ್ಲವೇ? ಜಗತ್ತಿನಲ್ಲಿ ಎಂದಿದ್ದರೂ ಇದನ್ನು ತಿಳಿಯಲೇ ಬೇಕಾಗಿರುವುದಾಗಿದೆ ಅಲ್ಲವೇ? Separate 'I' and 'My'. ಅದು ಹೇಗೆಂದರೆ, ಈ ಹಾಲಿನಿಂದ ಹಾಲಿನ ಕೆನೆಯನ್ನು Separate ಮಾಡಲು Separator ಇರುತ್ತದೆ ಅಲ್ಲವೇ? ಹಾಗೆಯೇ ಇಲ್ಲಿಯೂ ಬೇರ್ಪಡಿಸಬೇಕು.

ನಿಮ್ಮಲ್ಲಿ 'My' ಎನ್ನುವ ಏನೆಲ್ಲಾ ವಸ್ತುಗಳಿವೆ? 'I' ಒಂದೇ ಇದೆಯೋ ಅಥವಾ 'My' ಕೂಡಾ ಜೊತೆಯಲ್ಲಿ ಇದೆಯೋ?

**ಪ್ರಶ್ನಕರ್ತ:** 'My' ಜೊತೆಯಲ್ಲೇ ಇರುತ್ತದೆಯಲ್ಲ!

**ದಾದಾಶ್ರೀ:** ಯಾವ ಯಾವ 'My' ಎನ್ನುವುದಿದೆ ನಿಮ್ಮಲ್ಲಿ?

**ಪ್ರಶ್ನಕರ್ತ:** ನನ್ನ ಮನೆ ಹಾಗು ನನ್ನ ಮನೆಯಲ್ಲಿನ ಎಲ್ಲಾ ವಸ್ತುಗಳು.

**ದಾದಾಶ್ರೀ:** ಎಲ್ಲಾ ನಿಮ್ಮದೇ ಆಗಿದೆಯಾ? ಹಾಗಾದರೆ wife?

**ಪ್ರಶ್ನಕರ್ತ:** ಅವಳು ಕೂಡಾ ನನ್ನವಳೇ.

**ದಾದಾಶ್ರೀ:** ಮತ್ತೆ ಮಕ್ಕಳು?

**ಪ್ರಶ್ನಕರ್ತ:** ಅವರೂ ಸಹ ನನ್ನವರೇ.

**ದಾದಾಶ್ರೀ:** ಕೈಯಲ್ಲಿರುವ ಗಡಿಯಾರ ಯಾರದ್ದು?

**ಪ್ರಶ್ನಕರ್ತ:** ಅದೂ ನನ್ನದೇ.

**ದಾದಾಶ್ರೀ:** ಹಾಗಾದರೆ ಕೈ ಯಾರದ್ದು?

**ಪ್ರಶ್ನಕರ್ತ:** ಕೈ ಕೂಡಾ ನನ್ನದೇ.

**ದಾದಾಶ್ರೀ:** ಆಮೇಲೆ 'ನನ್ನ' ತಲೆ, 'ನನ್ನ' Body, 'ನನ್ನ' ಕಾಲು, 'ನನ್ನ' ಕಿವಿ, 'ನನ್ನ' ಕಣ್ಣುಗಳು ಎಂದೆಲ್ಲಾ ಹೇಳುವುದಾಗಿದೆ. ಈ ಶರೀರದ ಎಲ್ಲಾ ಅಂಗಾಂಗಗಳನ್ನು 'ನನ್ನದು' ಎಂದು ಹೇಳಲಾಗುತ್ತದೆ. ಹಾಗಾದರೆ, 'ನನ್ನದು' ಎಂದು ಹೇಳುತ್ತಿರುವ 'ನೀವು' ಯಾರು? ಇದರ ಬಗ್ಗೆ ಯಾಕೆ ವಿಚಾರ ಮಾಡಿಲ್ಲ? 'My name is Chandulal' ಎಂದು ಹೇಳಿ ಮತ್ತೆ 'ನಾನು ಚಂದುಲಾಲ್' ಎಂದು ಹೇಳುವಾಗ, ಅಲ್ಲಿ ಏನೂ ವಿರೋಧಾಭಾಸವಿದೆ ಎಂದು ಅನ್ನಿಸುವುದಿಲ್ಲವೇ?

**ಪ್ರಶ್ನಕರ್ತ:** ಅನ್ನಿಸುತ್ತದೆ.

**ದಾದಾಶ್ರೀ:** ನೀವು ಚಂದುಲಾಲ್ ಎಂದಾಗ, ಅಲ್ಲಿ 'I' and 'My' ಎರಡೂ ಇದೆ. ಈ 'I' and 'My' ಎನ್ನುವ Railway Line ಎರಡೂ ಬೇರೆ ಬೇರೆಯೇ, Parallel ಆಗಿ ಇರುತ್ತವೆ. ಅವುಗಳು ಎಂದೂ ಒಂದುಗೂಡುವುದೇ ಇಲ್ಲ. ಆದರೆ, ನೀವು ಒಂದೇ ಎಂದು ಭಾವಿಸಿಕೊಂಡಿರುವುದಾಗಿದೆ. ಅದನ್ನು ಈಗ ಅರ್ಥಮಾಡಿಕೊಂಡು 'My' ಎನ್ನುವುದನ್ನು ಬೇರ್ಪಡಿಸಿ ಬಿಡಬೇಕು. ನಿಮ್ಮಲ್ಲಿ ಯಾವುದೆಲ್ಲಾ 'My' ಎನ್ನುವುದಿವೆಯೋ ಅವುಗಳನ್ನು ಒಂದು ಕಡೆ ಇಟ್ಟು ಬಿಡಬೇಕು. 'My Heart' ಎನ್ನುವುದನ್ನು ಪಕ್ಕಕ್ಕೆ ಇಟ್ಟುಬಿಡಿ. ಮತ್ತೆ ಈ ಶರೀರದಲ್ಲಿ ಯಾವುದೆಲ್ಲವನ್ನು separate ಮಾಡಬಹುದು?

**ಪ್ರಶ್ನಕರ್ತ:** ಕಾಲು, ಇಂದ್ರಿಯಗಳು...

**ದಾದಾಶ್ರೀ:** ಹೌದು. ಎಲ್ಲವನ್ನೂ, ಪಂಚೇಂದ್ರಿಯಗಳು, ಐದು ಕರ್ಮೇಂದ್ರಿಯಗಳು. ನಂತರ 'My Mind' ಎಂದು ಹೇಳುತ್ತಾರೋ ಅಥವಾ 'I am Mind' ಹೇಳುತ್ತಾರೋ?

**ಪ್ರಶ್ನಕರ್ತ:** 'My Mind' ಎಂದು ಹೇಳುತ್ತಾರೆ.

**ದಾದಾಶ್ರೀ:** ನನ್ನ ಬುದ್ಧಿ ಎಂದು ಹೇಳುತ್ತಾರೆ ಅಲ್ಲವೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ನನ್ನ ಚಿತ್ತ ಎಂದು ಹೇಳುತ್ತಾರೆ ಅಲ್ಲವೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಆಮೇಲೆ 'My Egoism' ಎಂದು ಹೇಳುತ್ತಾರೋ ಅಥವಾ 'I am Egoism' ಎಂದು ಹೇಳುತ್ತಾರೋ?

**ಪ್ರಶ್ನಕರ್ತ:** 'My Egoism' ಎಂದು ಹೇಳುತ್ತಾರೆ.

**ದಾದಾಶ್ರೀ:** 'My Egoism' ಎಂದು ಹೇಳುವಾಗ, ಅದನ್ನು ಬೇರ್ಪಟ್ಟು ಹೇಳಲು ಎಲ್ಲರಿಗೂ ತಿಳಿಯುತ್ತದೆ. ಆದರೆ, ಅಲ್ಲಿಂದ ಮುಂದಕ್ಕೆ ನಿಮ್ಮ ಭಾಗ ಯಾವುದು ಎನ್ನುವುದನ್ನು ನೀವು ತಿಳಿದಿಲ್ಲ. ಹಾಗಾಗಿ ಅಲ್ಲಿ ನಿಮಗೆ ಸಂಪೂರ್ಣವಾಗಿ separation ಹೊಂದಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ, ನಿಮ್ಮ ತಿಳುವಳಿಕೆಯು ಬಹಳ ಸೀಮಿತವಾಗಿದೆ. ನೀವು ಸ್ಥೂಲ ವಸ್ತುಗಳನಷ್ಟೇ ತಿಳಿದುಕೊಂಡಿರುವುದಾಗಿದೆ, ಆದರೆ, ಸೂಕ್ಷ್ಮವನ್ನು ತಿಳಿದುಕೊಂಡೇ ಇಲ್ಲ. ಅಲ್ಲದೆ ಸೂಕ್ಷ್ಮದ ವಿಂಗಡಣೆಯಲ್ಲಿ ನಂತರ ಇನ್ನೂ 'ಸೂಕ್ಷ್ಮತರ್'ದ ವಿಂಗಡಣೆ. ನಂತರ 'ಸೂಕ್ಷ್ಮತಮ್' ವಿಂಗಡಣೆ ಮಾಡಬೇಕಾಗಿದೆ, ಇದು ಜ್ಞಾನಿ ಪುರುಷರ ಕೆಲಸವಾಗಿದೆ.

ಹೀಗೆ ಒಂದೊಂದಾಗಿ ಎಲ್ಲಾ 'Spare-Part'ಗಳನ್ನು ಬೇರ್ಪಡಿಸುತ್ತಾ ಹೋದಾಗ, 'I' ಹಾಗು 'My' ಎನ್ನುವ ಇವೆರಡನ್ನು ಬೇರ್ಪಡಿಸಲು ಸಾಧ್ಯವಾಗುತ್ತದೆ ಅಲ್ಲವೇ? 'I' and 'My' ಬೇರೆ ಮಾಡುತ್ತಾ ಹೋದರೆ, ಕೊನೆಗೆ ಉಳಿಯುವುದೇನು? 'My' ಎನ್ನುವುದೆಲ್ಲವನ್ನು ಒಂದುಕಡೆ ಇಟ್ಟುಬಿಟ್ಟಾಗ, ಕೊನೆಗೆ ಉಳಿಯುವುದೇನು?

**ಪ್ರಶ್ನಕರ್ತ:** 'I'

**ದಾದಾಶ್ರೀ:** ಹಾ!! ಉಳಿದುಕೊಂಡಿರುವ 'I', ಅದುವೇ ನೀವು! ಅಷ್ಟೇ, 'I' ಎನ್ನುವುದನ್ನು Realise ಮಾಡಿಕೊಳ್ಳಬೇಕು.

**ಪ್ರಶ್ನಕರ್ತ:** ಹೀಗೆ ಎಲ್ಲವನ್ನು separate ಮಾಡಿದ ಮೇಲೆ ತಿಳಿಯಲಾಗುತ್ತದೆ, ಅಲ್ಲಿ ಬಾಕಿ ಉಳಿದಿರುವುದು ಏನಿದೆ ಅದೇ 'ನಾನು' ಎಂದು.

**ದಾದಾಶ್ರೀ:** ಹೌದು, separate ಮಾಡಿದ ಮೇಲೆ ಏನು ಬಾಕಿ ಉಳಿಯುವುದೋ, ಅದು ಸ್ವತಃ ನೀವೇ ಆಗಿರುವಿರಿ. 'I' ಎನ್ನುವುದು ಸ್ವತಃ ನೀವೇ ಆಗಿದ್ದೀರಿ. ಅದನ್ನು ಅರಿತು ಕೊಳ್ಳಬೇಕಾಗಿದೆ ಅಲ್ಲವೇ? ಬಹಳ ಸುಲಭವಾದ ಮಾರ್ಗವಾಗಿದೆ, 'I' and 'My' ಅನ್ನು ಬೇರ್ಪಡಿಸಿಬಿಟ್ಟರೆ ಆಯಿತ್ತಲ್ಲವೇ?

**ಪ್ರಶ್ನಕರ್ತ:** ಇದು ಸುಲಭವಾದ ಮಾರ್ಗವಂತೂ ಹೌದು, ಆದರೆ ಸೂಕ್ಷ್ಮತರ್ ಹಾಗು 'ಸೂಕ್ಷ್ಮತಮ್'ವರೆಗೂ ಬೇರ್ಪಟ್ಟಾಗ ಮಾತ್ರ ಸಾಧ್ಯ ಅಲ್ಲವೇ? ಅದಂತೂ ಜ್ಞಾನಿಗಳಿಂದಲ್ಲದೆ ಮತ್ತೆ ಯಾರಿಂದಲೂ ಸಾಧ್ಯವಿಲ್ಲ ಅಲ್ಲವೇ?

**ದಾದಾಶ್ರೀ:** ಹೌದು, ಜ್ಞಾನಿ ಪುರುಷರು ಬೇರ್ಪಡಿಸುವ ವಿಧಾನವನ್ನು ತೋರಿಸುತ್ತಾರೆ. ಹಾಗಾಗಿಯೇ ನಾವು ಹೇಳುವುದು, *separate* 'I' and 'My' with Gnani's Separator. ಈ Separator ಎನ್ನುವ ಪದವನ್ನು, ಶಾಸ್ತ್ರಗಳನ್ನು ಬಲ್ಲಂತವರು ಏನೆಂದು ಕರೆಯುತ್ತಾರೆ? ಭೇದಜ್ಞಾನವೆಂದು ಕರೆಯುತ್ತಾರೆ. ನಿಮಗೆ ಭೇದಜ್ಞಾನವು ಇಲ್ಲದೆ ಹೋದರೆ, ಹೇಗೆ ಬೇರ್ಪಡಿಸಲು ಸಾಧ್ಯವಾಗುತ್ತದೆ? ಯಾವ ವಸ್ತು ನಿಮ್ಮದು ಹಾಗು ಯಾವುದೆಲ್ಲಾ ನಿಮ್ಮದಲ್ಲ ಎನ್ನುವ ಇವೆರಡರ ಭೇದಜ್ಞಾನವು ನಿಮಗೆ ಇರುವುದಿಲ್ಲ. ಭೇದಜ್ಞಾನ ಎಂದರೆ, ಯಾವುದೆಲ್ಲಾ ನನ್ನೊಂದಿಗಿದೆ ಅವೆಲ್ಲಾ 'ನನ್ನದು' ಹಾಗೂ 'ನಾನು' ಅವುಗಳಿಂದ ಬೇರ್ಪಟ್ಟು ಇರುವುದಾಗಿದೆ. ಅದು, ನಿಮಗೆ ಜ್ಞಾನಿ ಪುರುಷರ ಬಳಿ, ಅವರ ಸಂಪರ್ಕದಲ್ಲಿ ಇದ್ದಾಗ, ಭೇದಜ್ಞಾನವು ಪ್ರಾಪ್ತಿಯಾಗುತ್ತದೆ ಹಾಗೂ ಅದರ ನಂತರ ನಿಮಗೆ ಬೇರ್ಪಟ್ಟು ಇರಲಾಗುತ್ತದೆ.

'I' and 'My' ನಡುವೆ ಭೇದವನ್ನು ಉಂಟುಮಾಡುವುದು, ಇದು ಬಹಳ ಸುಲಭವಾಗಿದೆ ಅಲ್ಲವೇ? ಯಾವ ರೀತಿಯಲ್ಲಿ ನಾನು ಹೇಳುತ್ತಿದ್ದೇನೆ, ಆ ರೀತಿಯಿಂದ ಆಧ್ಯಾತ್ಮವು ಸುಲಭವಾಗಿದೆಯೋ, ಇಲ್ಲವೋ? ಈಗಿನ ಕಾಲದ ಜನರಿಗಂತೂ ಶಾಸ್ತ್ರಗಳನ್ನು ಓದಿಕೊಂಡು ಕುಳಿತುಕೊಳ್ಳುವುದೆಂದರೆ, ಉಸಿರು ಕಟ್ಟಿಬಿಡುತ್ತದೆ.

**ಪ್ರಶ್ನಕರ್ತ:** ಆದರೆ, ಇದನ್ನೆಲ್ಲಾ ತಿಳಿದುಕೊಳ್ಳಬೇಕಿದ್ದರೆ, ನಿಮ್ಮಂಥವರ ಅವಶ್ಯಕತೆಯು ಬಹಳ ಮುಖ್ಯವಾಗಿದೆ ಅಲ್ಲವೇ?

**ದಾದಾಶ್ರೀ:** ಹೌದು ಅವಶ್ಯಕತೆಯಿದೆ, ಅದು ನಿಜ. ಆದರೆ, ಜ್ಞಾನಿ ಪುರುಷರು ಬಹಳ ವಿರಳ! ಇದ್ದರೂ ಅಲ್ಪ ಸಮಯದವರೆಗೆ ಲಭ್ಯವಿರುತ್ತಾರೆ. ಆಗ ನಾವು, ನಮ್ಮ ಕೆಲಸವನ್ನು ಮಾಡಿಕೊಂಡುಬಿಡಬೇಕು. ಜ್ಞಾನಿ ಪುರುಷರ Separator ಅನ್ನು ಒಂದೆರಡು ಗಂಟೆಗಳ ಕಾಲ ಬಂದು ತೆಗೆದುಕೊಂಡು ಹೋಗಬೇಕು, ಅದಕ್ಕೇನು ಬಾಡಿಗೆ ಕೊಡಬೇಕಾಗಿಲ್ಲ! Separator ಸಹಾಯದಿಂದ separate ಮಾಡಿಕೊಂಡು ಬಿಡಬೇಕು. ಆಗಷ್ಟೇ 'I' ಎನ್ನುವುದನ್ನು ಬೇರ್ಪಡಿಸಲು ಸಾಧ್ಯವಾಗುತ್ತದೆ, ಇಲ್ಲದೆ ಹೋದರೆ ಬೇರ್ಪಡಿಸಲು ಸಾಧ್ಯವಾಗುವುದಿಲ್ಲ! 'I'

ಎನ್ನುವುದು ಬೇರ್ಪಟ್ಟರೆ, ನಂತರ ಉಳಿದೆಲ್ಲಾ ಕೆಲಸಗಳು ನೆರವೇರಿದಂತೆ. ಎಲ್ಲಾ ಶಾಸ್ತ್ರಗಳ ತಿರುಳು ಇಷ್ಟೇ ಆಗಿದೆ.

ಆತ್ಮ ಸ್ವರೂಪವನ್ನು ಹೊಂದಬೇಕಿದ್ದರೆ, 'ನನ್ನದು' ಎನ್ನುವುದೆಲ್ಲವನ್ನೂ ಅರ್ಪಣೆ ಮಾಡಬೇಕಾಗುತ್ತದೆ. ಜ್ಞಾನಿ ಪುರುಷರಿಗೆ 'My' ಎನ್ನುವುದೆಲ್ಲವನ್ನು ಅರ್ಪಿಸಿದಾಗ ಮಾತ್ರ, ಈ 'I' ಎನ್ನುವುದೊಂದೇ ಒಂದು ನಿಮ್ಮ ಬಳಿ ಉಳಿಯುತ್ತದೆ. 'I' with 'My' ಎನ್ನುವುದರ ಹೆಸರೇ ಜೀವಾತ್ಮ. 'ನಾನು ಹಾಗು ಅವೆಲ್ಲವೂ ನನ್ನದು' ಎಂದರೆ, ಅದು ಜೀವಾತ್ಮನ ಸ್ಥಿತಿ. ಮತ್ತು 'ನಾನು ಎನ್ನುವುದು ನಿಜಾ ಹಾಗು ನನ್ನದು ಎನ್ನುವುದು ಏನೂ ಇಲ್ಲ' ಎಂದಾಗ ಪರಮಾತ್ಮನ ಸ್ಥಿತಿ! ಅಂದರೆ, ಈ 'My' ಜೊತೆಯಲ್ಲಿ ಇರುವುದರಿಂದಾಗಿ ಮೋಕ್ಷವನ್ನು ಹೊಂದಲಾಗುತ್ತಿಲ್ಲ. 'ನಾನು ಯಾರು?' ಎನ್ನುವ ಅರಿವು ಮೂಡಿದರೆ, ನಂತರ ನನ್ನದು ಎನ್ನುವುದು ಬಿಟ್ಟುಹೋಗುತ್ತದೆ. ನನ್ನದು ಎನ್ನುವುದು ಬಿಟ್ಟುಹೋದರೆ, ಆಗ ಎಲ್ಲವೂ ಬಿಟ್ಟುಹೋಗುತ್ತದೆ.

'My' is Relative department and 'I' is Real. ಅಂದರೆ, 'I' ಎಂದೂ temporary ಅಲ್ಲ, 'I' is permanent. 'My' is temporary. ಹಾಗಾಗಿ, ಅಲ್ಲಿ ನೀವು 'I' ಎನ್ನುವುದನ್ನು ಕಂಡುಕೊಳ್ಳಬೇಕು.

# (4) ಜಗತ್ತಿನಲ್ಲಿ ಮೇಲಧಿಕಾರಿ ಯಾರು?

## ಜ್ಞಾನಿ ಮಾತ್ರವೇ ತೋರಿಸಿಕೊಡಬಲ್ಲರು 'ನಾನು' ಎನ್ನುವುದನ್ನು

**ಪ್ರಶ್ನಕರ್ತ:** 'ನಾನು ಯಾರು?' ಎಂದು ತಿಳಿದುಕೊಳ್ಳಬೇಕಾದ ಯಾವ ವಿಚಾರವಿದೆ, ಅದನ್ನು ಸಂಸಾರದಲ್ಲಿ ಇದ್ದುಕೊಂಡು ತಿಳಿಯಲು ಹೇಗೆ ಸಾಧ್ಯವಾಗುತ್ತದೆ?

**ದಾದಾಶ್ರೀ:** ಹಾಗಾದರೆ ಅದನ್ನು ಎಲ್ಲಿದ್ದುಕೊಂಡು ತಿಳಿಯಲು ಸಾಧ್ಯವಿದೆ? ಸಂಸಾರವನ್ನು ಬಿಟ್ಟು ಮತ್ತೆ ಯಾವುದಾದರು ಸ್ಥಳವೇನಾದರೂ ಇದೆಯೇ ಹೋಗಿ ಇರಲು? ಈ ಜಗತ್ತಿನಲ್ಲಿ ಎಲ್ಲರೂ ಸಂಸಾರಿಗಳೇ ಹಾಗೂ ಎಲ್ಲರೂ ಸಂಸಾರದಲ್ಲಿ ಇರುವವರೇ ಆಗಿದ್ದಾರೆ. ಆದರೆ, ಸಂಸಾರದಿಂದ ಹೊರಪಟ್ಟು ಇಲ್ಲಿ 'ನಾನು ಯಾರು?' ಎನ್ನುವುದನ್ನು ತಿಳಿದುಕೊಳ್ಳಲು ಸಾಧ್ಯವಿದೆ. 'ನೀವು ಯಾರು?' ಎಂದು ತಿಳಿದುಕೊಳ್ಳುವುದಕ್ಕಾಗಿಯೇ ಈ science. ಇಲ್ಲಿಗೆ ಬನ್ನಿ, ನಾವು ನಿಮಗೆ ತೋರಿಸಿಕೊಡುತ್ತೇವೆ.

ನಾವು ನಿಮಗೆ ಏನನ್ನೂ ಸಹ ಮಾಡಬೇಕೆಂದು ಕೇಳುವುದಿಲ್ಲ ಹಾಗೂ ನಿಮ್ಮಿಂದ ಮಾಡಲಾಗುವಂತಹದ್ದೂ ಅಲ್ಲ. ಹಾಗಾಗಿ ನಾವು ನಿಮಗೆ ಏನು ಹೇಳುತ್ತೇವೆಂದರೆ, ನಾವು ನಿಮಗೆ ಎಲ್ಲವನ್ನೂ ಮಾಡಿಕೊಡುತ್ತೇವೆ. ಹಾಗಾಗಿ ನೀವು worry ಮಾಡಿಕೊಳ್ಳುವುದು ಬೇಡ. ಮೊಟ್ಟಮೊದಲು ತಿಳಿದುಕೊಳ್ಳಬೇಕಾಗಿರುವುದೇನೆಂದರೆ, ನಿಜವಾಗಿಯೂ ನಾವು ಯಾರು ಹಾಗು ಅದನ್ನು ತಿಳಿಯಬೇಕಾಗಿರುವುವಂತಹದ್ದೇ? ನಿಜವಾದ ವಿಚಾರ ಏನು? Correctness ಏನು? ಈ World ಏನು? ಇವೆಲ್ಲವೂ ಏನು? ಪರಮಾತ್ಮ ಅಂದರೆ ಯಾರು?

ಪರಮಾತ್ಮ ಇದ್ದಾನೆಯೇ? ಎಂಬ ಪ್ರಶ್ನೆಗೆ ಉತ್ತರ, 'ಪರಮಾತ್ಮ ಇದ್ದಾನೆ ಹಾಗು ಅವನು ನಿಮ್ಮ ಬಳಿಯಲ್ಲೇ ಇದ್ದಾನೆ, ಹೊರಗೆ ಯಾಕೆ ಹುಡುಕುತ್ತೀರಿ?' ಆದರೆ, ಯಾರಾದರೂ ಅವನ ಮನೆಯ ದ್ವಾರವನ್ನು ತೆರೆದುಕೊಟ್ಟರೆ ಅಲ್ಲವೇ ನಮಗೆ ದರ್ಶನ ಮಾಡಲು ಸಾಧ್ಯ! ಆ ಬಾಗಿಲು ಬಹಳ ಭದ್ರವಾಗಿ ಮುಚ್ಚಿಕೊಂಡಿದೆ, ಅದನ್ನು ನಾವಾಗಿಯೇ ತೆರೆಯಲು ಹೋದರೆ ಎಂದಿಗೂ ಸಾಧ್ಯವಾಗುವಂತಹದ್ದಲ್ಲ. ಅದೇನಿದ್ದರೂ ಯಾರು ಈ ಭವಸಾಗರದಿಂದ ಪಾರಾಗಿರುತ್ತಾರೋ ಅಂಥವರು ಮಾತ್ರ ಇತರರನ್ನು ಪಾರುಮಾಡಲು ಸಾಧ್ಯ. ಹಾಗಾಗಿ ಆ ಕೆಲಸವೇನಿದ್ದರೂ ಜ್ಞಾನಿ ಪುರುಷರದ್ದೇ ಆಗಿದೆ.

## ತನ್ನ ತಪ್ಪುಗಳೇ ತನ್ನ ಮೇಲಿರುವ ಅಧಿಕಾರಿ

ಭಗವಂತ ಎನ್ನುವುದು ನಿಮ್ಮದೇ ಸ್ವರೂಪವಾಗಿದೆ. ನಿಮ್ಮ ಮೇಲೆ ಯಾರೂ ಇಲ್ಲ, ಮೇಲೆ ಯಾರ ಅಪ್ಪನೂ ಇಲ್ಲ. ನಿಮಗೆ ಯಾರು ಏನೂ ಮಾಡಲು ಸಾಧ್ಯವಿಲ್ಲ. ನೀವು ಸ್ವತಂತ್ರವಾಗಿಯೇ ಇದ್ದೀರಿ, ಆದರೆ ಕೇವಲ ನಿಮ್ಮ ತಪ್ಪುಗಳಿಂದ ನೀವು ಬಂಧಿತರಾಗಿದ್ದೀರಿ.

ನಿಮ್ಮ ಮೇಲೆ ಯಾರೂ ಇಲ್ಲ ಹಾಗು ನಿಮಗೆ ಯಾವ ಜೀವಿಯೂ ಅಡ್ಡಿ ಪಡಿಸಲು ಬರುವುದಿಲ್ಲ. ಇಷ್ಟೊಂದೆಲ್ಲಾ ಜೀವಿಗಳಿವೆ, ಆದರೆ ಯಾವುದೇ ಜೀವಿಯು ನಿಮಗೆ ಅಡಚಣೆಯನ್ನು ಉಂಟುಮಾಡುವುದಿಲ್ಲ. ಅಲ್ಲದೆ ನಿಮಗೆ ಯಾರಿಂದಲಾದರೂ ಹಸ್ತಕ್ಷೇಪವು ಉಂಟಾದರೂ, ಅದು ನಿಮ್ಮ ತಪ್ಪಿನಿಂದಲ್ಲೇ ಉಂಟಾಗಿರುವುದಾಗಿದೆ. ನಿಮ್ಮಿಂದ ಈ ಹಿಂದೆ ಮಾಡಲಾಗಿರುವ ಹಸ್ತಕ್ಷೇಪದಿಂದ ಈಗ ಅದರ ಫಲವು ನಿಮಗೆ ಬಂದಿದೆ. ಇದನ್ನು ನಾನು ಸ್ವತಃ ನೋಡಿ, ತಿಳಿದು ಹೇಳುತ್ತಿರುವುದಾಗಿದೆ.

ನಮ್ಮ ಈ ಎರಡೇ ವಾಕ್ಯಗಳಿಂದ ಗ್ಯಾರೆಂಟಿ ನೀಡುವಾಗ, ಮನುಷ್ಯನು ಮುಕ್ತನಾಗಿ ಇದ್ದುಬಿಡಬಹುದು. ನಾವು ಹೇಳುವುದೇನೆಂದರೆ,

'ಇಡೀ ಪ್ರಪಂಚದಲ್ಲಿ ನಿಮ್ಮ ಮೇಲೆ ಯಾರೂ ಇಲ್ಲ. ಇರುವುದೆಲ್ಲಾ ನಿಮ್ಮ blunders ಹಾಗು ನಿಮ್ಮ mistakes. ಈ ಎರಡು ಇಲ್ಲದೆ ಹೋದರೆ ನೀವೇ ಪರಮಾತ್ಮ!'

ಅಲ್ಲದೆ 'ನಿಮಗೆ ಯಾರಿಂದಲೂ ಕಿಂಚಿತ್ತೂ ಹಸ್ತಕ್ಷೇಪವು ಉಂಟಾಗಲು ಸಾಧ್ಯವಿಲ್ಲ. ಯಾವ ಜೀವಿಯೂ ಯಾವ ಜೀವಿಗೂ ಕಿಂಚಿತ್ತೂ ಕೂಡಾ ಹಸ್ತಕ್ಷೇಪವನ್ನು ಮಾಡಬಲ್ಲ ಸ್ಥಿತಿಯಲ್ಲೇ ಇಲ್ಲ. ಇದು ಅಂತಹ ಜಗತ್ತು!'

ಈ ಎರಡು ವಾಕ್ಯಗಳು ಎಲ್ಲಾ ರೀತಿಯಿಂದಲೂ ಮನುಷ್ಯನಿಗೆ ಸಮಾಧಾನವನ್ನು ನೀಡುತ್ತವೆ.

# 5) ಜಗತ್ತಿನಲ್ಲಿ ಕರ್ತನು ಯಾರು?

## ಜಗತ್ತಿನಲ್ಲಿ ಕರ್ತನ ವಾಸ್ತವಿಕತೆ

ವಸ್ತುವಿನ Fact (ನಿಜ ಸ್ಥಿತಿಯನ್ನು) ತಿಳಿಯದೆ ಇರುವುದರಿಂದಾಗಿಯೇ ಈ ಎಲ್ಲವೂ ಗೊಂದಲಮಯವಾಗಿರುವುದು. ಈಗ ನಮಗೆ ಯಾವುದು ತಿಳಿದಿದೆ ಅದನ್ನೇ ಮತ್ತೆ ತಿಳಿಯಬೇಕಾಗಿದೆಯೋ ಅಥವಾ ಯಾವುದು ತಿಳಿದಿಲ್ಲವೋ ಅದನ್ನು ತಿಳಿಯಬೇಕಾಗಿದೆಯೋ?

ಜಗತ್ತು ಅಂದರೆ ಏನು? ಅದು ಹೇಗೆ ಉಂಟಾಗಿದೆ? ಯಾರು ಮಾಡಿದರು? ನಮಗೆ ಈ ಜಗತ್ತಿನೊಂದಿಗೆ ಏನು ಲೇವಾದೇವಿ? ನಮ್ಮ ಸುತ್ತಮುತ್ತಲಿರುವ ಸಂಬಂಧಿಕರೊಂದಿಗೆ ಯಾವ ರೀತಿಯ ಲೇವಾದೇವಿ? ಯಾವುದರ ಆಧಾರದ ಮೇಲೆ business? ನಾನು ಮಾಡುತ್ತಿರುವುದೋ ಅಥವಾ ಮಾಡುವವರು ಬೇರೆಯಾರಾದರೂ ಇದ್ದಾರೆಯೋ? ಇದನ್ನೆಲ್ಲಾ ತಿಳಿದುಕೊಳ್ಳಬೇಕಾದ ಅಗತ್ಯವಿರುವುದು ನಿಜ ಅಲ್ಲವೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಹಾಗಾಗಿ, ಇವುಗಳಲ್ಲಿ ಮೊಟ್ಟಮೊದಲಿಗೆ ಏನನ್ನು ತಿಳಿದುಕೊಳ್ಳಬೇಕೆನ್ನುವುದರ ಬಗ್ಗೆ ಮಾತನಾಡೋಣ. ಈ ಜಗತ್ತನ್ನು ಯಾರು ಸೃಷ್ಟಿಸಿರಬಹುದೆಂದು ನಿಮಗೆ ಅನ್ನಿಸುತ್ತದೆ? ಯಾರು ಮಾಡಿರಬಹುದು ಇಂತಹ ಗೊಂದಲಮಯ ಜಗತ್ತನ್ನು? ನಿಮ್ಮ ಅನಿಸಿಕೆ ಏನು?

**ಪ್ರಶ್ನಕರ್ತ:** ಈಶ್ವರನೇ ಸೃಷ್ಟಿಸಿರಬಹುದು.

**ದಾದಾಶ್ರೀ:** ಹಾಗಿದ್ದರೆ, ಇಡೀ ಜಗತ್ತನ್ನು ಚಿಂತೆಗೆ ಒಳಗಾಗುವಂತೆ ಯಾಕೆ ಮಾಡಲಾಗಿದೆ? ಚಿಂತೆಯಿಂದ ಹೊರಗೆ ಅವಸ್ಥೆಯೇ ಇಲ್ಲ.

**ಪ್ರಶ್ನಕರ್ತ:** ಎಲ್ಲರೂ ಚಿಂತೆ ಮಾಡುವುದೇ ಆಗಿದೆಯಲ್ಲ?

**ದಾದಾಶ್ರೀ:** ಹೌದು, ಅವನು ಸೃಷ್ಟಿಸಿದ್ದೇ ಆಗಿದ್ದರೆ, ಚಿಂತೆಯಿಂದ ಕೂಡಿರುವಂತಹದ್ದನ್ನು ಯಾಕಾಗಿ ಮಾಡಬೇಕಿತ್ತು? ಅವನನ್ನು ಹಿಡಿದುಕೊಂಡು ಬಂದು, 'ಸಿ.ಬಿ.ಐ'ಗೆ ಒಪ್ಪಿಸಬೇಕು! ಆದರೆ, ಇದರಲ್ಲಿ ಭಗವಂತ ತಪ್ಪಿತಸ್ಥನಲ್ಲವೇ ಅಲ್ಲ. ಅದೇನಿದ್ದರೂ ಈ ಲೋಕದ ಜನರು ಅವನನ್ನು ತಪ್ಪಿತಸ್ಥನನ್ನಾಗಿ ಮಾಡಿದ್ದಾರೆ.

ವಾಸ್ತವಿಕವಾಗಿ ನೋಡಿದರೆ 'God is not creator of this world at all, only Scientific Circumstantial Evidence'ನಿಂದ ಎಲ್ಲಾ ಆಗಿದೆ. ಅಂದರೆ ಈ ಎಲ್ಲವೂ ಪ್ರಕೃತಿಯ ರಚನೆಯಾಗಿದೆ. ಅದನ್ನು ಗುಜರಾತಿ ಭಾಷೆಯಲ್ಲಿ ನಾನು 'ವ್ಯವಸ್ಥಿತ್ ಶಕ್ತಿ' ಎಂದು ಹೇಳುತ್ತೇನೆ. ಇದೆಲ್ಲಾ ಬಹಳ ಸೂಕ್ಷ್ಮದ ವಿಚಾರವಾಗಿದೆ.

## ಅದನ್ನು ಮೋಕ್ಷವೆಂದು ಕರೆಯಲು ಸಾಧ್ಯವೇ ಇಲ್ಲ

ಚಿಕ್ಕಮಕ್ಕಳಿನಿಂದ ಹಿಡಿದು ದೊಡ್ಡ ದೊಡ್ಡ ಸಾಧು ಸಂತರು ಕೂಡಾ ಹೇಳುವುದೇನೆಂದರೆ, 'ಎಲ್ಲಾ ಭಗವಂತನ ಸೃಷ್ಟಿ' ಎಂದು. ಆದರೆ ಆ ಮಾತು ಲೌಕಿಕವಾಗಿದೆ, ಅದು ಅಲೌಕಿಕವಲ್ಲ.

ಭಗವಂತ ಏನಾದರೂ creator ಆಗಿದ್ದರೆ, ಆಗ ಅವನು ಶಾಶ್ವತವಾಗಿ ನಮ್ಮ ಮೇಲೆ ಇರಬೇಕಾಗಿತ್ತು. ಆಗ ಮೋಕ್ಷ ಎನ್ನುವ ವಸ್ತುವೇ ಇರುತ್ತಿರಲಿಲ್ಲ. ಆದರೆ ಮೋಕ್ಷ ಎನ್ನುವುದು ಇದೆ. ಭಗವಂತ creator ಅಲ್ಲ. ಮೋಕ್ಷವನ್ನು ತಿಳಿದಿರುವ ವ್ಯಕ್ತಿಗಳು ಭಗವಂತನನ್ನು creator ರೀತಿಯಲ್ಲಿ ಒಪ್ಪಿಕೊಳ್ಳುವುದೇ ಇಲ್ಲ. 'ಮೋಕ್ಷ' ಹಾಗು 'ಭಗವಂತನು creator' ಎನ್ನುವ ಇವೆರಡು ವಿರೋಧಾಭಾಸದ ಮಾತಾಗಿವೆ. Creator ಎಂದಮೇಲೆ ಸದಾಕಾಲ ರಕ್ಷಕನಾಗಿಯೇ ಇರಬೇಕಾಗುತ್ತದೆ ಹಾಗೂ ರಕ್ಷಕನಾದರೆ ಕೊನೆಯವರೆಗೂ ನಿಮ್ಮ ಮೇಲೆ ಅಧಿಕಾರಿಯಾಗಿ ಇರುವುದೇ ಆಗಿದೆ. ಹಾಗಿದ್ದಾಗ, ನೀವು ಮೋಕ್ಷಕ್ಕೆ ಹೋದರೂ, ಅಲ್ಲಿಯೂ ಸಹ ನಿಮ್ಮ ಮೇಲಿನ ಅಧಿಕಾರಿಯಾಗಿಯೇ ಇದ್ದರೆ, ನಿಮಗೆ ಎಲ್ಲಿ ಮೋಕ್ಷ ಸಿಕ್ಕಿದಂತಾಯಿತು?

**ಪ್ರಶ್ನಕರ್ತ:** ಹೌದು. ಖಾಯಂ ಅವನೇ ಮೇಲಧಿಕಾರಿಯಾದಂತಾಯಿತು.

**ದಾದಾಶ್ರೀ:** ಅವನೇ ಖಾಯಂ Boss. ಆಗ ನಿಮಗೆ ಎಲ್ಲಿ ಮೋಕ್ಷ ಸಿಗುತ್ತದೆ? ಹಾಗಾಗಿ ಅದನ್ನು ಮೋಕ್ಷವೆಂದು ಕರೆಯಲು ಸಾಧ್ಯವೇ ಇಲ್ಲ.

## ಹಾಗಾದರೆ ಭಗವಂತನನ್ನು ಯಾರು ಸೃಷ್ಟಿಸಿದರು?

ಭಗವಂತ ಈ ಎಲ್ಲವುಗಳ ಸೃಷ್ಟಿಕರ್ತ ಎಂದು ನಾವು ಈ ಅಲೌಕಿಕದ ರೀತಿಯಿಂದ ಹೇಳಲು ಹೋದರೆ, ಆಗ ಲಾಜಿಕಲ್ ಜನರು ನಮ್ಮನ್ನು ಕೇಳುತ್ತಾರೆ, 'ಭಗವಂತನನ್ನು ಸೃಷ್ಟಿಸಿದವರು ಯಾರು?' ಎಂದು. ಹೀಗೆಲ್ಲಾ ಪ್ರಶ್ನೆಗಳು ಉದ್ಭವಿಸುತ್ತವೆ. ಜನರು ನನ್ನೊಂದಿಗೆ ಮಾತನಾಡುವಾಗ ಹೇಳುತ್ತಾರೆ, 'ನಮಗೆ ಅನ್ನಿಸುತ್ತದೆ ಭಗವಂತನೇ ಜಗತ್ತಿನ ಕರ್ತ, ನೀವು ನೋಡಿದರೆ, ಭಗವಂತ ಕರ್ತನಲ್ಲ ಎಂದು ಹೇಳುತ್ತೀರಿ, ಈ ನಿಮ್ಮ ಮಾತಿನಲ್ಲಿ ನಂಬಿಕೆ ಬರುತ್ತಿಲ್ಲ' ಎಂದು. ಆಗ, ನಾನು ಅವರಿಗೆ ಕೇಳುತ್ತೇನೆ, 'ಆಯಿತು, ನಾನು ಒಪ್ಪಿಕೊಳ್ಳುತ್ತೇನೆ ಭಗವಂತನೇ ಕರ್ತ. ಹಾಗಾದರೆ, ಭಗವಂತನನ್ನು ಸೃಷ್ಟಿಸಿದವರು ಯಾರು? ಅದನ್ನು ನೀವು ನನಗೆ ಹೇಳಿ.' ಈ ಸೃಷ್ಟಿಸುವವನನ್ನು ಯಾರು ಸೃಷ್ಟಿಸಿದವರು? ಯಾರಾದರು ಕರ್ತನಾದರೆ, ಆಗ ಅವನ ಕರ್ತ ಮತ್ತೊಬ್ಬ ಇರಲೇಬೇಕು, ಎನ್ನುವುದು ಲಾಜಿಕ್ ಆಗಿದೆ. ಹೀಗಾಗಿ ಅದಕ್ಕೆ ಕೊನೆಯನ್ನುವುದು ಬರುವುದೇ ಇಲ್ಲ, ಆದುದರಿಂದ ಇದು ಸರಿಯಾದ ಉತ್ತರವಲ್ಲ.

## ಆದಿ, ಅಂತ್ಯಗಳಿಲ್ಲದ ಜಗತ್ತು...

ಈ ಜಗತ್ತು ಯಾರು ಸೃಷ್ಟಿಸದೆ ಸೃಷ್ಟಿಯಾಗಿದೆ. ಯಾರೂ ಸೃಷ್ಟಿಸಿಲ್ಲವೆಂದಾದರೆ, ಈಗ ನಾವು ಯಾರನ್ನು ಕೇಳಬೇಕು? ನಾನೂ ಕೂಡಾ ಕೂಡಾ ಹುಡುಕುತ್ತಲೇ ಇದ್ದೆ, 'ಯಾರು ಇದಕ್ಕೆ ಹೊಣೆಗಾರ ಹಾಗು ಯಾರು ಈ ಎಲ್ಲಾ ದಾಂದಲೆಗಳನ್ನು ಮಾಡುತ್ತಿರುವುದು?!' ಎಂದು, ನಾನು ಎಲ್ಲಾ ಕಡೆ ಹುಡುಕಾಡಿದೆ ಎಲ್ಲಿಯೂ ಸಿಗಲಿಲ್ಲ.

ನಾನು 'ಫಾರಿನ್ ಸೈಂಟಿಸ್ಟ್'ನವರಿಗೆ ಹೇಳಿದೆ, 'ಗಾಡ್ ಕ್ರಿಯೇಟರ್ ಎನ್ನುವುದು ನಿಮಗೆ ಸಾಭೀತಾಗಿದ್ದರೆ, ನೀವು ನನ್ನೊಂದಿಗೆ ಸ್ವಲ್ಪ ವಿಚಾರ ವಿಮರ್ಷೆ ಮಾಡಬೇಕು. ಅದೇನೆಂದರೆ, ಅವನೇನಾದರೂ ಕ್ರಿಯೇಟರ್ ಆಗಿದ್ದರೆ, ಅವನು ಯಾವ ವರ್ಷ ಕ್ರಿಯೇಟ್ ಮಾಡಿದ ಎನ್ನುವುದನ್ನು ನನಗೆ ಹೇಳಿ.' ಆಗ ಅವರು, 'ಯಾವ ವರ್ಷ ಎನ್ನುವುದು ನಮಗೆ ಗೊತ್ತಿಲ್ಲ,' ಎಂದು ಉತ್ತರಿಸಿದರು. 'ಆದರೂ ಅದರ ಬಿಗಿನಿಂಗ್ ಆಗಿದೆಯೋ ಇಲ್ಲವೋ?' ಎಂದು ನಾನು ಕೇಳಿದಾಗ ಅವರು ಹೇಳುತ್ತಾರೆ, 'ಹೌದು ಬಿಗಿನಿಂಗ್ ಆಗಿಹೋಗಿದೆ, ಕ್ರಿಯೇಟರ್ ಎಂದ ಮೇಲೆ ಬಿಗಿನಿಂಗ್ ಆಗಿರಲೇ ಬೇಕು!' ಯಾವುದಕ್ಕೆ ಬಿಗಿನಿಂಗ್ ಆಗುತ್ತದೆ, ಅದಕ್ಕೆ ಎಂಡ್ ಬರುತ್ತದೆ. ಆದರೆ, ಇದು ಎಂಡ್ ಇಲ್ಲದೆ ಇರುವಂತಹ ಜಗತ್ತು. ಬಿಗಿನಿಂಗ್ ಅನ್ನುವುದೇ ಇಲ್ಲದಿರುವಾಗ, ನಂತರ ಎಂಡ್ ಅನ್ನುವುದು ಎಲ್ಲಿಂದ ಬರಬೇಕು? ಈ ಜಗತ್ತು ಅನಾದಿ

ಅನಂತವಾಗಿದೆ. ಇದರ ಬಿಗಿನಿಂಗ್ ಅನ್ನುವುದು ಇಲ್ಲದಿರುವಾಗ, ಇನ್ನು ಅದನ್ನು ಸೃಷ್ಟಿಸಿದವನು ಇರಲು ಸಾಧ್ಯವಿಲ್ಲವೆಂದು ನಿಮಗೆ ಅನ್ನಿಸುವುದಿಲ್ಲವೇ?

## ಭಗವಂತನ ನಿಜವಾದ ವಿಳಾಸ

ಹಾಗಾದರೆ, ಭಗವಂತ ಎನ್ನುವವನು ಇಲ್ಲವೇ? ಎಂದು ಆ ಫಾರಿನ್ ಸೈಂಟಿಸ್ಟ್ ನನ್ನನ್ನು ಪ್ರಶ್ನಿಸಿದರು. ಆಗ ನಾನು ಹೇಳಿದೆ, 'ಭಗವಂತ ಇಲ್ಲದೆ ಹೋಗಿದ್ದರೆ, ಪ್ರಪಂಚದಲ್ಲಿ ಕಾಣಲು ಸಿಗುವ ಭಾವನೆಗಳು ಅಥವಾ ಸುಖ ಹಾಗು ದುಃಖಗಳ ಅನುಭವವನ್ನು ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಅವುಗಳು ಅನುಭವಕ್ಕೆ ಬರುವುದರಿಂದ ಭಗವಂತ ನಿಜವಾಗಿ ಇದ್ದಾನೆ ಎನ್ನುವುದು ಖಚಿತವಾಗುತ್ತದೆ.' ನಂತರ ಅವರು ನನ್ನನ್ನು ಪ್ರಶ್ನಿಸಿದರು, 'ಭಗವಂತ ಎಲ್ಲಿ ವಾಸಮಾಡುತ್ತಾನೆ?' ನಾನು ಕೇಳಿದೆ, 'ನಿಮಗೆ ಏನು ಅನ್ನಿಸುತ್ತದೆ?' ಆಗ ಅವರು 'ಮೇಲೆ' ಎಂದು ಉತ್ತರಿಸಿದರು. ನಂತರ ನಾನು ಪ್ರಶ್ನಿಸಿದೆ, 'ಮೇಲೆ ಅಂದರೆ ಎಲ್ಲಿ ಇರುವನು? ಯಾವ ಬೀದಿ, ಆ ಬೀದಿಯ ಸಂಖ್ಯೆ ಎಷ್ಟು? ನಿಮಗೆ ಆ ಬೀದಿ ತಿಳಿದಿದೆಯೇ? ಪತ್ರ ಬರೆದರೆ ತಲುಪಬಹುದಾದ ಸರಿಯಾದ ವಿಳಾಸವಿದೆಯೇ ನಿಮ್ಮ ಹತ್ತಿರ?' ಅಲ್ಲಿ ಮೇಲಂತೂ ಯಾರ ಅಪ್ಪನೂ ಇಲ್ಲ. ಎಲ್ಲೆಡೆ ನಾನು ಹೋಗಿ ಬಂದಿದ್ದೇನೆ. ಎಲ್ಲಾ ಜನರು ಹೇಳುತ್ತಿದ್ದರು ಮೇಲೆ ಇದ್ದಾನೆ, ಮೇಲೆ ಬೆರಳು ತೋರಿಸುತ್ತಿದ್ದರು. ಆಗ ನನಗೆ ಮನಸ್ಸಿನಲ್ಲಿ ಅನ್ನಿಸುತ್ತಿತ್ತು, 'ಹೀಗೆ ಎಲ್ಲರು ಹೇಳುವಾಗ ಏನಾದರು ಇರಲೇ ಬೇಕು' ಎಂದು. ಆದುದರಿಂದ ನಾನು ಮೇಲೆ ಎಲ್ಲಾ ಕಡೆ ತಪಾಸಣೆ ಮಾಡಿಕೊಂಡು ಬಂದೆ. ಆದರೆ, ಮೇಲೆ ಖಾಲಿ ಆಕಾಶ ಮಾತ್ರವೇ ಇದೆ, ಮೇಲೆ ಯಾರೂ ಸಿಗಲಿಲ್ಲ. ಮೇಲೆ ಯಾರ ವಾಸವೂ ಇಲ್ಲ. ಆಗ ಫಾರಿನ್ ಸೈಂಟಿಸ್ಟ್ ನನ್ನನ್ನೇ ಕೇಳುತ್ತಾರೆ, 'ಭಗವಂತನ ನಿಜವಾದ ವಿಳಾಸ ತಿಳಿಸಿಕೊಡುವಿರಾ?' ಎಂದು. ನಾನು ಅವರಿಗೆ ಬರೆದು ಕೊಳ್ಳಲು ಹೇಳಿದೆ, 'God is in every creature whether visible or invisible, not in creation.'

ಈ ಟೇಪ್ ರೆಕಾರ್ಡರ್ ಇದೆಯಲ್ಲ, ಇದನ್ನು ಕ್ರಿಯೇಷನ್ ಎಂದು ಕರೆಯಲಾಗುತ್ತದೆ. ಎಷ್ಟೆಲ್ಲಾ Man made ವಸ್ತುಗಳಿವೆ, ಮನುಷ್ಯರಿಂದ ತಯಾರಿಸಲ್ಪಟ್ಟ ವಸ್ತುಗಳೇನಿವೆ ಅವುಗಳಲ್ಲಿ ಭಗವಂತನು ಇರುವುದಿಲ್ಲ. ಪ್ರಕೃತಿಯ ರಚನೆಯಲ್ಲಿ ಭಗವಂತನಿದ್ದಾನೆ.

# ಅನುಕೂಲತೆಯ ಸಿದ್ಧಾಂತ

ಇವೆಲ್ಲವೂ Scientific Circumstantial Evidence ಆಗಿದೆ. ಬಹಳಷ್ಟು ಸಂಯೋಗಗಳು ಒಂದುಗೂಡಿದಾಗ ಒಂದು ಕಾರ್ಯವಾಗುತ್ತದೆ. ಆಗ ಅದರಲ್ಲಿ 'Egoism'ನಿಂದ, 'ನಾನು ಮಾಡಿದೆ' ಎಂದು ಹೇಳಿಕೊಳ್ಳುವುದಾಗಿದೆ. ಅದೂ ಸಹ ಅಲ್ಲಿ ಎಲ್ಲಾ ಸರಿಯಿದ್ದರೆ, 'ನಾನು ಮಾಡಿದೆ' ಎಂದು ಹೇಳುವುದಾಗಿದೆ ಹಾಗು ಸರಿಯಿಲ್ಲದೆ ಹೋದರೆ, 'ಸಂಯೋಗಗಳು ಈಗ ನನಗೆ ಸರಿಯಾಗಿ ಹೊಂದಿಕೊಂಡು ಬರುತ್ತಿಲ್ಲ' ಎಂದು. ಹಾಗೆ ನಮ್ಮ ಜನರು ಹೇಳುತ್ತಾರಲ್ಲವೇ! ಸಂಯೋಗಗಳ ಬಗ್ಗೆ ಒಪ್ಪಿಕೊಳ್ಳುತ್ತಾರಲ್ಲವೇ, ನಮ್ಮ ಜನರು?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** ಸಂಪಾದಿಸಿದರೆ, ಆಗ ಅದರ ಗರ್ವವನ್ನು ತಾನು ಮಾತ್ರ ಸ್ವೀಕರಿಸುವುದಾಗಿದೆ ಹಾಗು ಕಳೆದುಕೊಂಡಾಗ ಅದಕ್ಕೊಂದು ನೆಪ ಹುಡುಕುವುದಾಗಿದೆ. ನಾವು, 'ಯಾಕೆ ಯಜಮಾನರೇ, ಈಗ ಹೀಗಾಗಿ ಹೋಯಿತು?' ಎಂದರೆ, ಅವರು ಹೇಳುತ್ತಾರೆ, 'ಭಗವಂತ ಮುನಿಸಿಕೊಂಡಿದ್ದಾನೆ.'

**ಪ್ರಶ್ನಕರ್ತ:** ಅನುಕೂಲತೆಯ ಸಿದ್ಧಾಂತವಾಗಿದೆ.

**ದಾದಾಶ್ರೀ:** ಹೌದು, ತನ್ನ ಅನುಕೂಲತೆಗೆ ತಕ್ಕಂತೆ ಮಾತನಾಡುವುದಾಗಿದೆ. ಆದರೆ, ಹಾಗೆಲ್ಲಾ ಆರೋಪಣೆಯನ್ನು ಭಗವಂತನ ಮೇಲೆ ಹೊರಿಸುವುದು ಸರಿಯಲ್ಲ. ವಕೀಲರ ಮೇಲೆ ಆರೋಪಣೆಯನ್ನು ಮಾಡಿ ಅಥವಾ ಬೇರೆ ಯಾರ ಮೇಲಾದರೂ ಆರೋಪವನ್ನು ಹೊರಿಸಿದರೂ ಪರವಾಗಿಲ್ಲ. ಆದರೆ ಭಗವಂತನ ಮೇಲೆ ಆರೋಪವನ್ನು ಹೊರಿಸಲಾಗುತ್ತದೆಯೇ?! ವಕೀಲರ ವಿಚಾರದಲ್ಲಿ ವಕೀಲರಂತೂ ಮೊಕದ್ದಮೆ ಹೂಡಿ ಸಾಧಿಸಿಕೊಳ್ಳುತ್ತಾರೆ. ಆದರೆ ಇಲ್ಲಿ ಭಗವಂತನ ಮೇಲೆ ಹೊರೆಸಿರುವ ಆರೋಪಕ್ಕೆ ಯಾರು ದಾವೆ ನಡೆಸಲಾಗುತ್ತದೆ? ಅದರ ಪ್ರತಿಫಲವನ್ನು ಆರೋಪ ಹೊರಸಿದವರೇ ಮುಂದಿನ ಜನ್ಮದಲ್ಲಿ ಭಯಂಕರವಾದ ಬಂಧನಕ್ಕೆ ಒಳಗಾಗಬೇಕಾಗುತ್ತದೆ. ಭಗವಂತನ ಹೆಸರು ಹೇಳಿ ಆರೋಪಣೆ ಮಾಡುವುದು ಸರಿಯೇ?

**ಪ್ರಶ್ನಕರ್ತ:** ಇಲ್ಲ, ಮಾಡಬಾರದು.

**ದಾದಾಶ್ರೀ:** ಹಾಗಿಲ್ಲದಿದ್ದರೆ, ಹೀಗೆಂದು ಹೇಳುತ್ತಾರೆ, 'stars favourable ಇಲ್ಲ' ಅಥವಾ 'ಸಹಭಾಗಿಗಳು ಸರಿ ಇಲ್ಲ' ಎನ್ನುತ್ತಾರೆ. ಅಥವಾ ವ್ಯಾಪಾರದಲ್ಲಿನ ಪಾಲುದಾರರ ತಪ್ಪನ್ನು ತೋರಿಸುತ್ತಾರೆ ಅಥವಾ ಕೊನೆಗೆ 'ಮನೆಗೆ ಬಂದಿರುವ ಸೊಸೆಯ ಕಾಲ್ಗುಣವೇ ಸರಿಯಿಲ್ಲ'

ಎಂದು ಹೇಳಿ, ತನ್ನ  ಮೇಲೆ ಆರೋಪ ಬಾರದಂತೆ ನೋಡಿಕೊಳ್ಳುತ್ತಾರೆ! ತನ್ನದೇ ತಪ್ಪೆಂದು ಎಂದಿಗೂ ಸ್ವೀಕಾರ ಮಾಡುವುದಿಲ್ಲ. ಇದರ ಬಗ್ಗೆ ಒಬ್ಬ Foreigner ಜೊತೆ ನನ್ನ ಮಾತುಕತೆ ನಡೆದಿತ್ತು. ಅವರು ಕೇಳಿದರು, 'ನಿಮ್ಮ Indians ತಪ್ಪನ್ನು ಯಾಕೆ ಒಪ್ಪಿಕೊಳ್ಳುವುದಿಲ್ಲ?' ಎಂದು. ಅದಕ್ಕೆ ನಾನು ಹೇಳಿದೆ, 'ಇದೇ Indian Puzzle, ಅತಿ ದೊಡ್ಡ puzzle ಇಂಡಿಯಾದಲ್ಲಿ ಇದೇ ಆಗಿದೆ.'

## Scientific Circumstantial Evidence

ಮಾತುಕತೆ ನಡೆಸಬೇಕು. ಏನೆಲ್ಲಾ ಕೇಳಬೇಕೆನ್ನಿಸುತ್ತದೆಯೋ ಅವೆಲ್ಲಾ ವಿಚಾರಗಳ ಬಗ್ಗೆ ಮಾತುಕತೆಯನ್ನು ನಡೆಸುವುದರಿಂದ ಎಲ್ಲರಿಗೂ ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

**ಪ್ರಶ್ನಕರ್ತ:** ಈ Scientific Circumstantial Evidence ಅಂದರೇನು? ಎನ್ನುವುದು ಅರ್ಥವಾಗುತ್ತಿಲ್ಲ.

**ದಾದಾಶ್ರೀ:** ಸಂಸಾರದಲ್ಲಿ ಎಲ್ಲವೂ Scientific Circumstantial Evidence (ವೈಜ್ಞಾನಿಕ ಸಂಯೋಗದ ಪುರಾವೆಗಳ) ಆಧಾರದಿಂದಲೇ ನಡೆಯುವುದಾಗಿದೆ. ಜಗತ್ತಿನಲ್ಲಿ ಒಂದೇ ಒಂದು ಪರಮಾಣುವನ್ನು ಬದಲಿಸಲು ಸಾಧ್ಯವಿಲ್ಲ. ಉದಾಹಣೆಗೆ: ನೀವು ಊಟಕ್ಕೆ ಕುಳಿತುಕೊಂಡಾಗ, ನಿಮಗೆ ಗೊತ್ತೇ ಇರುವುದಿಲ್ಲ, ಆ ದಿನ ನೀವು ಏನು ಊಟ ಮಾಡಲಿದ್ದೀರಿ? ಎಂದು. ಊಟ ತಯಾರಿಸುವವರಿಗೂ ಗೊತ್ತಿರುವುದಿಲ್ಲ ನಾಳೆ ಊಟಕ್ಕೆ ಏನು ಮಾಡಲಿದ್ದಾರೆ? ಎಂದು. ಇದೆಲ್ಲಾ ಯಾವ ರೀತಿಯಿಂದ ಆಗುತ್ತವೆ ಎನ್ನುವುದೇ ಆಶ್ಚರ್ಯವಾಗಿದೆ. ಎಷ್ಟು ನಿಮ್ಮಿಂದ ತಿನ್ನಲಾಗುತ್ತದೆ ಹಾಗು ಎಷ್ಟು ನಿಮ್ಮಿಂದ ತಿನ್ನಲಾಗುವುದಿಲ್ಲ ಎನ್ನುವುದೆಲ್ಲವೂ ಪರಮಾಣುಗಳಿಂದ ಮಾತ್ರವೇ ಸಂಯೋಜಿಸಲ್ಪಟ್ಟಿರುತ್ತದೆ.

ಇವತ್ತು ನೀವು ನನ್ನನು ಭೇಟಿಯಾಗಿರುವುದು ಯಾವುದರ ಆಧಾರದಿಂದಾಗಿದೆ? 'Only Scientific Circumstantial Evidence'ನಿಂದಾಗಿದೆ. ಇದಕ್ಕೆಲ್ಲಾ ಅತಿ ಅತಿ ಗುಹ್ಯವಾದ ಕಾರಣಗಳಿರುತ್ತವೆ. ಆ ಕಾರಣಗಳನ್ನು ಕಂಡುಕೊಳ್ಳಬೇಕು.

**ಪ್ರಶ್ನಕರ್ತ:** ಕಂಡುಕೊಳ್ಳುವುದು ಅಂದರೆ ಹೇಗೆ?

**ದಾದಾಶ್ರೀ:** ಈಗ ನೀವು ಇಲ್ಲಿಗೆ ಬಂದಿರುವುದು ಸಹ ನೀವು ಅಂದುಕೊಂಡಾಕ್ಷಣ ಬರಲು ಸಾಧ್ಯವಾಗಿರುವಂತಹದ್ದಲ್ಲ. ಆದರೂ, ನೀವು ತಿಳಿಯುವುದೇನು? 'ನಾನು ಇಲ್ಲಿಗೆ ಬಂದೆ, ನಾನು ಹೋದೆ' ಎಂದು, 'ಇಗೋಯಿಸಂ'ನಿಂದ ಹೇಳುತ್ತೀರಿ. ಹಾಗಾದರೆ, ನಿನ್ನೆ ಯಾಕೆ ಬರಲಿಲ್ಲವೆಂದು

ಪ್ರಶ್ನಿಸಿದಾಗ, ಏನು ಹೇಳುತ್ತೀರಿ? 'ನಿನ್ನೆ ನಡೆಯಲಾಗುತ್ತಿರಲಿಲ್ಲ' ಎಂದು, ಊತಗೊಂಡಿರುವ ಕಾಲನ್ನು ತೋರಿಸುತ್ತೀರಿ. ಆಗ ಏನೆಂದು ತಿಳಿಯಬೇಕು?

**ಪ್ರಶ್ನಕರ್ತ:** ಕಾಲು ನೋವಾಗಿತ್ತು.

**ದಾದಾಶ್ರೀ:** ಹಾ. ಕಾಲು ನೋವಾಗಿತ್ತು ಸರಿ. ಆದರೆ, ಕಾಲಿನ ತೊಂದರೆಯನ್ನು ಹೇಳುವಾಗಲೇ ಅರ್ಥವಾಗಬೇಕಲ್ಲವೇ? ಅದು, ನಿಮ್ಮ ಅಂದುಕೊಂಡಾಕ್ಷಣಕ್ಕೆ ಬರಲಾಗಿದೆಯೋ ಅಥವಾ ಕಾಲಿನ ತೊಂದರೆಯಿಲ್ಲದೆ ನಡೆಯಲು ಅನುಕೂಲವಾಗಿರುವುದರಿಂದ ಇವತ್ತು ಬರಲಾಗಿದೆಯೋ?

**ಪ್ರಶ್ನಕರ್ತ:** ಆದರೆ, ಹೇಳುವಾಗ, 'ನಾನೇ ಬಂದಿರುವುದು' ಎಂದೇ ಹೇಳಬೇಕಲ್ಲವೇ?

**ದಾದಾಶ್ರೀ:** ನಿಮ್ಮಿಂದಲೇ ಬರಲು ಸಾಧ್ಯವಾಗುವುದಾಗಿದ್ದರೆ, ಕಾಲಿನ ತೊಂದರೆಯಿದ್ದಾಗಲೂ ಬರಬಹುದಾಗಿತ್ತು ಅಲ್ಲವೇ?

**ಪ್ರಶ್ನಕರ್ತ:** ಸ್ವತಃ ನನ್ನ ಇಚ್ಛೆಯಾಗಿತ್ತು ಬರಬೇಕು ಎಂದು, ಹಾಗಾಗಿ ಬಂದಿರುವೆ.

**ದಾದಾಶ್ರೀ:** ಅದು ಸರಿ. ಇಚ್ಛೆ ನಿಮಗಿತ್ತು, ಹಾಗಾಗಿ ಬಂದಿದ್ದೀರಿ. ಆದರೆ ನಿಮ್ಮ ಕಾಲು ಹಾಗೂ ಬೇರೆಲ್ಲವೂ ಸರಿಯಾಗಿರುವುದರಿಂದ ಬರಲಾಯಿತು ಅಲ್ಲವೇ? ತೊಂದರೆ ಉಂಟುಮಾಡಿದ್ದರೆ ಆಗ?

**ಪ್ರಶ್ನಕರ್ತ:** ಅಂತಹ ಸಮಯದಲ್ಲಿ ಬರಲಾಗುವುದಿಲ್ಲ, ಅದು ಸರಿ.

**ದಾದಾಶ್ರೀ**: ಹಾಗಾದರೆ, ನಿಮ್ಮೊಬ್ಬರಿಂದಲೇ ಬರಲು ಸಾಧ್ಯವಿದೆಯೇ? ಒಮ್ಮೆ, ಒಬ್ಬ ವ್ಯಕ್ತಿ ಎತ್ತಿನಗಾಡಿಯಲ್ಲಿ ಕುಳಿತುಕೊಂಡು ಇಲ್ಲಿಗೆ ಬಂದು ಹೇಳುತ್ತಾರೆ, 'ನಾನು ಬಂದೆ' ಎಂದು. ಆಗ ನಾವು ಅವರಿಗೆ, 'ನಿಮ್ಮ ಕಾಲಿಗೆ ಪಾರ್ಶ್ವವಾಯು ಹೊಡೆದಿರುವಾಗ, ಹೇಗೆ ಬರಲಾಯಿತು?' ಎಂದು ಕೇಳುವಾಗ, ಅದಕ್ಕೆ ಅವರು ಹೇಳುತ್ತಾರೆ, 'ಗಾಡಿಯಲ್ಲಿ ಬಂದೆ' ಎಂದು ಸಹ ಹೇಳುತ್ತಾರೆ, ಜೊತೆಗೆ 'ನಾನು ಬಂದೆ' ಎನ್ನುತ್ತಾರೆ. ಅರೇ! ನಿಜವಾಗಿ, 'ಗಾಡಿ ಬಂದಿದೆಯೋ ಅಥವಾ ನೀನು ಬಂದಿರುವುದೋ?' ಎಂದು ಪ್ರಶ್ನಿಸಿದರೆ, 'ಗಾಡಿ ಬಂದಿದೆ' ಎಂದು ಉತ್ತರಿಸುತ್ತಾರೆ. ಅಲ್ಲಿ ಗಾಡಿ ಮಾತ್ರ ಬಂದಿದೆಯೋ ಇಲ್ಲ ಎತ್ತುಗಳು ಬಂದಿವೆಯೋ?, ಹೀಗೆ ಆಡುವ ಮಾತುಗಳು ಹೇಗೆಂದರೆ ಹಾಗೆ! ಎಲ್ಲಾ ತಪ್ಪಾಗಿ ತಿಳಿದುಕೊಂಡಿರುವುದಾಗಿದೆ! ನಿಜವಾಗಿ, ಎಲ್ಲಾ ವಸ್ತುಗಳ ಸಂಯೋಗವು ಸೇರಿಕೊಂಡು ಬಂದಿರುವುದರಿಂದ ಇಲ್ಲಿಗೆ ಬರಲು ಸಾಧ್ಯವಾಗಿದೆ. ಇಲ್ಲದೆ ಹೋದರೆ ಬರಲು ಸಾಧ್ಯವಾಗುತ್ತಿರಲಿಲ್ಲ. ಈಗೇನಾದರೂ ನಿಮಗೆ ತಲೆನೋವು ಬಂದರೆ, ಆಗ ನೀವು ಇಲ್ಲಿಗೆ ಬಂದಿದ್ದರೂ ಮತ್ತೆ ಎದ್ದು ಹಿಂದಿರುಗಿ ಮನೆಗೆ ಹೋಗುತ್ತೀರಿ. ನಮ್ಮಿಂದಲೇ ಬರಲು-ಹೋಗಲು ಸಾಧ್ಯವಾಗುವುದಾಗಿದ್ದರೆ, ಆಗ ತಲೆನೋವಿನ

ಕಾರಣವನ್ನು ಲಕ್ಷ್ಯಗೆ ತೆಗೆದುಕೊಳ್ಳುತ್ತಿರಲಿಲ್ಲ ಅಲ್ಲವೇ? ಹಾಗೂ ನೀವು ಇಲ್ಲಿಗೆ ಬರಬೇಕೆಂದು ಹೊರಟಿರುವಾಗ, ರಸ್ತೆಯಲ್ಲಿ ನಿಮ್ಮ ಪರಿಚಯದವರು ಭೇಟಿಯಾಗಿ, 'ಬನ್ನಿ ಚಂದುಲಾಲ್ ನನ್ನೊಂದಿಗೆ' ಎಂದು ಕರೆದುಕೊಂಡು ಹೋದರೆ, ಆಗ ಮತ್ತೆ ನೀವು ಹಿಂದಿರುಗಿ ಹೋಗಬೇಕಾಗಿ ಬರುತ್ತದೆ. ಅದೇ ನಿಮಗೆ ಇಲ್ಲಿಗೇ ಬರಬೇಕೆನ್ನುವ ಸಂಯೋಗವು ಹೊಂದಿಕೊಂಡು ಬಂದಿದ್ದರೆ, ಆಗ ರಸ್ತೆಯಲ್ಲಿ ಅಡ್ಡಿಪಡಿಸುವವರು ಯಾರೂ ಸಿಗುವುದಿಲ್ಲ.

## ತನಗಿರುವ ಸ್ವತಂತ್ರ ಶಕ್ತಿ ಎಷ್ಟು?

ನಿಜವಾಗಿ ನೋಡಿದರೆ, ನೀವು ಎಂದೂ ಏನನ್ನೂ ತಿನ್ನುವುದೇ ಇಲ್ಲ! ಈ ಎಲ್ಲಾ ತಿನ್ನುವುದನ್ನು, ಕುಡಿಯುವುದನ್ನು ಚಂದುಲಾಲ್ ಮಾಡುವುದಾಗಿದೆ ಹಾಗು ನೀವು ಕೇವಲ 'ನಾನು ತಿಂದೆ' ಎಂದು ಭಾವಿಸಿಕೊಂಡಿರುವುದಾಗಿದೆ. ಚಂದುಲಾಲ್ ತಿನ್ನುತ್ತಾನೆ ಹಾಗು ಚಂದುಲಾಲ್ ಸಂಡಾಸಿಗೆ ಹೋಗುತ್ತಾನೆ. ಅವನೊಂದಿಗೆ ಸುಮ್ಮನೆ, ಮಾಡಲು ಕೆಲಸವಿಲ್ಲದೆ ಸೇರಿಕೊಳ್ಳುವುದಾಗಿದೆ. ಇದು ನಿಮಗೀಗ ಅರ್ಥವಾಗುತ್ತಿದೆಯೇ?

**ಪ್ರಶ್ನಕರ್ತ:** ತಾವು ಸ್ವಲ್ಪ ವಿವರವಾಗಿ ತಿಳಿಸಿಕೊಡಬೇಕು.

**ದಾದಾಶ್ರೀ:** ಈ ಜಗತ್ತಿನಲ್ಲಿ ಸಂಡಾಸಿಗೆ ಹೋಗುವುದಕ್ಕೆ ಆಗಲಿ, ಸ್ವತಂತ್ರವಾದ ಶಕ್ತಿಯನ್ನು ಹೊಂದಿರುವಂಥವರು ಯಾರೂ ಹುಟ್ಟಿಲ್ಲ. ಯಾರಿಗೂ ಸಂಡಾಸಿಗೆ ಹೋಗಲೂ ಸಹ ಸ್ವಯಂ ಶಕ್ತಿ ಇಲ್ಲದಿರುವಾಗ, ಇನ್ನು ಬೇರೆ ಯಾವ ಶಕ್ತಿಯನ್ನು ಹೊಂದಿರಲು ಸಾಧ್ಯ? ಎಲ್ಲಿಯವರೆಗೆ ತನ್ನ ಇಚ್ಛಾನುಸಾರವಾಗಿ ಸ್ವಲ್ಪ ಮಟ್ಟಿಗೆ ನಡೆಯುತ್ತದೆ, ಅಲ್ಲಿಯವರೆಗೆ ಎಲ್ಲವೂ ತನ್ನಿಂದಲೇ ನಡೆಯುವುದಾಗಿದೆ ಎಂದು ಭಾವಿಸಿಕೊಳ್ಳಲಾಗುತ್ತದೆ. ಆದರೆ, ಯಾವಾಗ ಅಡಚಣೆಗಳು ಉಂಟಾಗುತ್ತವೆ, ಆಗ ಅರಿವಿಗೆ ಬರುತ್ತದೆ.

ಒಮ್ಮೆ ನಾನು, 'ಫಾರಿನ್ ರಿಟರ್ನ್ ಡಾಕ್ಟರ್'ಗಳನ್ನೆಲ್ಲಾ ವಡೋದರದಲ್ಲಿ ಒಟ್ಟು ಸೇರಿಸಿದ್ದೆ. ಹತ್ತು-ಹನ್ನೆರಡು ಜನರಿದ್ದಿರಬಹುದು. ಅವರಿಗೆ ನಾನು ಹೇಳಿದೆ, 'ನಿಮ್ಮಲ್ಲಿ ಯಾರಿಗೂ ಸಂಡಾಸಿಗೆ ಹೋಗಲೂ ಸಹ ಸ್ವತಂತ್ರ ಶಕ್ತಿಯಿಲ್ಲ' ಎಂದಾಗ, ಅವರೆಲ್ಲಾ ಮೇಲೆಕೆಳಗೆ ನೋಡಲು ಪ್ರಾರಂಭಿಸಿದರು. ನಂತರ ಅವರಿಗೆ ಹೇಳಿದೆ, 'ಎಂದಾದರೂ ಸಂಡಾಸಿಗೆ ಹೋಗಲು ಅಡಚಣೆ ಉಂಟಾದಾಗ ತಿಳಿಯುತ್ತದೆ ಹಾಗೂ ಆಗ, ಯಾವುದೋ ಒಂದು ಔಷಧಿಯ ಹೆಲ್ಪ್ ತೆಗೆದುಕೊಳ್ಳಬೇಕಾಗಿ ಬರುತ್ತದೆ.' ಹಾಗಾಗಿ ಅಲ್ಲಿಯೂ ಕೂಡಾ ನಿಮಗೆ ಸ್ವತಂತ್ರ ಶಕ್ತಿ ಇರುವುದಿಲ್ಲ. ಕೇವಲ ಭ್ರಾಂತಿಯಿಂದ ಪ್ರಕೃತಿಯ ಶಕ್ತಿಯನ್ನು ನಿಮ್ಮದೇ ಸ್ವತಂತ್ರ ಶಕ್ತಿಯೆಂದು

ನೀವು ಭಾವಿಸಿಕೊಂಡಿರುವುದಾಗಿದೆ. ಬೇರೊಂದರ ಶಕ್ತಿಯನ್ನು ತನ್ನದೇ ಶಕ್ತಿಯೆಂದು ಭಾವಿಸಿಕೊಂಡಿರುವುದನ್ನೇ ಭ್ರಾಂತಿಯೆಂದು ಕರೆಯುವುದಾಗಿದೆ. ಈ ಮಾತು ಸ್ವಲ್ಪ ಮಟ್ಟಿಗೆ ನಿಮಗೆ ಅರ್ಥವಾಯಿತಲ್ಲವೇ? ಈಗ ಸ್ವಲ್ಪ, ಸ್ವಲ್ಪ ಅರ್ಥವಾಗುತ್ತಿದೆಯೇ?

**ಪ್ರಶ್ನಕರ್ತ:** ಹಾ, ಅರ್ಥವಾಗುತ್ತಿದೆ.

**ದಾದಾಶ್ರೀ:** ಇಷ್ಟು ಅರ್ಥವಾಗಿ ಬಿಟ್ಟರೆ ಸಾಕು, ಪರಿಹಾರವನ್ನು ಕೊಂಡುಕೊಳ್ಳಬಹುದು. ಜಗತ್ತಿನಲ್ಲಿ ಜನರು ಹೇಳುವುದೇನು? 'ನಾನು ಅಷ್ಟು ತಪಸ್ಸು ಮಾಡಿದೆ, ಅಷ್ಟು ಜಪ ಮಾಡಿದೆ, ಉಪವಾಸ ಮಾಡಿದೆ' ಎಂದು. ಇದೆಲ್ಲವೂ ಭ್ರಾಂತಿಯೇ ಆಗಿದ್ದರೂ ಸಹ ಜಗತ್ತು ಇರುವುದು ಹಾಗೆಯೇ ಆಗಿದೆ. ಯಾಕೆಂದರೆ, ಈ ಅಹಂಕಾರಕ್ಕೆ ವ್ಯಕ್ತಪಡಿಸದೆ ಇರಲು ಆಗುವುದೇ ಇಲ್ಲ. ಅದು, ಅದರ ಸ್ವಭಾವವಾಗಿದೆ.

## ನೈಮಿತ್ತಿಕವಾಗಿ ಕರ್ತ. ಅಂದರೆ, ನಿಮ್ಮಿತ್ತದ ರೂಪದಿಂದ ಕರ್ತ.

**ಪ್ರಶ್ನಕರ್ತ:** ನಿಜವಾಗಿ ತಾನು ಕರ್ತನಲ್ಲ. ಹಾಗಾದರೆ ಕರ್ತ ಯಾರು? ಹಾಗು ಅವನ ಸ್ವರೂಪವೇನು?

**ದಾದಾಶ್ರೀ:** ಅದೇನೆಂದರೆ, ನಿಮಿತ್ತದ ರೂಪದಲ್ಲಿ ತಾನು ಕರ್ತನಾರುವುದಾಗಿದೆ. ತಾನು ಎಲ್ಲಿಯೂ ಸಂಪೂರ್ಣ ಸ್ವತಂತ್ರ ಕರ್ತನಂತೂ ಅಲ್ಲ. ಆದರೆ, 'ನೈಮಿತ್ತಿಕವಾಗಿ ಕರ್ತ'. Parliamentary ಪದ್ಧತಿಯ ಹಾಗೆ ಕರ್ತನಾಗಿರುವುದು. Parliamentary ಪದ್ಧತಿ ಅಂದರೇನು? 'Parliament'ನಲ್ಲಿ ಎಲ್ಲರೂ voting ಮಾಡುತ್ತಾರೆ ಹಾಗು ಕೊನೆಗೆ ಅಲ್ಲಿ ತನ್ನ vote ಕೂಡಾ ಇರುತ್ತದೆ. ಹಾಗಾಗಿ, ತಾನು voting ಮಾಡಿರುವುದನ್ನೇ ಆಧಾರವಾಗಿಟ್ಟುಕೊಂಡು, ತಾನು ಹೇಳಿಕೊಳ್ಳುವುದೇನೆಂದರೆ, 'ನಾನು ಮಾಡಬೇಕಾಗಿದೆ' ಎಂದು. ಅದರಿಂದಾಗಿ ಕರ್ತನಾಗುತ್ತಾನೆ. ನಂತರ ಮುಂದಕ್ಕೆ ಯೋಜನೆಗಳ ರಚನೆಯು ಪ್ರಾರಂಭವಾಗುತ್ತದೆ. ತನ್ನಿಂದಲೇ ಯೋಜನೆಗಳನ್ನು ರಚಿಸುವುದಾಗಿದೆ. ಕೇವಲ ಯೋಜನೆಗಳಲ್ಲಿ ತನ್ನ ಸಹಿ ಇರುತ್ತದೆ; ಯೋಜನೆಗಳನ್ನು ರಚಿಸುವಲ್ಲಿ ಮಾತ್ರ ತಾನು ಕರ್ತ. ಆದರೆ, ಹೀಗೆಂದು ಜಗತ್ತಿನ ಜನರಿಗೆ ತಿಳಿದಿಲ್ಲ. ಹೇಗೆ ಸಣ್ಣ 'ಕಂಪ್ಯೂಟರ್'ನಲ್ಲಿ feed ಮಾಡಲಾಗಿರುವುದನ್ನು ದೊಡ್ಡ 'ಕಂಪ್ಯೂಟರ್'ಗೆ transfer ಮಾಡಲಾಗುತ್ತದೆ. ಅದೇ ರೀತಿಯಲ್ಲಿ ಈ ಯೋಜನೆಗಳು ತನ್ನಿಂದ ರಚನೆಯಾಗಿ ಹೊರಗಿನ ದೊಡ್ಡ 'ಕಂಪ್ಯೂಟರ್'ಗೆ ಹೋಗುತ್ತದೆ.

ನಂತರ ಆ ದೊಡ್ಡ 'ಕಂಪ್ಯೂಟರ್' ಅಂದರೆ, ಪ್ರಕೃತಿಯು ಅವುಗಳನ್ನು (ವಿಸರ್ಜನೆ ಮಾಡುತ್ತದೆ) ನಿರ್ವಹಿಸುತ್ತದೆ. ಆದುದರಿಂದ, ಈ ಜನ್ಮ ಪೂರ್ತಿ ನಮ್ಮ ಜೀವನವು ವಿಸರ್ಜನೆಯ ಸ್ವರೂಪದ್ದಾಗಿದೆ. ಇದನ್ನು ನಾವು  ಹಿಂದಿನ ಜನ್ಮದಲ್ಲೇ ರಚನೆ ಮಾಡಲಾಗಿತ್ತು. ಆದುದರಿಂದ, ಈ ಜನ್ಮದಲ್ಲಿ ಹುಟ್ಟಿನಿಂದ ಮೃತ್ಯು ಹೊಂದುವವರೆಗೂ ವಿಸರ್ಜನೆಯ ಸ್ವರೂಪವೇ ಆಗಿದೆ. ಈಗ, ವಿಸರ್ಜನೆಯ ಭಾಗದಲ್ಲಿ ತಾನು ಏನೂ ಮಾಡಲಾಗುವುದಿಲ್ಲ, ಎಲ್ಲವೂ ಪರ-ಶಕ್ತಿಯಿಂದ ನಡೆಯುವುದಾಗಿದೆ. ಯೋಜನೆಯನ್ನು ಮಾಡಿಬಿಟ್ಟ ನಂತರ ಎಲ್ಲವನ್ನು ಪರ-ಶಕ್ತಿಯು ನಿರ್ವಹಿಸುವುದಾಗಿದೆ. ಆದುದರಿಂದ ಯೋಜನೆಯ ನಂತರ ಪರಿಣಾಮವು ಪರ-ಶಕ್ತಿಯ ಸ್ವಾಧೀನದಲ್ಲಿ ಇರುತ್ತದೆ. ನಿಮಗೆ ಅರ್ಥವಾಗುತ್ತಿದೆಯೇ? ಇದು ಬಹಳ ಆಳವಾದ ವಿಚಾರವಾಗಿದೆ.

## ಕರ್ತನಾಗುವುದರಿಂದ ಕರ್ಮ ಬಂಧನ

**ಪ್ರಶ್ನಕರ್ತ:** ಈ ಕರ್ಮ ಬಂಧನದಿಂದ ಬಿಡಿಸಿಕೊಳ್ಳಲು ಏನು ಮಾಡಬೇಕು?

**ದಾದಾಶ್ರೀ:** ಈ ಕರ್ಮ ಎನ್ನುವುದು ಕರ್ತನ ಅಧೀನವಾಗಿದೆ. ಅಂದರೆ, ಕರ್ತನಾದರೆ ಮಾತ್ರ ಕರ್ಮ ಬಂಧನವಾಗುತ್ತದೆ. ಕರ್ತನಾಗದೆ ಹೋದರೆ ಕರ್ಮ ಬಂಧನವು ಉಂಟಾಗುವುದಿಲ್ಲ. ಕರ್ತ ಅಂದರೆ ಹೇಗೆ? ತನ್ನಿಂದ ಮಾಡಲಾಗದೆ ಇರುವುದನ್ನು ತಾನೇ ಮಾಡಿರುವುದೆಂದು ಭಾವಿಸಿಕೊಂಡಾಗ ಕರ್ತನಾಗುವುದಾಗಿದೆ. ತನ್ನಯ ಮೂಲ ಸ್ವಭಾವಕ್ಕೆ ಬಂದುಬಿಟ್ಟರೆ, ಆಗ ತಾನು ಕರ್ತ ಎನ್ನುವುದು ಇರುವುದೇ ಇಲ್ಲ. 'ನಾನು ಮಾಡಿದೆ' ಎಂದು ಹೇಳುವುದರಿಂದ ಕರ್ತನಾಗಬೇಕಾಗಿ ಬಂದಿದೆ. ಅಂದರೆ, ಪರಿಣಾಮದ ರೂಪದಲ್ಲಿರುವ ಕರ್ಮವು ವಿಸರ್ಜಿಸುತ್ತಿರುವಾಗ ತಾನು ಅದಕ್ಕೆ ಆಧಾರವನ್ನು ನೀಡಿದಂತೆ. ಅಲ್ಲಿ ತಾನು ಕರ್ತನಾಗದೆ ಇದುಬಿಟ್ಟಾಗ, ವಿಸರ್ಜನೆಗೊಳ್ಳುತ್ತಿರುವ ಕರ್ಮಕ್ಕೆ ಆಧಾರ ಸಿಗದೆ ಕೆಳಗೆ ಬೀಳುತ್ತದೆ, ನಿರಾಧಾರದಿಂದಾಗಿ ಕರ್ಮವು ಕೆಳಗೆ ಬಿದ್ದುಬಿಡುತ್ತದೆ. ಎಲ್ಲಿಯವರೆಗೆ ಕರ್ತನಾಗಿರಲು ಬಯಸುವುದಾಗಿದೆ, ಅಲ್ಲಿಯವರೆಗೆ ಕರ್ಮವು ಇರುವುದೇ ಆಗಿದೆ.

"ಛೂಟೆ ದೇಹಧ್ಯಾಸ್ ತೋ ನಹಿ ಕರ್ತಾ ತು ಕರ್ಮ್,

ನಹಿ ಭೋಗ್ತಾ ತು ತೆಹನೋ ಯೆ ಜ್ ಧರ್ಮನೊ ಮರ್ಮ್"

- ಶ್ರೀಮದ್ ರಾಜಚಂದ್ರ

ಇಲ್ಲಿಯವರೆಗೆ ನೀವು, 'ನಾನು ಚಂದುಲಾಲ್' ಎಂದು ಭಾವಿಸಿಕೊಂಡು ಕುಳಿತಿದ್ದೀರಿ. ಹಾಗಾಗಿ ಏಕಾಕಾರವನ್ನು ಹೊಂದಿರುವಿರಿ. ಆದರೆ ಒಳಗೆ ಎರಡು ವಸ್ತುಗಳು ಬೇರೆ ಬೇರೆಯಾಗಿವೆ. ನೀವು ಬೇರೆ ಹಾಗು ಚಂದುಲಾಲ್ ಬೇರೆ.

ಆದರೆ ಅದು ನಿಮಗೆ ತಿಳಿದಿಲ್ಲ ಹಾಗಾಗಿ ಮಾಡುವುದಾದರೂ ಏನು? ಜ್ಞಾನಿ ಪುರುಷರು ಅವರ ಭೇದವಿಜ್ಞಾನದಿಂದ ಬೇರ್ಪಡಿಸುತ್ತಾರೆ. ಯಾವಾಗ ನೀವು ಬೇರೆಯಾಗಿಬಿಡುತ್ತೀರಿ, ಆಮೇಲೆ 'ನೀವು' ಏನನ್ನೂ ಮಾಡಬೇಕಾಗಿಲ್ಲ, ಈ ಚಂದುಲಾಲ್ ಎಲ್ಲವನ್ನೂ ಮಾಡುತ್ತಲಿರುತ್ತಾನೆ.

# 6) ಭೇದಜ್ಞಾನವು ಯಾರಿಂದ ಪ್ರಾಪ್ತಿಯಾಗುತ್ತದೆ?

## ಆತ್ಮ-ಅನಾತ್ಮದ ವೈಜ್ಞಾನಿಕ ವಿಭಜನೆ

ಈ ಉಂಗುರದಲ್ಲಿ, ಚಿನ್ನ ಹಾಗು ತಾಮ್ರ ಎರಡೂ ಸೇರಿಕೊಂಡಿದೆ, ಅದನ್ನು ನಾವು ದಾರಿಯಲ್ಲಿ ಸಿಕ್ಕಿದವರಿಗೆಲ್ಲಾ, 'ಅವೆರಡನ್ನು ಬೇರ್ಪಡಿಸಿ ಕೊಡುತ್ತೀರಾ?' ಎಂದು ಕೇಳಲಾಗುತ್ತದೆಯೇ? ಯಾರು ಬೇಕಾದರೂ ಬೇರ್ಪಡಿಸಿ ಕೊಡಲು ಸಾಧ್ಯವಿದೆಯೇ? ಅದನ್ನು ಯಾರು ಬೇಕಾದರೂ ಬೇರ್ಪಡಿಸಿಕೊಡಲಾಗುತ್ತದೆಯೇ?

**ಪ್ರಶ್ನಕರ್ತ:** ಚಿನ್ನದ ಅಂಗಡಿಯವನೇ ಬೇರ್ಪಡಿಸಿಕೊಡಲು ಸಾಧ್ಯ.

**ದಾದಾಶ್ರೀ:** ಯಾರು ಆ ವ್ಯಾಪಾರದಲ್ಲಿ ಪಳಗಿರುತ್ತಾರೆ, ಯಾರು ಅದರಲ್ಲಿ expert ಆಗಿರುತ್ತಾರೆ, ಅಂಥವರು ಅವೆರಡನ್ನು ಬೇರ್ಪಡಿಸಿ ಕೊಟ್ಟಾಗ ನೂರಕ್ಕೆ ನೂರು ಅಪ್ಪಟ ಚಿನ್ನವನ್ನು ಪಡೆಯಲಾಗುತ್ತದೆ. ಅವರು ಬೇರ್ಪಡಿಸಿ ಕೊಡುವಂತಹ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಕಾರಣವೇನೆಂದರೆ, ಅವರಿಗೆ ಅವೆರಡರ ಗುಣ-ಧರ್ಮಗಳು ತಿಳಿದಿರುತ್ತದೆ. ಚಿನ್ನದ ಗುಣ-ಧರ್ಮ ಇಂತಹದ್ದು ಹಾಗು ತಾಮ್ರದ ಗುಣ-ಧರ್ಮ ಇಂತಹದ್ದೇ ಆಗಿದೆಯೆಂದು ತಿಳಿದಿರುತ್ತದೆ. ಹಾಗೆಯೇ ಜ್ಞಾನಿ ಪುರುಷರು ಆತ್ಮದ ಗುಣ-ಧರ್ಮವನ್ನು ತಿಳಿದಿರುವವರಾಗಿರುತ್ತಾರೆ ಹಾಗು ಅನಾತ್ಮದ ಗುಣ-ಧರ್ಮವನ್ನೂ ಸಹ ತಿಳಿದಿರುತ್ತಾರೆ.

ಈ ಉಂಗುರದಲ್ಲಿ ಚಿನ್ನ ಹಾಗು ತಾಮ್ರ ಇವೆರಡರ mixture (ಮಿಶ್ರಣ) ಆಗಿರುವುದರಿಂದ, ಅವುಗಳನ್ನು ಬೇರ್ಪಡಿಸಲು ಸಾಧ್ಯವಿದೆ. ಅದೇ, ಚಿನ್ನ ಹಾಗು ತಾಮ್ರ

ಇವೆರಡೂ ಏನಾದರೂ compound ಸ್ವರೂಪವಾಗಿಬಿಟ್ಟಿದ್ದರೆ ಅಥವಾ ಒಂದರಲ್ಲಿ ಮತ್ತೊಂದು ಬೆರೆತುಕೊಂಡು ಬಿಟ್ಟರೆ, ಅವುಗಳನ್ನು ಬೇರ್ಪಡಿಸಲು ಸಾಧ್ಯವಾಗುತ್ತಲೇ ಇರಲಿಲ್ಲ. ಏಕೆಂದರೆ, ಅವೆರಡೂ ಸೇರಿ compound ಆಗಿಬಿಟ್ಟಾಗ, ಅದರ ಗುಣ-ಧರ್ಮವು ಮತ್ತೊಂದು ರೀತಿಯದ್ದಾಗಿ ಬಿಡುತ್ತದೆ. ಅದೇ ರೀತಿ, ಚೇತನ ಹಾಗು ಅಚೇತನ ಇವೆರಡು mixture ಆಗಿಬಿಟ್ಟಿವೆ, ಆದರೆ, ಅವೆರಡು compound ಸ್ವರೂಪವನ್ನು ಹೊಂದಿಲ್ಲ. ಹಾಗಾಗಿ ಅವೆರಡನ್ನು ಬೇರ್ಪಡಿಸಬಹುದು ಹಾಗೂ ಅವುಗಳ ಸ್ವಭಾವವನ್ನು ಕಂಡುಕೊಳ್ಳಬಹುದು. ಅವೆರಡು ಏನಾದರು Compound ಆಗಿಬಿಟ್ಟಿದ್ದರೆ, ಆಗ ಕಂಡುಹಿಡಿಯಲು ಸಾಧ್ಯವಾಗುತ್ತಲೇ ಇರಲಿಲ್ಲ. ಚೇತನದ ಗುಣ-ಧರ್ಮವನ್ನು ಕಂಡುಹಿಡಿಯಲು ಆಗುತ್ತಿರಲಿಲ್ಲ ಹಾಗು ಅಚೇತನದ ಗುಣ-ಧರ್ಮವನ್ನೂ ಕೂಡಾ ಕಾಣಲು ಸಿಗುತ್ತಿರಲಿಲ್ಲ. ಅಲ್ಲಿ ಒಂದರಲ್ಲಿ ಮತ್ತೊಂದು ಬೆರೆತುಕೊಂಡು ಬಿಟ್ಟರೆ, ಆಗ ಮೂರನೆಯ ಬಗೆಯ ಗುಣ-ಧರ್ಮವು ಉತ್ಪನ್ನವಾಗಿ ಬಿಡುತ್ತಿತ್ತು. ಆದರೆ ಇದರಲ್ಲಿ ಹಾಗಾಗಿಲ್ಲ. ಇಲ್ಲಿ ಕೇವಲ mixture (ಮಿಶ್ರಣ)ವಾಗಿವೆಯಷ್ಟೇ. ಹಾಗಾಗಿ ಜ್ಞಾನಿ ಪುರುಷರು ಅವುಗಳನ್ನು ಬೇರ್ಪಡಿಸಿ ಬಿಟ್ಟಾಗ ಆತ್ಮವನ್ನು ಗುರುತಿಸಲಾಗುತ್ತದೆ.

## ಜ್ಞಾನವಿಧಿ ಅಂದರೇನು?

**ಪ್ರಶ್ನಕರ್ತ:** ಈ ನಿಮ್ಮ ಜ್ಞಾನವಿಧಿ ಅಂದರೇನು?

**ದಾದಾಶ್ರೀ:** ಜ್ಞಾನವಿಧಿ ಅಂದರೆ, ಅಲ್ಲಿ Separation ಮಾಡಲಾಗುತ್ತದೆ. ಆತ್ಮ ಹಾಗೂ ಅನಾತ್ಮವನ್ನು ಬೇರ್ಪಡಿಸಲಾಗುತ್ತದೆ. ದೇಹ-ಸ್ವರೂಪವನ್ನು 'ಪುದ್ಗಲ್' ಎಂದು ಕರೆಯಲಾಗುತ್ತದೆ ಹಾಗೂ ಆತ್ಮ-ಸ್ವರೂಪವನ್ನು 'ಶುದ್ಧ ಚೇತನ'ವೆಂದು ಕರೆಯಲಾಗುತ್ತದೆ. ಜ್ಞಾನ-ವಿಧಿಯಲ್ಲಿ ಪುದ್ಗಲ್ ಹಾಗೂ ಶುದ್ಧ ಚೇತನವನ್ನು ಬೇರ್ಪಡಿಸಲಾಗುತ್ತದೆ. ಇವೆರಡರ Separation.

**ಪ್ರಶ್ನಕರ್ತ:** ಈ ನಿಮ್ಮ ಸಿದ್ಧಾಂತವಂತೂ ಚೆನ್ನಾಗಿದೆ. ಆದರೆ, ಅದರ ವಿಧಾನ ಏನು ಎನ್ನುವುದನ್ನು ತಿಳಿಯಲು ಇಚ್ಛಿಸುತ್ತೇನೆ.

**ದಾದಾಶ್ರೀ:** ಇಲ್ಲಿ ನಮ್ಮಲ್ಲೇನು ಕೊಡುವುದು-ತೆಗೆದುಕೊಳ್ಳುವುದು ಇರುವುದಿಲ್ಲ. ಕೇವಲ ಕುಳಿತುಕೊಂಡು ನಾವೇನು ಹೇಳುತ್ತೇವೋ ಅದನ್ನೇ ಪುನರಾವರ್ತಿಸಿ ಹೇಳಬೇಕಾದ

ಅವಶ್ಯಕತೆಯಿದೆ. ('ನಾನು ಯಾರು' ಎನ್ನುವುದರ ಅರಿವನ್ನು ಮೂಡಿಸುವ ಎರಡು ಗಂಟೆಯ ಜ್ಞಾನ-ಪ್ರಯೋಗವಾಗಿರುತ್ತದೆ. ಅದರಲ್ಲಿ ನಲ್ವತೆಂಟು ನಿಮಿಷಗಳ ಆತ್ಮ-ಅನಾತ್ಮದ ಭೇದವನ್ನು ಮಾಡುವ ಭೇದವಿಜ್ಞಾನದ ವಾಕ್ಯಗಳನ್ನು ಹೇಳಲಾಗುತ್ತದೆ, ಅವುಗಳನ್ನು ನಂತರ ಎಲ್ಲರೂ ಪುನರಾವರ್ತಿಸಿ ಹೇಳಬೇಕಾಗುತ್ತದೆ. ಆಮೇಲೆ ಒಂದು ಗಂಟೆಗಳ ಕಾಲ ಐದು ಆಜ್ಞೆಗಳನ್ನು ವಿವರಣೆಯೊಂದಿಗೆ ತಿಳಿಸಿಕೊಡಲಾಗುತ್ತದೆ. ಅದನ್ನು ಪಾಲಿಸಿಕೊಂಡು ಇನ್ನು ಮುಂದೆ ಯಾವ ರೀತಿಯಲ್ಲಿ ಜೀವನವನ್ನು ನಡೆಸಿಕೊಂಡು ಹೋದಾಗ ಕರ್ಮಗಳ ಬಂಧನವಾಗುವುದಿಲ್ಲ ಹಾಗು ಹಿಂದಿನ ಕರ್ಮಗಳು ಸಹ ಹೇಗೆ ಸಂಪೂರ್ಣವಾಗಿ ಕ್ಷಯವಾಗುತ್ತವೆ ಎನ್ನುವುದರ ಬಗ್ಗೆ ತಿಳಿಸಿಕೊಡಲಾಗುತ್ತದೆ. ಜೊತೆಗೆ ನಿಮಗೆ, 'ನಾನು ಶುದ್ಧಾತ್ಮ' ಎನ್ನುವುದು ಸಹ ಲಕ್ಷ್ಯಯಲ್ಲಿ ಶಾಶ್ವತವಾಗಿ ಉಳಿದುಕೊಳ್ಳುತ್ತದೆ.

## ಅವಶ್ಯಕತೆ, ಗುರುವಿನದ್ದೋ ಅಥವಾ ಜ್ಞಾನಿಯದ್ದೋ?

**ಪ್ರಶ್ನಕರ್ತ:** ದಾದಾ, ನಿಮ್ಮನ್ನು ಭೇಟಿಯಾಗುವ ಮೊದಲೇ ನಾವು ಬೇರೆ ಗುರುಗಳನ್ನು ಆಶ್ರಯಿಸಿದ್ದರೆ, ಆಗೇನು ಮಾಡಬೇಕು?

**ದಾದಾಶ್ರೀ:** ಅವರ ಬಳಿಗೆ ಹೋಗುವುದಕ್ಕೇನು ಅಡ್ಡಿಯಿಲ್ಲ. ಹೋದರೂ, ಹೋಗದೆ ಇದ್ದರೂ ತೊಂದರೆಯಿಲ್ಲ. ನಿಮಗೆ ಹೋಗಬೇಕೆಂದಿದ್ದರೆ ಹೋಗಬಹುದು, ಬೇಡವೆನಿಸಿದರೆ ಹೋಗದೆಯೂ ಇರಬಹುದು. ಆದರೆ, ನಮ್ಮಿಂದ ಅವರಿಗೆ ಬೇಸರವಾಗಬಾರದು ಎನ್ನುವುದಕ್ಕೋಸ್ಕರವಾಗಿ ಹೋಗಿಬರುವುದು ಒಳ್ಳೆಯದು. ನಾವು ಅವರೊಂದಿಗೆ ವಿನಯದಿಂದ ಇರಬೇಕು. ಈ ಜ್ಞಾನವನ್ನು ತೆಗೆದುಕೊಳ್ಳುವ ಮೊದಲು ಬಹಳಷ್ಟು ಮಂದಿ ಕೇಳುತ್ತಾರೆ, 'ಇನ್ನು ನಾನು ಗುರುವನ್ನು ಬಿಟ್ಟುಬಿಡಬೇಕೇ?' ಎಂದು. ಆಗ ನಾನು ಅವರಿಗೆ ತಿಳಿಹೇಳುತ್ತೇನೆ, 'ಬಿಡಬೇಕಾಗಿಲ್ಲ, ಅವರ ಕೃಪೆಯಿಂದಲೇ ನೀವು ಇಲ್ಲಿಯವರೆಗೆ ಬರಲು ಸಾಧ್ಯವಾಗಿರುವುದಾಗಿದೆ.' ಗುರುಗಳಿಂದಾಗಿ ಮನುಷ್ಯರು ಧಾರ್ಮಿಕ ಜೀವನವನ್ನು ನಡೆಸುತ್ತಿರುವುದಾಗಿದೆ. ಗುರು ಇಲ್ಲದೆ ಹೋಗಿದ್ದರೆ, ಧರ್ಮವು ಇಲ್ಲ, ಏನೂ ಇಲ್ಲ. ಹಾ. ನೀವು ಗುರುಗಳಿಗೆ ತಿಳಿಸಬಹುದು, 'ನನಗೆ ಜ್ಞಾನಿಗಳ ಸಂಪರ್ಕವಾಗಿದೆ, ಅವರನ್ನು ಭೇಟಿಯಾಗಲು ಹೋಗುತ್ತಿದ್ದೇನೆ' ಎಂದು. ಎಷ್ಟೋ ಜನರು ತಮ್ಮ ಗುರುಗಳನ್ನೂ ಸಹ ಜೊತೆಯಲ್ಲಿ ಕರೆದುಕೊಂಡು ನಮ್ಮಲ್ಲಿಗೆ ಬಂದಿದ್ದಾರೆ. ಅವರ ಗುರುಗಳು ಸಹ ಒಪ್ಪಿಕೊಂಡು ಬರುವುದಕ್ಕೆ ಕಾರಣವೇನೆಂದರೆ, ಗುರುಗಳಿಗೂ ಕೂಡಾ ಮೋಕ್ಷ ಬೇಕಾಗಿದೆ! ಹೇಗೆ ಸಂಸಾರದ ಜ್ಞಾನವು ಗುರು ಇಲ್ಲದೆ ಸಾಧ್ಯವಿಲ್ಲವೋ ಹಾಗೆಯೇ ಮೋಕ್ಷದ

ಜ್ಞಾನವನ್ನು ಕೂಡಾ ಪ್ರತ್ಯಕ್ಷ ಜ್ಞಾನಿ ಇಲ್ಲದೆ ಸಾಧ್ಯವಿಲ್ಲ. ವ್ಯವಹಾರದಲ್ಲಿನ ಗುರುಗಳು ವ್ಯವಹಾರದ ತಿಳುವಳಿಕೆಯನ್ನು ನೀಡುವುದಕ್ಕಾಗಿ ಇರುತ್ತಾರೆ ಹಾಗು ಜ್ಞಾನಿ ಪುರುಷರು ನಿಶ್ಚಯಕ್ಕಾಗಿ (ನಿಜ ಸ್ವರೂಪದ ಅರಿವು ಮೂಡಿಸುವುದಕ್ಕಾಗಿ) ಇರುವುದಾಗಿದೆ. ವ್ಯವಹಾರವು 'Relative' ಆಗಿದೆ ಹಾಗು ನಿಶ್ಚಯವು 'Real' ಆಗಿದೆ. 'Realtive'ಗಾಗಿ ಗುರುವಿನ ಅವಶ್ಯಕತೆ ಇದೆ ಹಾಗು 'Real'ಗಾಗಿ ಜ್ಞಾನಿ ಪುರುಷರ ಅವಶ್ಯಕತೆ ಇದೆ.

# 7) ಮೋಕ್ಷದ ಸ್ವರೂಪವೇನು?

## ಮೋಕ್ಷವೇ ಧ್ಯೇಯವಾಗಿರಬೇಕು

**ಪ್ರಶ್ನಕರ್ತ:** ಮನುಷ್ಯನಾದವನು ಯಾವ ಗುರಿಯನ್ನು ಹೊಂದಿರಬೇಕು?

**ದಾದಾಶ್ರೀ:** ಮೋಕ್ಷಕ್ಕೆ ಹೋಗಲೇ ಬೇಕು! ಎನ್ನುವ ಧ್ಯೇಯವನ್ನು ಹೊಂದಿರಬೇಕು. ನಿಮಗೂ ಕೂಡಾ ಮೋಕ್ಷಕ್ಕೆ ಹೋಗಬೇಕೆನ್ನುವುದಿದೆ ಅಲ್ಲವೇ? ಎಲ್ಲಿಯವರೆಗೆ ಹೀಗೆ ಅಲೆದಾಡುತ್ತಲೇ ಇರುವುದು? ಅನಂತ ಜನ್ಮಗಳಿಂದ ಅಲೆದು, ಅಲೆದು..., ಇನ್ನೇನೂ ಅಲೆದಾಟದಲ್ಲಿ ಬಾಕಿ ಉಳಿಸಿಲ್ಲವಲ್ಲ! ಪ್ರಾಣಿಗತಿಯಲ್ಲಿ, ಮನುಷ್ಯಗತಿಯಲ್ಲಿ, ದೇವಗತಿಯಲ್ಲಿ ಎಲ್ಲಾ ಕಡೆ ಅಲೆದಾಡುತ್ತಾ, ಅಲೆದಾಡುತ್ತಲೇ ಇರುವುದಾಗಿದೆ. ಹೀಗೆ ಯಾಕಾಗಿ ಅಲೆದಾಡಬೇಕಾಗಿ ಬಂದಿದೆ? ಏಕೆಂದರೆ, 'ನಾನು ಯಾರು?' ಎನ್ನುವುದನ್ನು ತಿಳಿಯಲು ತಿಳಿಯಲಾಗದೆ; ತನ್ನಯ ಸ್ವರೂಪವನ್ನು ಅರಿತುಕೊಳ್ಳಲು ಸಾಧ್ಯವಾಗದೆ ಅಲೆದಾಡುತ್ತಿರುವುದಾಗಿದೆ. ತನ್ನಯ ಸ್ವರೂಪವನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. 'ತಾನು ಯಾರು?' ಎನ್ನುವುದನ್ನು ತಿಳಿದುಕೊಳ್ಳಬೇಕೋ, ಬೇಡವೋ? ಇಷ್ಟೆಲ್ಲಾ ಅಲೆದಾಡಿದರೂ ಸಹ ನಿಮ್ಮಿಂದ ತಿಳಿಯಲು ಸಾಧ್ಯವಾಗಲಿಲ್ಲವೇ? ಕೇವಲ ಹಣದ ಸಂಪಾದನೆಯ ಹಿಂದೆಯೇ ಓಡುವುದಾಗಿದೆ ಅಲ್ಲವೇ? ಮೋಕ್ಷದ ಬಗ್ಗೆ ಕೂಡಾ ಸ್ವಲ್ಪ ವಿಚಾರ ಮಾಡಬೇಕೋ, ಬೇಡವೋ?

**ಪ್ರಶ್ನಕರ್ತ:** ಹೌದು. ಮಾಡಬೇಕು.

**ದಾದಾಶ್ರೀ:** ಸ್ವತಂತ್ರರಾಗಬೇಕಾದ ಅವಶ್ಯಕತೆಯು ಇದೆಯಲ್ಲವೇ? ಹೀಗೆ ಪರವಶರಾಗಿ ಎಲ್ಲಿಯವರೆಗೆ ಇರುವುದು?

**ಪ್ರಶ್ನಕರ್ತ:** ಸ್ವತಂತ್ರರಾಗಬೇಕು ಎನ್ನುವುದಕ್ಕಿಂತ ಹೆಚ್ಚಾಗಿ, ಸ್ವತಂತ್ರರಾಗಲು ಬೇಕಾದ ತಿಳುವಳಿಕೆಯನ್ನು ಅರಿತುಕೊಳ್ಳಬೇಕಾಗಿರುವುದು ಮುಖ್ಯವೆಂದು ನಾನು ಅಂದುಕೊಂಡಿದ್ದೇನೆ.

**ದಾದಾಶ್ರೀ:** ಹೌದು. ಅಲ್ಲಿ ತಿಳುವಳಿಕೆಯ ಅಗತ್ಯವಿದೆ. ಆ ತಿಳುವಳಿಕೆ ನಿಮಗೆ ದೊರೆತುಬಿಟ್ಟರೆ, ಬಹಳವಾಯಿತು. ನಂತರ ಸ್ವತಂತ್ರರಾಗದೆ ಇದ್ದರೂ ಪರವಾಗಿಲ್ಲ, ಆಗುವುದು, ಬಿಡುವುದು ಅದೆಲ್ಲಾ ನಂತರದ ಮಾತಾಗಿದೆ. ಆದರೆ ತಿಳುವಳಿಕೆಯ ಅವಶ್ಯಕತೆಯು ಬಹಳ ಮುಖ್ಯವಾಗಿದೆ. ಅಲ್ಲವೇ? ಮೊದಲಿಗೆ ತಿಳುವಳಿಕೆಯು ದೊರೆತುಬಿಟ್ಟರೆ ಸಾಕು, ಬೇಕಾದಷ್ಟಾಯಿತು.

## ಸ್ವ-ಭಾವಕ್ಕೆ ಬರುವುದು ಕಷ್ಟಕರವಾದ ಕೆಲಸವಲ್ಲ

ಮೋಕ್ಷ ಅಂದರೆ, 'ತಾನು', ತನ್ನಯ ಸ್ವ-ಭಾವಕ್ಕೆ ಬಂದುಬಿಡುವುದೇ ಆಗಿದೆ, ಹಾಗೂ ಸಂಸಾರ ಅಂದರೆ, 'ತಾನು', ತನ್ನಯ ವಿಶೇಷ ಭಾವದೊಂದಿಗೆ ಹೋಗಿಬಿಡುವುದು. ಹಾಗಾದರೆ, ಇದರಲ್ಲಿ ಯಾವುದು ಸುಲಭ? ತನ್ನಯ ಸ್ವ-ಭಾವಕ್ಕೆ ಬಂದುಬಿಡುವುದೇ ಸುಲಭವಾಗಿದೆ. ಆದುದರಿಂದ ಮೋಕ್ಷವು ಕಠಿಣವಲ್ಲ. ಯಾವಾಗಲೂ ಸಂಸಾರವೇ ಕಷ್ಟಕರವಾಗಿದೆ. ಮೋಕ್ಷ ಎನ್ನುವುದು ಖಿಚಡಿ ತಯಾರಿಸುವುದಕ್ಕಿಂತಲೂ ಬಹಳ ಸುಲಭವಾಗಿದೆ. ಖಿಚಡಿ ತಯಾರಿಸಬೇಕಿದ್ದರೆ ಸೌದೆಗಾಗಿ ಹೊಂದಿಸಬೇಕು, ಬೇಳೆ-ಅಕ್ಕಿಗಾಗಿ ತರಬೇಕು, ಪಾತ್ರೆ ಬೇಕು, ನೀರು ಬೇಕು, ಇಷ್ಟೆಲ್ಲಾ ಸಜ್ಜುಗೊಳಿಸಿಕೊಂಡ ಬಳಿಕ ಖಿಚಡಿಯನ್ನು ತಯಾರಿಸಲು ಸಾಧ್ಯ. ಆದರೆ, ಮೋಕ್ಷ ಎನ್ನುವುದು ಖಿಚಡಿ ತಯಾರಿಸುವುದಕ್ಕಿಂತಲೂ ಬಹಳ ಸುಲಭ. ಆದರೆ, ಮೋಕ್ಷದಾತ ಜ್ಞಾನಿ ಪುರುಷರು ಸಿಗಬೇಕಾಗಿದೆ. ಅವರಿಲ್ಲದೆ ಮೋಕ್ಷವು ಎಂದಿಗೂ ಪ್ರಾಪ್ತಿಯಾಗುವುದಿಲ್ಲ. ಕೋಟ್ಯಾಂತರ ಜನ್ಮಗಳನ್ನು ಪಡೆದರೂ ಸಹ ಮೋಕ್ಷವನ್ನು ಹೊಂದಲು ಸಾಧ್ಯವಿಲ್ಲ. ಹೀಗೆಯೇ ಎಷ್ಟೊಂದು ಜನ್ಮಗಳನ್ನು ಪಡೆಯುತ್ತಲೇ ಇರವುದಾಗಿದೆಯಲ್ಲವೇ?

## ಶ್ರಮದಿಂದ ಮೋಕ್ಷ ಸಿಗುವುದಿಲ್ಲ

ನಾವು ನಿಮಗೆ, 'ನಮ್ಮ ಬಳಿಗೆ ಬಂದು ಮೋಕ್ಷವನ್ನು ಪ್ರಾಪ್ತಿಮಾಡಿಕೊಳ್ಳಿ!' ಎಂದು ಹೇಳುವಾಗ ಜನರು ಮನಸ್ಸಿನಲ್ಲಿ ವಿಚಾರ ಮಾಡುತ್ತಾರೇನೆಂದರೆ, 'ನಾವಾಗಿಯೇ ಏನೂ ಶ್ರಮ ಪಡದೆ, ಹೀಗೇ ಸುಮ್ಮನೆ ನೀಡುವ ಜ್ಞಾನವು ಹೇಗೆ ಕೆಲಸಕ್ಕೆ ಬರುತ್ತದೆ?!' ಎಂದು. ಸರಿ

ಹಾಗಾದರೆ, ನೀವೇ ಶ್ರಮಪಟ್ಟು ತರಲು ಸಾಧ್ಯವಿದ್ದರೆ ತೆಗೆದುಕೊಂಡು ಬನ್ನಿ. ನೋಡಿ, ಅವರ ತಿಳುವಳಿಕೆ ಎಷ್ಟರ ಮಟ್ಟಿಗಿದೆ (!) ಅಲ್ಲವೇ? ಕೇವಲ ಶ್ರಮ ಪಡುವುದರಿಂದ ಏನೂ ದೊರಕುವುದಿಲ್ಲ. ಶ್ರಮದಿಂದ ಎಂದೂ ಯಾರಿಗೂ ಮೋಕ್ಷವು ದೊರಕಿಲ್ಲ.

**ಪ್ರಶ್ನಕರ್ತ:** ಮೋಕ್ಷವನ್ನು ಕೊಡಲಾಗುವುದು ಅಥವಾ ತೆಗೆದುಕೊಳ್ಳಲಾಗುವುದು ನಿಜವೇ?

**ದಾದಾಶ್ರೀ:** ಕೊಡುವುದು-ತೆಗೆದುಕೊಳ್ಳುವುದು ಇರುವುದೇ ಇಲ್ಲ. ಎಲ್ಲವೂ ನೈಮಿತ್ತಿಕವಾಗಿದೆ. ನೀವು, ನನಗೆ ಭೇಟಿಯಾಗುವುದು ಸಹ ಒಂದು ನಿಮಿತ್ತವಾಗಿದೆ. ನಿಮಿತ್ತದ ಅವಶ್ಯಕತೆ ಇರುವುದು ನಿಜ. ಅದುಬಿಟ್ಟರೆ, ಬೇರೆ ಯಾರೂ ಕೊಡುವವರೂ ಇಲ್ಲ ಅಥವಾ ಯಾರೂ ತೆಗೆದುಕೊಳ್ಳುವವರೂ ಸಹ ಇರುವುದಿಲ್ಲ. ಕೊಡುವವರೆಂದು ಯಾರನ್ನು ಹೇಳುವುದಾಗಿದೆ? ತನ್ನಯ ಮನೆಯ ವಸ್ತುವನ್ನು ಬೇರೆಯವರಿಗೆ ಕೊಟ್ಟರೆ, ಆಗ ಅವರನ್ನು ಕೊಡುವವರೆಂದು ಹೇಳುತ್ತಾರೆ. ಇಲ್ಲಿಯಂತೂ ನಿಮ್ಮ ಮನೆಯಲ್ಲಿಯೇ ಮೋಕ್ಷವಿದೆ, ಅದನ್ನು ನಾವು ತೋರಿಸಿಕೊಡಬೇಕಾಗಿದೆ, realise ಮಾಡಿಸಿಕೊಡಬೇಕಾಗಿದೆ. ಆದುದರಿಂದ, ಕೊಡುವುದು-ತೆಗೆದುಕೊಳ್ಳುವುದು ಇರುವುದೇ ಇಲ್ಲ. ಕೇವಲ ನಿಮಿತ್ತವಾಗಿದೆ.

## ಮೋಕ್ಷ ಎಂದರೆ ಸನಾತನ ಸುಖ

**ಪ್ರಶ್ನಕರ್ತ:** ಮೋಕ್ಷವನ್ನು ಪಡೆದು ಮಾಡಬೇಕಾಗಿರುವುದಾದರೂ ಏನು?

**ದಾದಾಶ್ರೀ:** ಹೆಚ್ಚಿನ ಜನರು ನನ್ನನ್ನು ಭೇಟಿಯಾದಾಗ ಹೇಳುವುದೇನೆಂದರೆ, 'ನನಗೆ ಮೋಕ್ಷವು ಬೇಕಾಗಿಲ್ಲ' ಎಂದು. ಆಗ ನಾನು ಅವರಿಗೆ ಹೇಳುತ್ತೇನೆ, 'ನೋಡಿ, ಮೋಕ್ಷದ ಅವಶ್ಯಕತೆಯಿಲ್ಲ. ಆಯಿತು, ಬೇಡ ಅದನ್ನು ಬಿಟ್ಟುಬಿಡಿ. ಆದರೆ, ನಿಮಗೆ ಜೀವನದಲ್ಲಿ ಸುಖ ಬೇಕೋ ಅಥವಾ ದುಃಖವೇ ಹಿತವಾಗಿದೆಯೋ?' ಆಗ ಹೇಳುತ್ತಾರೆ, 'ಇಲ್ಲ, ಸುಖವಂತೂ ಅಗತ್ಯವಾಗಿ ಬೇಕಾಗಿದೆ.'ಎನ್ನುತ್ತಾರೆ. ಆಗ ನಾನು ಅವರಿಗೆ, 'ಸುಖದಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾದರೂ ನಡೆಯುತ್ತದೆಯೇ? ಎಂದು ಕೇಳಿದರೆ, ಅವರು ಹೇಳುತ್ತಾರೆ, 'ಇಲ್ಲ, ಸುಖವಂತೂ ಸಂಪೂರ್ಣವಾಗಿ ಬೇಕು.'ಎಂದಾಗ, ನಂತರ ನಾನು ಹೇಳಿದೆ, 'ಹಾಗಿದ್ದರೆ, ಸಂಪೂರ್ಣ ಶಾಶ್ವತವಾದ ಸುಖದ ಬಗ್ಗೆಯೇ ಮಾತನಾಡೋಣ! ಮೋಕ್ಷದ ಮಾತನ್ನು ಬಿಟ್ಟುಬಿಡಿ.' ಎಂದು. ನಿಜವಾಗಿ ಮೋಕ್ಷ ಅಂದರೆ ಯಾವ ವಸ್ತು ಎನ್ನುವುದನ್ನು ಈ ಲೋಕದ ಜನರು ತಿಳಿದುಕೊಂಡಿಲ್ಲ. ಅದನ್ನು ಕೇವಲ ಶಬ್ದದ ರೂಪದಲ್ಲಿ ಉಪಯೋಗಿಸುತ್ತಾರೆ. ಜನರು ಮೋಕ್ಷದ ಬಗ್ಗೆ ಏನೆಂದು

ತಿಳಿದಿದ್ದಾರೆಂದರೆ, ಮೋಕ್ಷ ಎನ್ನುವ  ಹೆಸರಿನ ಯಾವುದೋ ಸ್ಥಳವಿದೆ ಹಾಗು ಅಲ್ಲಿಗೆ ಹೋದರೆ ನಮಗೆ ಮೋಕ್ಷದ ಆನಂದವು ಸಿಗುತ್ತದೆ! ಎಂದು. ಆದರೆ, ಅದು ಹಾಗಲ್ಲ.

## ಮೋಕ್ಷದಲ್ಲಿ ಎರಡು stage

**ಪ್ರಶ್ನಕರ್ತ:** ಮೋಕ್ಷದ ಅರ್ಥವು ಸಾಧಾರಣ ರೀತಿಯಿಂದ ಅದು, ನಮಗೆ ಜನ್ಮ-ಮರಣದಿಂದ ಮುಕ್ತಿ ಎಂದು ಹೇಳುವುದಾಗಿದೆ.

**ದಾದಾಶ್ರೀ:** ಹೌದು, ನಿಜ. ಆದರೆ, ಮುಕ್ತಿ ಎನ್ನುವುದು ಅಂತಿಮವಾಗಿದೆ. ಅದು  second stage ಮೋಕ್ಷವಾಗಿದೆ. ಆದರೆ, ಮೊದಲನೆಯ 'stage'ನ ಮೋಕ್ಷದಲ್ಲಿ  ಮೊದಲು ಸಂಸಾರದಲ್ಲಿ ದುಃಖದ ಅಭಾವವು ಅನುಭವಕ್ಕೆ ಬರಬೇಕು. ಸಂಸಾರವು ದುಃಖಮಯವಾಗಿದ್ದರೂ, ಅವು ನಮಗೆ ಸ್ಪರ್ಶಿಸಬಾರದು, ಉಪಾಧಿಯಲ್ಲೂ ಸಮಾಧಿಯ ಸ್ಥಿತಿಯು ಇರಬೇಕು. ಇದು, ಮೊದಲನೆಯ ಮೋಕ್ಷ. ಹಾಗೂ ನಂತರ ಈ ದೇಹವು ಕಳಚಿದ ಮೇಲೆ ಆತ್ಯಂತಿಕ ಮೋಕ್ಷವನ್ನು ಹೊಂದುವುದಾಗಿದೆ. ಆದರೆ, ಮೊದಲ ಮೋಕ್ಷವು, ಇಲ್ಲೇ ಹೊಂದಬೇಕಾಗಿದೆ. ನನ್ನ ಆ ಮೋಕ್ಷವು ಆಗಲೇ ಉಂಟಾಗಿಬಿಟ್ಟಿದೆಯಲ್ಲಾ! ಸಂಸಾರದಲ್ಲಿ ಇದ್ದರೂ ಸಹ ಸಂಸಾರವು ಸ್ಪರ್ಶಿಸಬಾರದು, ಅಂತಹ ಮೋಕ್ಷವು ಉಂಟಾಗಬೇಕು. ಇದಂತೂ ಈ ಅಕ್ರಮ ವಿಜ್ಞಾನದಿಂದ ಉಂಟಾಗಲು ಸಾಧ್ಯವಿದೆ.

## ಜೀವಂತವಾಗಿರುವಾಗಲೇ ಮುಕ್ತಿ

**ಪ್ರಶ್ನಕರ್ತ:** ಈಗ ಈ ಮುಕ್ತಿ ಅಥವಾ ಮೋಕ್ಷ, ಇದು ಜೀವಿಸುವಾಗಲೇ ಮುಕ್ತಿಯೋ ಅಥವಾ ಮೃತ್ಯುವಿನ ನಂತರ ಮುಕ್ತಿಯೋ?

**ದಾದಾಶ್ರೀ:** ಮೃತ್ಯುವಿನ ನಂತರದ ಮುಕ್ತಿ ಯಾರಿಗೆ ಬೇಕಾಗಿದೆ? ಮರಣದ ನಂತರ ಮುಕ್ತಿ ಸಿಗುತ್ತದೆಯೆಂದು ಹೇಳಿ ಜನರು ಎಲ್ಲರನ್ನು ಸಿಕ್ಕಿಹಾಕಿಸುತ್ತಾರೆ. ಆದರೆ, ನಾನು ಕೇಳುವುದೇನೆಂದರೆ, 'ನಂತರ ಸಿಗುವ ಮುಕ್ತಿಯನ್ನು ನನಗೆ ಈಗಲೇ ತೋರಿಸಬೇಕು, ಅದರ ಸ್ವಾಧವನ್ನು ಇಲ್ಲೇ ಸ್ವಲ್ಪವಾದರೂ ಸವಿಯುವಂತೆ ಮಾಡಬೇಕು. ಅಲ್ಲದೆ, ಮರಣದ ನಂತರ ಮೋಕ್ಷವಾಗುತ್ತದೆ ಎನ್ನುವುದಕ್ಕೆ ಏನು ಪುರಾವೆಗಳಿವೆ, ಏನು gauarantee? ಮೃತ್ಯುವಿನ ನಂತರ

ಸಾಲದ ರೂಪದಲ್ಲಿ ಸಿಗುವ ಮೋಕ್ಷದಿಂದ ನಮಗೇನು ಉಪಯೋಗ? ಸಾಲದ ರೂಪದಲ್ಲಿ ಸಿಗುವುದರಿಂದ ಪ್ರಯೋಜನವಿಲ್ಲ. ಅದಕ್ಕಿಂತ cash (ನಗದು) ಸಿಕ್ಕಿದರೆ ಒಳಿತು. ನಮಗೆ ಇಲ್ಲೇ ಜೀವಂತವಾಗಿರುವಾಗಲೇ ಮುಕ್ತಿಯನ್ನು ಪಡೆಯಬೇಕು. ಹೇಗೆ, ಜನಕ ಮಹಾರಾಜನಿಗೆ ಜೀವಂತವಾಗಿರುವಾಗಲೇ ಮುಕ್ತಿ ಪ್ರಾಪ್ತಿಯಾಗಿತ್ತು, ಎಂದು ಹೇಳುವುದನ್ನು ನೀವು ಕೇಳಿಲ್ಲವೇ?

**ಪ್ರಶ್ನಕರ್ತ:** ಕೇಳಿದ್ದೇವೆ.

# 8) ಅಕ್ರಮ ಮಾರ್ಗ ಅಂದರೇನು?

## ಅಕ್ರಮ ವಿಜ್ಞಾನದಿಂದ ವಿಶಿಷ್ಟ ರೀತಿಯ ಸಿದ್ಧಿ

**ಪ್ರಶ್ನಕರ್ತ:** ಆದರೆ, ಸಂಸಾರದಲ್ಲಿ ಇದ್ದುಕೊಂಡೇ ಆತ್ಮಜ್ಞಾನವನ್ನು ಪಡೆಯಲು ಸಾಧ್ಯವಿದೆಯೇ?

**ದಾದಾಶ್ರೀ:** ಹೌದು, ಅಂತಹ ಮಾರ್ಗವೂ ಇದೆ. ಸಂಸಾರದಲ್ಲಿ ಇದ್ದುಕೊಂಡು ಮಾತ್ರವಲ್ಲ! ಜೊತೆಗೆ ಹೆಂಡತಿ ಇದ್ದರೂ ಆತ್ಮಜ್ಞಾನವನ್ನು ಪಡೆಯಬಹುದಾಗಿದೆ. ಅಲ್ಲದೆ, ಮಕ್ಕಳು-ಮರಿಗಳ ಮದುವೆ ಹಾಗೂ ಉಳಿದೆಲ್ಲಾ ಕೆಲಸ ಕಾರ್ಯಗಳನ್ನು ಮಾಡಿಕೊಂಡೇ, ಆತ್ಮಜ್ಞಾನವನ್ನು ಹೊಂದಲು ಸಾಧ್ಯವಿದೆ. ನಾನು ಸಹ ಸಂಸಾರದಲ್ಲಿದ್ದುಕೊಂಡೇ ನಿಮಗೂ ಅದನ್ನು ಪ್ರಾಪ್ತಿಯಾಗುವಂತೆ ಮಾಡುವುದಾಗಿದೆ. ಸಂಸಾರದ ವ್ಯವಹಾರವನ್ನು ನಡೆಸಿಕೊಂಡು, ನೀವು ಸಿನಿಮಾ ನೋಡಲು ಹೋಗಬಹುದು ಹಾಗು ಇನ್ನು ಬೇರೆಲ್ಲದಕ್ಕೂ ವಿನಾಯಿತಿ ಇರುತ್ತದೆ. ಮಗನ ಮದುವೆ ಮಾಡಿ, ಮಗಳ ಮದುವೆ ಮಾಡಿ ಹಾಗು ಒಳ್ಳೆ-ಒಳ್ಳೆಯ ಬಟ್ಟೆಗಳನ್ನು ಮಕ್ಕಳಿಗೆ ಕೊಡಿಸಿ-ತೊಡಿಸಿ ಮದುವೆ ಮಾಡಿ. ಇದಕ್ಕಿಂತಲೂ ನಿಮಗೆ ಇನ್ನೂ ಹೆಚ್ಚಿನ ಬೇರೆ ಏನಾದರೂ gauarantee ಬೇಕಾಗಿದೆಯೇ?

**ಪ್ರಶ್ನಕರ್ತ:** ಇಷ್ಟೆಲ್ಲಾ ವಿನಾಯಿತಿಗಳಿರುವಾಗ ಖಂಡಿತವಾಗಿ ಸಂಸಾರದಲ್ಲಿದ್ದರೂ ಆತ್ಮಜ್ಞಾನದಲ್ಲಿ ಇರಬಹುದು.

**ದಾದಾಶ್ರೀ:** ಎಲ್ಲದರಲ್ಲಿಯೂ ವಿನಾಯಿತಿ! ಇದು ಅಪವಾದದ ಮಾರ್ಗವಾಗಿದೆ. ಇದರಲ್ಲಿ ನೀವೇನೂ ಶ್ರಮವಹಿಸಬೇಕಾಗಿಲ್ಲ. ನಿಮ್ಮ ಆತ್ಮವನ್ನು ನಿಮ್ಮ ಕೈಗೆ ಕೊಟ್ಟುಬಿಡುತ್ತೇನೆ. ಆಮೇಲೆ ಆತ್ಮದಲ್ಲೇ ವಿಹಾರ ಮಾಡುತ್ತಾ, ಈ ಅಕ್ರಮ 'ಲಿಫ್ಟ್'ನಲ್ಲಿ ಕುಳಿತುಕೊಂಡಿರ ಬೇಕು ಅಷ್ಟೇ! ಅದು ಬಿಟ್ಟು, ನೀವು ಬೇರೇನೂ ಮಾಡಬೇಕಾಗಿಲ್ಲ. ಆತ್ಮಜ್ಞಾನದ ಪ್ರಾಪ್ತಿಯ ನಂತರ ನಿಮಗೆ

ಕರ್ಮಬಂಧನವು ಇರುವುದಿಲ್ಲ. ನಮ್ಮ ಆಜ್ಞೆಗಳ ಪಾಲನೆಯನ್ನು ಮಾಡುವುದರಿಂದ ಕೇವಲ ಇನ್ನೊಂದು ಜನ್ಮದ ಕರ್ಮವನ್ನಷ್ಟೇ ಕಟ್ಟಿಕೊಳ್ಳಲಾಗುತ್ತದೆ. ನಮ್ಮ ಆಜ್ಞೆಯಲ್ಲಿ ಇರಬೇಕೆಂದು ಹೇಳುವುದು ಯಾಕೆಂದರೆ? ಹೇಗೆ, ಈ 'ಲಿಫ್ಟ್'ನಲ್ಲಿ ಕುಳಿತುಕೊಂಡ ಮೇಲೆ ಎಲ್ಲಿಯಾದರೂ ಆಚೆ-ಈಚೆ ಕೈಯಾಡಿಸಿದರೆ ತೊಂದರೆಗೆ ಸಿಲುಕುವುದಾಗಿದೆ!

**ಪ್ರಶ್ನಕರ್ತ:** ಹಾಗಿದ್ದರೆ, ಮುಂದಿನ ಜನ್ಮಇರುವುದು ನಿಜಾ?

**ದಾದಾಶ್ರೀ:** ಹಿಂದೆ ಜನ್ಮ ಇತ್ತು ಹಾಗು ಮುಂದಿನ ಜನ್ಮವೂ ಇದೆ. ಆದರೆ, ಈ ಜ್ಞಾನವು ಹೇಗೆಂದರೆ, ನಿಮಗೆ ಈ ಜ್ಞಾನದ ನಂತರ ಇನ್ನೇನಿದ್ದರೂ ಒಂದು-ಎರಡು ಜನ್ಮಗಳು ಮಾತ್ರ ಉಳಿದಿರುವುದಾಗಿದೆ. ಇದರಲ್ಲಿ ಮೊಟ್ಟಮೊದಲಿಗೆ ಅಜ್ಞಾನದಿಂದ ಮುಕ್ತಿ ಹೊಂದಲಾಗುತ್ತದೆ. ನಂತರ ಒಂದು-ಎರಡು ಜನ್ಮದಲ್ಲಿ ಅಂತಿಮದ ಮುಕ್ತಿಯು ಪ್ರಾಪ್ತಿಯಾಗುತ್ತದೆ. ಈಗಿನ ಈ ಕಾಲದ ಪ್ರಭಾವದಿಂದಾಗಿ ಒಂದು ಜನ್ಮವಂತೂ ಬಾಕಿ ಉಳಿಯುವುದೇ ಆಗಿದೆ, ಅಂತಹ ಕಾಲವಾಗಿದೆ.

ನೀವು ಸಮಯ ಮಾಡಿಕೊಂಡು ನನ್ನಲ್ಲಿಗೆ ಬರಬೇಕು. ನಾವು ನಿರ್ಧರಿಸಲಾಗಿರುವ ದಿನದಂದು ನೀವು ಬರಬೇಕು. ಆ ದಿವಸ ಅಜ್ಞಾನದಿಂದ ನಿಮ್ಮನ್ನು ಕಟ್ಟಿಹಾಕಿರುವ ಹಗ್ಗವನ್ನು ಕತ್ತರಿಸಿ ಬಿಡುತ್ತೇವೆ. ಒಮ್ಮೆ ಕತ್ತರಿಸಿದರೆ ಮುಗಿಯಿತು. ನಂತರ ಪ್ರತಿನಿತ್ಯ ಸತ್ಸಂಗದಲ್ಲಿ ಮಾತುಕತೆಗಳನ್ನು ನಡೆಸುವುದಾಗಿದೆ. ಆದರೆ, ನಾವು ನಿರ್ಧರಿಸಿರುವ ದಿನದಂದು ಮಾತ್ರ ನಿಮ್ಮನ್ನು ಸುತ್ತಿಕೊಂಡಿರುವ ಅಜ್ಞಾನದ ಹಗ್ಗವನ್ನು ಕತ್ತರಿಸಿಬಿಡುತ್ತೇವೆ. ಆ ಕ್ಷಣದಲ್ಲೇ ನಿಮಗೆ ಬಿಡುಗಡೆಯ ಅನುಭವವಾಗುತ್ತದೆ. ಮುಕ್ತತೆಯ ಅನುಭವವಾಗುವುದೆಂದರೆ, ಅದು ಹರಟೆ ಮಾತಲ್ಲ. ಜ್ಞಾನವಿಧಿಯಲ್ಲಿ ನಾವು ನಿಮ್ಮನ್ನು ಮುಕ್ತರನ್ನಾಗಿಸಿ ಬಿಡುತ್ತೇವೆ.

ಈ 'ಜ್ಞಾನ'ವನ್ನು ನೀಡುವ ದಿವಸ ಏನಾಗುತ್ತದೆ? ಆ ಜ್ಞಾನಾಗ್ನಿಯಲ್ಲಿ ನಿಮ್ಮೆಲ್ಲಾ ಕರ್ಮಗಳು ಭಸ್ಮವಾಗಿ ಬಿಡುತ್ತವೆ. ಎರಡು ಪ್ರಕಾರದ ಕರ್ಮಗಳು ಭಸ್ಮವಾಗುತ್ತವೆ. ಹಾಗು ಒಂದು ಪ್ರಕಾರದ ಕರ್ಮ ಮಾತ್ರ ಉಳಿದುಕೊಂಡಿರುತ್ತದೆ. ಯಾವ ಕರ್ಮಗಳು ಆವಿಯ ರೂಪದಲ್ಲಿರುತ್ತವೆ, ಅವುಗಳು ನಾಶವಾಗುತ್ತವೆ. ಯಾವ ಕರ್ಮಗಳು ನೀರಿನ ರೂಪದಲ್ಲಿರುತ್ತವೆ, ಅವುಗಳೂ ಕೂಡಾ ನಾಶವಾಗುತ್ತವೆ. ಆದರೆ, ಯಾವ ಕರ್ಮಗಳು ಮಂಜುಗಡ್ಡೆಯ ರೂಪದಲ್ಲಿರುತ್ತವೆ, ಅವುಗಳು ಮಾತ್ರ ನಾಶವಾಗುವುದಿಲ್ಲ. ಮಂಜುಗಡ್ಡೆಯ ರೂಪದಲ್ಲಿರುವಂತಹ ಕರ್ಮಗಳನ್ನು ಅನುಭವಿಸಲೇ ಬೇಕಾಗಿದೆ. ಕಾರಣವೇನೆಂದರೆ, ಅವುಗಳು ಮಂಜುಗಡ್ಡೆಯಂತೆ ಗಟ್ಟಿಯಾಗಿರುತ್ತವೆ, ಅಂತಹ ಕರ್ಮಗಳು ಫಲವನ್ನು ನೀಡಲು ಪೂರ್ಣ ರೀತಿಯಿಂದ ಸಿದ್ಧಗೊಂಡಿರುತ್ತವೆ ಮತ್ತು ಅವು ಫಲಕೊಡದೆ ಬಿಡುವುದಿಲ್ಲ. ಆದರೆ ನೀರಿನ ರೂಪದಲ್ಲಿದ್ದ ಹಾಗು

ಆವಿಯ ರೂಪದಲ್ಲಿದ್ದ ಕರ್ಮಗಳನ್ನು ಜ್ಞಾನಾಗ್ನಿಯು ಭಸ್ಮಮಾಡಿಬಿಡುತ್ತದೆ. ಆದುದರಿಂದಲೇ ಜ್ಞಾನವು ಪ್ರಾಪ್ತಿಯಾಗುತ್ತಿದ್ದಂತೆಯೇ ಜನರು ಒಮ್ಮೆಗೆ ಹಗುರವಾಗಿ ಬಿಡುತ್ತಾರೆ ಹಾಗೂ ಕೂಡಲೇ ಹೆಚ್ಚಿನ ಜಾಗೃತಿಯು ಉಂಟಾಗುತ್ತದೆ. ಏಕೆಂದರೆ, ಕರ್ಮಗಳು ಭಸ್ಮವಾಗದ ಹೊರತು ಮನುಷ್ಯನಿಗೆ ಹೆಚ್ಚಿನ ಜಾಗೃತಿಯು ಉಂಟಾಗಲು ಸಾಧ್ಯವೇ ಇಲ್ಲ. ಈ ಮಂಜುಗಡ್ಡೆಯಂತಿರುವ ಕರ್ಮಗಳನ್ನು ಎಲ್ಲರೂ ಅನುಭವಿಸಲೇ ಬೇಕಾಗಿರುವುದಾಗಿದೆ. ಹಾಗಾಗಿ ಅವುಗಳನ್ನು ಸಮಾಧಾನದಿಂದ ಪೂರ್ಣಗೊಳಿಸಿಕೊಳ್ಳಲು, ಎಲ್ಲಾ ರೀತಿಯ ಮಾರ್ಗಗಳನ್ನು ನಾವು, ನಿಮಗೆ ತೋರಿಸಿತ್ತೇವೆ. ಅದೇನೆಂದರೆ, 'ದಾದಾ ಭಗವಾನ್ ನಾ ಅಸೀಮ ಜೈ ಜೈಕಾರ ಹೋ' ಹೇಳಬೇಕು, 'ತ್ರಿಮಂತ್ರ' ಹೇಳಬೇಕು, ಒಂಬತ್ತು ವಾಕ್ಯಗಳಿರುವ 'ನವ್ ಕಲಮೊ' ಹೇಳಿಕೊಳ್ಳಬೇಕು.

ನಮ್ಮಿಂದ ನೀಡಲ್ಪಟ್ಟ ಜ್ಞಾನದಿಂದ ಕರ್ಮಗಳು ಭಸ್ಮವಾಗಿ ಬಿಡುವುದರ ಜೊತೆಗೆ ಆ ಕ್ಷಣದಲ್ಲೇ ನಿಮ್ಮೊಳಗೆ ಆವರಿಸಿಕೊಂಡಿರುವ ಬಹಳಷ್ಟು ಆವರಣಗಳು ಮುರಿದುಬೀಳುತ್ತವೆ. ಜೊತೆಗೆ ಭಗವಂತನ ಕೃಪೆಯು ಪ್ರಾಪ್ತಿಯಾಗುವುದರೊಂದಿಗೆ, ಸ್ವತಃ ತಾನು ಜಾಗೃತಿಯನ್ನು ಹೊಂದುವುದಾಗಿದೆ. ಈ ಜಾಗೃತಿಯು ಮತ್ತೆಂದಿಗೂ ಹೊರಟುಹೋಗುವುದಿಲ್ಲ, ಎಚ್ಚರವಾದ ಮೇಲೆ ಮತ್ತೆಂದೂ ವಿಸ್ಮೃತಗೊಳ್ಳುವುದಿಲ್ಲ. ನಿರಂತರ ಜಾಗೃತಿ ಇರುತ್ತದೆ. ಹಾಗಾಗಿ, ನಿರಂತರವಾದ ಪ್ರತೀತಿಯು ಇರುವುದೇ ಆಗಿದೆ. ಪ್ರತೀತಿ ಯಾವಾಗ ಇರುತ್ತದೆ? ಜಾಗೃತಿ ಇದ್ದಾಗ ಪ್ರತೀತಿ ಇರುತ್ತದೆ. ಮೊದಲು ಜಾಗೃತಿ ನಂತರ ಪ್ರತೀತಿ. ಜಾಗೃತಿಯಲ್ಲಿ ಅನುಭವ, ಲಕ್ಷ್ಯ(ಗುರಿ) ಹಾಗು ಪ್ರತೀತಿ, ಈ ಮೂರೂ ಇರುತ್ತವೆ. ಪ್ರತೀತಿ ಶಾಶ್ವತವಾಗಿ ಇರುತ್ತದೆ. ಲಕ್ಷ್ಯಯು ಕೆಲವು ಸಮಯದವರೆಗೆ ಇರುತ್ತದೆ. ಯಾವುದಾದರು ವ್ಯವಹಾರದಲ್ಲಿ, ಕೆಲಸದಲ್ಲಿ ತೊಡಗಿಸಿಕೊಂಡಾಗ, ಲಕ್ಷ್ಯಯು ಹೊರಟುಹೋಗುತ್ತದೆ, ಹಾಗು ಕೆಲಸಗಳಿಂದ ಮುಕ್ತರಾದಾಗ ಮತ್ತೆ ಲಕ್ಷ್ಯಯು ಹಿಂದಿರುಗುತ್ತದೆ. ಮತ್ತೆ ಈ ಅನುಭವವು ಯಾವಾಗಲೋ ಕೆಲವೊಮ್ಮೆ ಉಂಟಾಗುತ್ತದೆ. ಅದು ಯಾವಾಗ ಎಂದರೆ, ಈ ಎಲ್ಲಾ ಕೆಲಸಗಳಿಂದ ನಿವೃತ್ತರಾಗಿ ಏಕಾಂತದಲ್ಲಿ ಇರುವಾಗ ಅನುಭವದ ಸ್ವಾದವು ಉಂಟಾಗುತ್ತದೆ. ಹಾಗೂ ಈ ಅನುಭವವು ನಮಗೆ ಹೆಚ್ಚುತ್ತಾ ಹೋಗುತ್ತದೆ. ಏಕೆಂದರೆ, ಮೊದಲಿನ ಚಂದುಲಾಲ್ ಹೇಗಿದ್ದ? ಹಾಗು ಈಗಿರುವ ಚಂದುಲಾಲ್ ಹೇಗಿದ್ದಾನೆ? ಎನ್ನುವುದು ತಿಳಿದುಬರುತ್ತದೆ. ಈ ಪರಿವರ್ತನೆಯು ಯಾವುದರಿಂದಾಗಿ ಉಂಟಾಗಿದೆ? ಆತ್ಮದ ಅನುಭವದಿಂದ ಉಂಟಾಗಿದೆ. ಹಿಂದೆ ದೇಹಧ್ಯಾಸದ ಅನುಭವವಿತ್ತು ಹಾಗು ಈಗ ಆತ್ಮದ ಅನುಭವವಾಗಿದೆ.

**ಪ್ರಶ್ನಕರ್ತ:** ಆತ್ಮದ ಅನುಭವವನ್ನು ಹೊಂದಿದ ಬಳಿಕ ಏನಾಗುತ್ತದೆ?

**ದಾದಾಶ್ರೀ:** ಆತ್ಮದ ಅನುಭವವು ಉಂಟಾಯಿತೆಂದರೆ ದೇಹಧ್ಯಾಸವು ಬಿಟ್ಟುಹೋಗುತ್ತದೆ. ದೇಹಧ್ಯಾಸವು ಬಿಟ್ಟುಹೋಯಿತೆಂದರೆ, ಕರ್ಮವನ್ನು ಕಟ್ಟಿಕೊಳ್ಳುವುದು ನಿಂತುಹೋಗುತ್ತದೆ. ಹಾಗೂ ಇನ್ನು ಖಾಲಿಯಾಗುವುದು ಮಾತ್ರ ಉಳಿದಿರುತ್ತದೆ. ಇದಕ್ಕಿಂತ ಹೆಚ್ಚಿನದ್ದು ಇನ್ನೇನು ಬೇಕು?

## ಆತ್ಮ-ಅನಾತ್ಮ ನಡುವೆ ಭೇದ ರೇಖೆ

ಇದು ಅಕ್ರಮ ವಿಜ್ಞಾನವಾಗಿರುವುದರಿಂದ ಬಹಳ ಬೇಗನೆ 'ಸಮ್ಕಿತ್'(ಆತ್ಮ ಜಾಗೃತಿಯನ್ನು) ಹೊಂದಲಾಗುತ್ತದೆ. ಇಲ್ಲವಾದರೆ ಕ್ರಮಿಕ್ ಮಾರ್ಗದಲ್ಲಂತೂ, ಈಗಿನ ಈ ಕಾಲ ಚಕ್ರದಲ್ಲಿ ಸಮ್ಕಿತ್ ಹೊಂದಲು ಸಾಧ್ಯವಾಗುವಂತಹದ್ದಲ್ಲ. ಈ ಅಕ್ರಮ ವಿಜ್ಞಾನವು ಬಹಳ ಉತ್ತಮ ರೀತಿಯ ವಿಜ್ಞಾನವಾಗಿದೆ. ಆತ್ಮ ಹಾಗೂ ಅನಾತ್ಮ ಇವೆರಡರ ನಡುವೆ ಅಂದರೆ, ನಿಮ್ಮ ಹಾಗು ಪರಕೀಯ ವಸ್ತುಗಳ ನಡುವೆ ವಿಭಜನೆಯನ್ನು ಮಾಡಿಬಿಡುತ್ತೇವೆ. ಒಂದು ಭಾಗ ನಿಮ್ಮದು ಹಾಗು ಮತ್ತೊಂದು ಭಾಗ ನಿಮ್ಮದಲ್ಲ, ಹೀಗೆ Line Of Demarcation ಮಾಡಿ, ಭೇದರೇಖೆಯನ್ನು ಹಾಕಿಬಿಡುತ್ತೇವೆ. ಅಡ್ಡಬೇಲಿಯನ್ನು ನಾವು ಹಾಕಿಬಿಡುತ್ತೇವೆ. ನಂತರ ನೆರೆಯವನ ಹೊಲದ ಬೆಂಡೆಕಾಯಿಯನ್ನು ನಾವು ತಿನ್ನುವ ಹಾಗಿಲ್ಲ!

## ಮಾರ್ಗ: ಕ್ರಮ ಹಾಗು ಅಕ್ರಮ

ತೀರ್ಥಂಕರರ ಯಾವ ಜ್ಞಾನವಿದೆ, ಅದು ಕ್ರಮಿಕ್ (ಕ್ರಮಬದ್ಧವಾದ) ಮಾರ್ಗವಾಗಿದೆ. ಕ್ರಮಿಕ್ ಎಂದರೆ ಒಂದೊಂದೇ ಮೆಟ್ಟಿಲುಗಳನ್ನು, ಒಂದರ ನಂತರ ಮತ್ತೊಂದನ್ನು ಏರುತ್ತಾ ಹೋಗುವುದಾಗಿದೆ. ಕ್ರಮಿಕ್-ಮಾರ್ಗದಲ್ಲಿ ಪರಿಗ್ರಹಗಳನ್ನು ಕಡಿಮೆ ಮಾಡಿಕೊಳ್ಳುತ್ತಾ ಹೋದಹಾಗೆ ಮೋಕ್ಷವನ್ನು ತಲುಪಲಾಗುತ್ತದೆ. ಅದೂ ಕೂಡಾ ಬಹಳ ಕಾಲಗಳ ನಂತರ ಪ್ರಾಪ್ತಿಯಾಗುತ್ತದೆ. ಮತ್ತು ಈ ಅಕ್ರಮ ವಿಜ್ಞಾನ ಅಂದರೇನು? ಮೆಟ್ಟಿಲುಗಳನ್ನು ಏರಿಕೊಂಡು ಮೇಲಿನ ಮಾಳಿಗೆಗಳಿಗೆ ಹೋಗಬೇಕಾಗಿಲ್ಲ, 'ಲಿಫ್ಟ್'ನಲ್ಲಿ ಕುಳಿತುಕೊಂಡು ಸೀದಾ ಹನ್ನೆರಡನೆಯ ಮಾಳಿಗೆಗೆ ಹೋಗಿಬಿಡುವಂತಹ ಲಿಫ್ಟ್ ನಂತಹ ಮಾರ್ಗವು ಇದಾಗಿದೆ. ಅಂತಹ ಈ 'ಲಿಫ್ಟ್'ನಲ್ಲಿ ಯಾರು ಕುಳಿತುಬಿಡುತ್ತಾರೋ, ಅವರ ಕಲ್ಯಾಣವಾಗಿಬಿಡುತ್ತದೆ. ನಾನು ಕೇವಲ ಇದಕ್ಕೊಂದು ನಿಮಿತ್ತನಾಗಿದ್ದೇನೆ. ಈ 'ಲಿಫ್ಟ್'ನಲ್ಲಿ ಯಾರು ಕುಳಿತುಕೊಳ್ಳುತ್ತಾರೋ, ಅಂಥವರಿಗೆ ಪರಿಹಾರವು ದೊರಕಿಬಿಡುವುದೇ ಆಗಿದೆ!

ಪರಿಹಾರವನ್ನು ಕಂಡುಕೊಳ್ಳಲೇ ಬೇಕಾಗಿದೆ ಅಲ್ಲವೇ? ನಮಗೆ ಮೋಕ್ಷಕ್ಕೆ ಹೋಗಲೇ ಬೇಕೆನ್ನುವುದಿದ್ದರೆ, ಆಗ 'ಲಿಫ್ಟ್'ನಲ್ಲಿ ಕುಳಿತುಕೊಳ್ಳಲಾಗಿರುವುದನ್ನು ದೃಢೀಕರಿಸಿಕೊಳ್ಳಬೇಕೋ ಬೇಡವೋ? ಅದನ್ನು ದೃಢೀಕರಿಸಿಕೊಳ್ಳುವುದು ಹೇಗೆಂದರೆ, ನಮಗೆ ಕ್ರೋಧ-ಮಾನ-ಮಾಯಾ-ಲೋಭವು ಉಂಟಾಗಬಾರದು ಹಾಗು ಆರ್ತಧ್ಯಾನ-ರೌದ್ರಧ್ಯಾನ ಉಂಟಾಗಬಾರದು. ಆಗ ಕೆಲಸವು ಪೂರ್ಣಗೊಂಡಂತೆ.

## 'ನನಗೆ' ಸಿಕ್ಕಿದವರೇ ಅರ್ಹರು

**ಪ್ರಶ್ನಕರ್ತ:** ಈ ಮಾರ್ಗವು ಇಷ್ಟೊಂದು ಸರಳವಾಗಿದೆ, ಆದರೂ ಇದನ್ನು ಪಡೆಯಲು ಏನಾದರು ಅರ್ಹತೆಯನ್ನು ಹೊಂದಿರಬೇಕೋ ಅಥವಾ ಯಾರಿಗೆ ಬೇಕಾದರೂ ಪಡೆಯಬಹುದಾಗಿದೆಯೋ?

**ದಾದಾಶ್ರೀ:** ಜನರು ನನ್ನನ್ನು ಕೇಳುತ್ತಾರೆ, 'ನಾವು ನಿಜವಾಗಿ ಇದಕ್ಕೆ ಅರ್ಹರೇ?' ಎಂದು. ಆಗ ನಾನು ಹೇಳುವುದೇನೆಂದರೆ, 'ನನಗೆ ಸಿಕ್ಕಿದ್ದೀರಿ ಎಂದಮೇಲೆ ನೀವು ಅರ್ಹರೆ.' ಹೀಗೆ ಸಿಗಬೇಕಿದ್ದರು ಸಹ ಅದು, 'Scientific Circumstantial Evidence'ನಿಂದಾಗಿದೆ. ಆದುದರಿಂದ ನಮಗೆ ಯಾವ ವ್ಯಕ್ತಿ ಸಿಗುತ್ತಾರೆ, ಅವರನ್ನು ಅರ್ಹರೆಂದು ಪರಿಗಣಿಸಲಾಗುತ್ತದೆ. ಸಿಗದೆಹೋದರೆ, ಅಂಥವರಿಗೆ ಅರ್ಹತೆಯಿಲ್ಲ. ಸಿಗುವುದು ಕೂಡಾ ಯಾವುದರ ಆಧಾರದ ಮೇಲಾಗಿದೆ? ಅದೂ ಕೂಡಾ ಅರ್ಹತೆಯ ಆಧಾರದ ಮೇಲೆಯೇ ನನಗೆ ಸಿಗುತ್ತಾರೆ. ಇನ್ನೂ ಕೆಲವರಿಗೆ, ನಾನು ಸಿಕ್ಕಿದ್ದರೂ ಸಹ ಅವರಿಗೆ ಪ್ರಾಪ್ತಿಯಾಗದೆ ಹೋದರೆ, ಅದು ಅವರ ಅಂತರಾಯ(ಅಡಚಣೆಯನ್ನು ಉಂಟುಮಾಡುವಂತಹ) ಕರ್ಮವು ಅಡ್ಡಿಪಡಿಸಿರುವುದಾಗಿದೆ.

## ಕ್ರಮ ಮಾರ್ಗದಲ್ಲಿ ಮಾಡಬೇಕಾಗಿದೆ, ಹಾಗು ಅಕ್ರಮ ಮಾರ್ಗದಲ್ಲಿ ...

ಒಂದು ಸಲ ಒಬ್ಬ ವ್ಯಕ್ತಿ ನನ್ನನ್ನು ಪ್ರಶ್ನಿಸಿದರು, 'ಕ್ರಮ ಹಾಗು ಅಕ್ರಮ ಮಾರ್ಗದಲ್ಲಿ ಇರುವ ವ್ಯತ್ಯಾಸವೇನು?' ಎಂದು. ಆಗ ನಾನು ಹೇಳಿದೆ, ಕ್ರಮ ಎಂದರೆ, ಎಲ್ಲರೂ ಹೇಳುತ್ತಾರೆ, ಕೆಟ್ಟದನ್ನು ಬಿಟ್ಟು ಒಳ್ಳೆಯದನ್ನು ಮಾಡು ಎಂದು. ಹೀಗೆ ಎಲ್ಲರೂ ಹೇಳುತ್ತಲೇ ಇರುತ್ತಾರೆ, ಇದರ ಹೆಸರೇ ಕ್ರಮಿಕ್-ಮಾರ್ಗ. ಕ್ರಮ ಎಂದರೆ, ಎಲ್ಲವನ್ನು ಬಿಟ್ಟುಬಿಡಲು ಹೇಳುತ್ತಾರೆ, ಈ ಕಪಟ-ಲೋಭವನ್ನು ಬಿಟ್ಟು ಒಳ್ಳೆಯದನ್ನು ಮಾಡಿ. ಇಂತಹದ್ದನ್ನೇ ನೀವೂ ಸಹ ಇಲ್ಲಿಯವರೆಗೆ ನೋಡಿದ್ದೀರಲ್ಲವೇ?! ಅಕ್ರಮ ಎಂದರೆ, ಅಲ್ಲಿ ಮಾಡುವುದು ಏನೂ ಇಲ್ಲ. ಕರೋಮಿ-ಕರೋಸಿ-

ಕರೋತಿ ಎನ್ನುವುದು ಇಲ್ಲ! ಜೇಬಿಗೆ ಯಾರಾದರು ಕತ್ತರಿ ಹಾಕಿದರೆ, ಆಗ ಅಕ್ರಮದಲ್ಲಿ ಹೇಳುವುದೇನೆಂದರೆ, 'ಅವನು ಜೇಬು ಕತ್ತರಿಸಿಲ್ಲ, ಹಾಗು ನನ್ನ ಜೇಬಿಗೆ ಕತ್ತರಿ ಬಿದ್ದೇ ಇಲ್ಲ' ಎಂದು. ಆದರೆ, ಕ್ರಮದಲ್ಲಿ ಏನೆಂದು ಹೇಳುತ್ತಾರೆ, 'ಅವನು ಜೇಬು ಕತ್ತರಿಸಿದ್ದಾನೆ ಹಾಗು ನನ್ನ ಜೇಬನ್ನೇ ಕತ್ತರಿಸಿದ್ದಾನೆ' ಎಂದು.

ಅಕ್ರಮ ವಿಜ್ಞಾನ ಎಂದರೆ, 'lottery'ಯ ಹಾಗೆ, 'lottery'ಯಿಂದ ಬಹುಮಾನವನ್ನು ಪಡೆಯಲಾಗುತ್ತದೆ. ಆದರೆ, ಅದಕ್ಕಾಗಿ ಅವನೇನಾದರು ಕಷ್ಟಪಟ್ಟಿರುತ್ತಾನೆಯೇ? Lottery ticket ಅವನು ಕೊಂಡುಕೊಂಡ ಹಾಗೆಯೇ ಬೇರೆ ಜನರು ಕೂಡಾ ಕೊಂಡುಕೊಂಡಿದ್ದರು. ಆದರೆ, ಉಳಿದವರ ಹಣ ಕಳೆದುಕೊಂಡರು, ಅವನಿಗೆ ಕಷ್ಟಪಡದೆ ಹಣವು ದೊರಕಿತು. ಹಾಗೆಯೇ ಈ ಅಕ್ರಮ ವಿಜ್ಞಾನವು ಕೂಡಾ ತಕ್ಷಣವೇ ಮೋಕ್ಷವನ್ನು ಕೊಟ್ಟುಬಿಡುತ್ತದೆ. ಆ ಕ್ಷಣದಲ್ಲೇ ನಗದು ಹಣ!

## ಅಕ್ರಮದಿಂದ ಸಂಪೂರ್ಣ ಪರಿವರ್ತನೆ

ಅಕ್ರಮ ವಿಜ್ಞಾನವನ್ನು ಪರಮಾಶ್ಚರ್ಯವೆಂದು ಕರೆಯಲಾಗಿದೆ. ಈ ಜ್ಞಾನವನ್ನು ತೆಗೆದುಕೊಂಡ ವ್ಯಕ್ತಿಯಲ್ಲಿ ಮಾರನೆಯ ದಿನದಿಂದಲೇ ಬದಲಾವಣೆಯು ಕಂಡುಬರುತ್ತದೆ ಹಾಗೂ ಈ ವಿಜ್ಞಾನದ ಬಗ್ಗೆ ಕೇಳುವಾಗಲೇ ಜನರು ಒಪ್ಪಿಕೊಳ್ಳುವುದೊಂದೇ ಅಲ್ಲಾ, ಸೆಳೆಯಲ್ಪಟ್ಟು ಇಲ್ಲಿಗೆ ಬರುತ್ತಾರೆ.

## ಅಕ್ರಮ ಮಾರ್ಗವು ವಿಶ್ವದೆಲ್ಲೆಡೆ

ಈ ಸಂಯೋಗವಂತೂ ಬಹಳ ಉನ್ನತ ಮಟ್ಟದ್ದಾಗಿದೆ. ಹೀಗೆ ಬೇರೆಲ್ಲಿಯೂ ಉಂಟಾಗಿಲ್ಲ. ಒಬ್ಬರೇ ವ್ಯಕ್ತಿ 'ದಾದಾ'! ಅವರೊಬ್ಬರಿಂದಲೇ ಈ ಕೆಲಸವನ್ನು ಮಾಡಲು ಸಾಧ್ಯ, ಅವರಲ್ಲದೆ ಬೇರೆ ಯಾರಿಂದಲೂ ಮಾಡಲು ಸಾಧ್ಯವಿಲ್ಲ.

**ಪ್ರಶ್ನಕರ್ತ:** ಅಲ್ಲದೆ, ನಂತರವೂ ದಾದಾರವರ ಕೃಪೆ ಇರುವುದಲ್ಲವೇ?

**ದಾದಾಶ್ರೀ:** ಇದಂತೂ ಮುಂದುವರೆದುಕೊಂಡು ಹೋಗುತ್ತದೆ. ನನ್ನ ಇಚ್ಛೆ ಏನೆಂದರೆ, ಯಾರಾದರೂ ಸಿದ್ಧರಾಗಬೇಕು. ಈ ಮಾರ್ಗವನ್ನು ನಂತರ ಮುಂದುವರೆಸಿಕೊಂಡು ಹೋಗುವವರು ಬೇಕಲ್ಲವೇ?

**ಪ್ರಶ್ನಕರ್ತ:** ಬೇಕಾಗಿದೆ!

**ದಾದಾಶ್ರೀ:** ನನ್ನ ಇಚ್ಛೆಯು ಪೂರ್ಣಗೊಳ್ಳುತ್ತದೆ.

**ಪ್ರಶ್ನಕರ್ತ:** ಈಗ ಹೇಗೆ 'ಅಕ್ರಮ ವಿಜ್ಞಾನವು' ನಡೆಯುತ್ತಿದೆ, ಅದೇ ರೀತಿಯಲ್ಲಿ ಆ ನಿಮಿತ್ತದಿಂದಲೂ ನಡೆಯುತ್ತದೆ!

**ದಾದಾಶ್ರೀ:** ಇನ್ನು 'ಅಕ್ರಮ ವಿಜ್ಞಾನ'ವೇ ನಡೆಯುವುದಾಗಿದೆ. ಹೀಗೆಯೇ ಅಕ್ರಮ ವಿಜ್ಞಾನವು ಇನ್ನೊಂದೆರಡು ವರ್ಷಗಳ ಕಾಲ ನಡೆಯುತ್ತಾ ಮುಂದುವರೆದಾಗ, ಸಂಪೂರ್ಣ ವಿಶ್ವದಲ್ಲಿ ಇದರ ಬಗ್ಗೆಯ ವಿಚಾರ ಧಾರೆಯು ಹರಿಯುವುದರೊಂದಿಗೆ ವ್ಯಾಪಕವಾಗಿ ಕೊನೆಗೆ ಎಲ್ಲೆಡೆಯೂ ಪಸರಿಸಿಬಿಡುತ್ತದೆ! ಹೇಗೆ, ಸುಳ್ಳು ವಿಚಾರವನ್ನೇ ಅಷ್ಟೊಂದು ಎತ್ತರದ ಧ್ವನಿಯಲ್ಲಿ ಹೇಳುವಾಗ, ಇನ್ನು ಸತ್ಯದ ವಿಚಾರವನ್ನು ಎತ್ತರದ ಧ್ವನಿಯಲ್ಲಿ ಹೇಳಲು ಯಾಕೆ ಹಿಂಜರಿಯಬೇಕು? ಸತ್ಯದ ವಿಚಾರವು ಸ್ವಲ್ಪ ತಡವಾಗಿ ಒಪ್ಪಿಕೊಳ್ಳಲಾಗುತ್ತದೆ ಮತ್ತು ಸುಳ್ಳಿನ ವಿಚಾರವು ಬಹು ಬೇಗನೆ ಒಪ್ಪಿಕೊಂಡುಬಿಡಲಾಗುತ್ತದೆ.

## ಅಕ್ರಮದಲ್ಲಿ ಸ್ತ್ರೀ ಕೂಡಾ ಮೋಕ್ಷಕ್ಕೆ ಅರ್ಹಳು

ಜಗತ್ತಿನಲ್ಲಿ ಜನರು ಏನು ಹೇಳುತ್ತಾರೆ? ಪುರುಷರಿಗೆ ಮಾತ್ರ ಮೋಕ್ಷ ಪ್ರಾಪ್ತಿಯಾಗುತ್ತದೆ, ಸ್ತ್ರೀ ಮೋಕ್ಷಕ್ಕೆ ಅರ್ಹಳಲ್ಲ. ನಾನು ಅಂಥವರಿಗೆ ಹೇಳುತ್ತೇನೆ, 'ಸ್ತ್ರೀಯರಿಗೆ ಕೂಡಾ ಮೋಕ್ಷವು ಪ್ರಾಪ್ತಿಯಾಗುತ್ತದೆ'. ಯಾಕೆ ಆಗುವುದಿಲ್ಲವೆಂದು ಮರುಪ್ರಶ್ನಿಸಿದರೆ, ಆಗ ಹೇಳುತ್ತಾರೆ, 'ಅವರಲ್ಲಿ ಕಪಟ ಹಾಗು ಮೋಹಗಳ ಗ್ರಂಥಿಯು ಬಹಳ ದೊಡ್ಡ ಗಾತ್ರದಲ್ಲಿದೆ' ಪುರುಷರಲ್ಲಿ ಅದು ಚಿಕ್ಕದಾಗಿದ್ದು, ಸ್ತ್ರೀಯರಲ್ಲಿ ಬಹಳ ದೊಡ್ಡ ಗಾತ್ರದಲ್ಲಿ ಇರುವುದಾಗಿದೆ.'ಎಂದು.

ನಿಜವಾಗಿ ಸ್ತ್ರೀ ಕೂಡಾ ಮೋಕ್ಷಕ್ಕೆ ಹೋಗಲಾಗುತ್ತದೆ. ಯಾರು ಏನೇ ಹೇಳಿದರೂ ಸಹ, ಸ್ತ್ರೀ ಮೋಕ್ಷಕ್ಕೆ ಅರ್ಹಳೇ ಆಗಿದ್ದಾಳೆ! ಕಾರಣವೇನೆಂದರೆ, ಅವರೂ ಆತ್ಮ. ಹಾಗು ಪುರುಷನೊಟ್ಟಿಗೆ ಸಂಪರ್ಕದಲ್ಲಿ ಬಂದಿರುವುದಾಗಿದೆ. ಅವರಿಗೂ ಮೋಕ್ಷವು ಪ್ರಾಪ್ತಿಯಾಗುತ್ತದೆ, ಆದರೆ ಸ್ತ್ರೀ ಪ್ರಕೃತಿಯಲ್ಲಿ ಮೋಹವು ಬಹಳ ಬಲವಾಗಿರುವುದರಿಂದ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲಾಗುತ್ತದೆ!

## ಕೆಲಸವನ್ನು ಮಾಡಿಕೊಂಡು ಬಿಡಬೇಕು

ನಿಮ್ಮ ಕೆಲಸವನ್ನು ಮಾಡಿಕೊಂಡು ಬಿಡಬೇಕು. ಅವಕಾಶ ಸಿಕ್ಕಾಗ ಕೆಲಸವನ್ನು ಮಾಡಿಕೊಂಡು ಬಿಡಬೇಕು. ನೀವು ಕಡ್ಡಾಯವಾಗಿ ಇಲ್ಲಿಗೆ ಬರಲೇ ಬೇಕೆಂದೇನೂ ಇಲ್ಲ. ನಿಮಗೆ

ಸರಿಯೆಂದು ಕಂಡರೆ ಬನ್ನಿ! ಹಾಗು ಸಂಸಾರವು ಇಷ್ಟವಾಗುವುದಾದರೆ, ಸಾಮರ್ಥ್ಯವಿದ್ದರೆ, ವ್ಯವಹಾರವನ್ನು ನಡೆಸಿಕೊಂಡು ಹೋಗಬಹುದು. ನಮ್ಮಲ್ಲಂತೂ ಹೀಗೆಯೇ ಮಾಡಬೇಕು ಎಂದೇನೂ ಇಲ್ಲ. ಅಲ್ಲದೆ ನಿಮಗೆ, ನಾವು ಪತ್ರ ಬರೆದು ಬರಬೇಕೆಂದು ಒತ್ತಾಯಪಡಿಸುವುದು ಇಲ್ಲ. ನೀವಾಗಿಯೇ ಇಲ್ಲಿಗೆ ಬಂದಿರುವುದರಿಂದ ನಿಮಗೆ ಹೇಳುತ್ತಿದ್ದೇವೆ, 'ಸಿಕ್ಕಿರುವ ಲಾಭವನ್ನು ಉಪಯೋಗಿಸಿ ಕೊಳ್ಳಬೇಕು' ಎಂದು; ಅಷ್ಟು ಮಾತ್ರ ನಿಮಗೆ ನಾವು ಹೇಳುವುದಾಗಿದೆ. ಸಾವಿರಾರು ವರ್ಷಗಳಿಂದ ಇಂತಹ ವಿಜ್ಞಾನವು ಪ್ರಗಟಗೊಂಡಿಲ್ಲ. ಹಾಗಾಗಿ, ನಾನು ಹೇಳುವುದೇನೆಂದರೆ, ಜೀವನದಲ್ಲಿ ಇನ್ನು ಉಳಿದದ್ದು ಏನು ಬೇಕಾದರೂ ಆಗಲಿ, ಆದರೆ, ಈ ಕೆಲಸವನ್ನು (ವಿಜ್ಞಾನದ ಅರಿವನ್ನು) ಮಾಡಿಕೊಂಡು ಬಿಡಲು ನೋಡಬೇಕು.

# 9) 'ಜ್ಞಾನಿ ಪುರುಷರು' ಯಾರು?

## ಸಂತ ಪುರುಷರು : ಜ್ಞಾನಿ ಪುರುಷರು

**ಪ್ರಶ್ನಕರ್ತ:** ಈ ಎಲ್ಲಾ ಸಂತ ಪುರುಷರಿಗೂ ಹಾಗು ಜ್ಞಾನಿ ಪುರುಷರಿಗೂ ಇರುವ ವ್ಯತ್ಯಾಸವೇನು?

**ದಾದಾಶ್ರೀ:** ಸಂತರು ಎಂದು ಯಾರನ್ನು ಕರೆಯುತ್ತಾರೆ? ಯಾರು ದುರ್ಬಲತೆಗಳನ್ನು ಹೋಗಲಾಡಿಸಿ ಒಳ್ಳೆ ದಾರಿಯನ್ನು ಹಿಡಿದುಕೊಳ್ಳುವಂತೆ ಮಾಡುತ್ತಾರೆ, ಕೆಟ್ಟದ್ದನ್ನು ಮಾಡದಂತೆ ಹಾಗು ಒಳ್ಳೆಯದನ್ನು ಮಾಡುವಂತೆ ಕಲಿಸಿಕೊಡುತ್ತಾರೆ, ಅವರನ್ನು ಸಂತರೆಂದು ಕರೆಯುತ್ತಾರೆ.

**ಪ್ರಶ್ನಕರ್ತ:** ಅಂದರೆ, ಪಾಪಕರ್ಮಗಳಿಂದ ಪಾರುಮಾಡುವವರು ಸಂತರು?

**ದಾದಾಶ್ರೀ:** ಹೌದು. ಪಾಪಕರ್ಮಗಳಿಂದ ಪಾರುಮಾಡುವವರು ಸಂತರು ಹಾಗು ಪಾಪ-ಪುಣ್ಯ ಇವೆರಡೂ ಕರ್ಮಗಳಿಂದ ಪಾರುಮಾಡುವವರನ್ನು ಜ್ಞಾನಿ ಪುರುಷರೆಂದು ಕರೆಯುತ್ತಾರೆ.

ಸಂತ-ಪುರುಷರು ಸರಿಯಾದ ಮಾರ್ಗ ದರ್ಶನವನ್ನು ನೀಡುತ್ತಾರೆ ಹಾಗು ಜ್ಞಾನಿ ಪುರುಷರು ಮುಕ್ತಿಯನ್ನು ನೀಡುತ್ತಾರೆ. ಸಂತರನ್ನು ನುರಿತ ಮಾರ್ಗದರ್ಶಿಗಳೆಂದು ಕರೆಯಲಾಗುತ್ತದೆ. ನುರಿತ ಮಾರ್ಗದರ್ಶಿ ಎಂದರೆ, ಅವರು ಆ ಮಾರ್ಗವನ್ನು ತಿಳಿದಿದ್ದು, ಸ್ವತಃ ಅವರು ಕೂಡಾ ಆ ಮಾರ್ಗದಲ್ಲಿ ಸಾಗುತ್ತಲಿದ್ದು ಮತ್ತು ಬೇರೆಯವರಿಗೂ ಮಾರ್ಗ ದರ್ಶನವನ್ನು ನೀಡುತ್ತಾ ಮುನ್ನಡೆಸುತ್ತಾರೆ. 'ಬನ್ನಿ ನೀವು ಸಹ ನನ್ನೊಂದಿಗೆ' ಎಂದು ಕರೆದುಕೊಂಡು

ಹೋಗುತ್ತಾರೆ. ಹಾಗು ಜ್ಞಾನಿ ಪುರುಷರನ್ನು ಜೀವನದ ಅಂತಿಮ ಸ್ಟೇಷನ್ ಎಂದು ಕರೆಯಲಾಗುತ್ತದೆ. ಅವರಂತೂ ನಮಗೆ ಕೆಲಸವೇ ಇಲ್ಲದ ಹಾಗೆ ಪೂರ್ಣಗೊಳಿಸಿ ಬಿಡುತ್ತಾರೆ.

ಸಂತರು ಯಾರು? ನಿಜವಾದ ಸಂತರಿಗೆ ಮಮಕಾರವು ಇರುವುದಿಲ್ಲ. ಬೇರೆಯವರಲ್ಲಿ ಅಲ್ಪ-ಸ್ವಲ್ಪ ಮಮಕಾರವು ಇರುತ್ತದೆ ಹಾಗು ನಿಜವಾದ ಜ್ಞಾನಿ ಯಾರು? ಜ್ಞಾನಿ ಪುರುಷರಲ್ಲಿ ಅಹಂಕಾರ ಹಾಗೂ ಮಮಕಾರ ಎರಡೂ ಇರುವುದಿಲ್ಲ.

ಹಾಗಾಗಿ ಸಂತರನ್ನು ಜ್ಞಾನಿಗಳೆಂದು ಕರೆಯಲು ಬರುವುದಿಲ್ಲ. ಸಂತರಿಗೆ ಆತ್ಮದ ಅರಿವು ಇರುವುದಿಲ್ಲ. ಅವರಿಗೂ ಮುಂದಕ್ಕೆ ಯಾರಾದರು ಜ್ಞಾನಿ ಪುರುಷರು ಭೇಟಿಯಾದಾಗ, ಅವರಿಂದ ಆತ್ಮದ ಅರಿವು ಪ್ರಾಪ್ತಿಯಾಗುತ್ತದೆ. ಸಂತರಿಗೂ ಕೂಡಾ ಜ್ಞಾನಿಯ ಅವಶ್ಯಕತೆಯಿದೆ. ಎಲ್ಲರೂ ಅಂತಿಮವಾಗಿ ಜ್ಞಾನಿಗಳ ಬಳಿಗೆ ಬರಲೇ ಬೇಕಾಗುತ್ತದೆ, ಅದುಬಿಟ್ಟು ಬೇರೆ ದಾರಿಯೇ ಇಲ್ಲ! ಪ್ರತಿಯೊಬ್ಬರ ಇಚ್ಚೆಯು ಆತ್ಮವನ್ನು ಅರಿತುಕೊಳ್ಳುವುದೇ ಆಗಿದೆ.

'ಜ್ಞಾನಿ ಪುರುಷ'ರನ್ನು ಪ್ರಪಂಚದ ಪರಮಾಶ್ಚರ್ಯವೆಂದೇ ಕರೆಯಲ್ಪಡುತ್ತಾರೆ. ಜ್ಞಾನಿ ಪುರುಷರೆಂದರೆ, ಪ್ರಕಟಗೊಂಡು ಪ್ರಜ್ವಲಿಸುತ್ತಿರುವ ಜ್ಯೋತಿ.

## ಜ್ಞಾನಿ ಪುರುಷರ ಪರಿಚಯ

**ಪ್ರಶ್ನಕರ್ತ:** ಜ್ಞಾನಿ ಪುರುಷರನ್ನು ಹೇಗೆ ಗುರುತಿಸುವುದು?

**ದಾದಾಶ್ರೀ:** ಹೇಗೆ ಗುರುತಿಸುತ್ತೀರಾ? ಜ್ಞಾನಿ ಪುರುಷರನ್ನು ನೋಡುವಾಗಲೇ ಗುರುತಿಸಿಬಿಡಬಹುದು. ಅವರ ಸುಗಂಧವೇ ಅವರ ಪರಿಚಯವನ್ನು ಮಾಡಿಸಿಬಿಡುತ್ತದೆ. ಅವರು ಇರುವಲ್ಲಿ ವಾತಾವರಣವೇ ವಿಶಿಷ್ಟ ರೀತಿಯದ್ದಾಗಿರುತ್ತದೆ. ಅವರ ವಾಣಿಯು ಸುಮಧುರವಾಗಿರುತ್ತದೆ. ಅವರ ಮಾತಿನಿಂದಲೇ ತಿಳಿದುಬಿಡುತ್ತದೆ. ಅರೇ! ಅವರ ಕಣ್ಣುಗಳನ್ನು ನೋಡುವಾಗಲೇ ಗೊತ್ತಾಗಿಬಿಡುತ್ತದೆ. ಜ್ಞಾನಿಗಳ ಬಳಿಯಂತೂ ಇನ್ನೂ ಹೆಚ್ಚಿನ ಖಾತರಿಪಡಿಸುವ ಲಕ್ಷಣಗಳನ್ನು ಯಥೇಚ್ಛವಾಗಿ ಕಂಡುಬರುತ್ತವೆ! ಅಲ್ಲದೆ ಅವರ ಪ್ರತಿಯೊಂದು ಶಬ್ದವು ಸಹ ಅರ್ಥ ಮಾಡಿಕೊಳ್ಳಲು ಬಂದರೆ, ಅವೆಲ್ಲವೂ ಶಾಸ್ತ್ರರೂಪವೇ ಆಗಿವೆ, ಅವರ ವಾಣಿ, ವರ್ತನೆ, ವಿನಯತೆಯು ಮನೋಹರವಾಗಿರುತ್ತದೆ, ಮನಸ್ಸನ್ನು ಸೆಳೆಯುವಂತಹದ್ದಾಗಿರುತ್ತದೆ. ಇಂತಹ ಇನ್ನೂ ಅದೆಷ್ಟೋಂದು ಲಕ್ಷಣಗಳನ್ನು ಹೊಂದಿರುತ್ತಾರೆ.

ಜ್ಞಾನಿ ಪುರುಷರಲ್ಲಿ ಬುದ್ಧಿಯ ಲವಲೇಶವು ಕೂಡಾ ಇರುವುದಿಲ್ಲ! ಅವರು ಅಬುದ್ಧರು. ಹೀಗೆ ಬುದ್ಧಿಯ ಲವಲೇಶವು ಇಲ್ಲದಿರುವಂಥವರು ಎಷ್ಟು ಮಂದಿ ಸಿಗಬಹುದು? ಎಂದೋ, ಯಾರೋ ಒಬ್ಬರು ಜನಿಸುತ್ತಾರೆ, ಅವರಿಂದ ಲೋಕದ ಜನರ ಕಲ್ಯಾಣವಾಗುತ್ತದೆ. ಆಗ ಲಕ್ಷಾಂತರ ಜನರು ಈ ಭವಸಾಗರವನ್ನು ತೇಲಿ ಪಾರಾಗುತ್ತಾರೆ. ಜ್ಞಾನಿ ಪುರುಷರು ಅಹಂಕಾರ ರಹಿತರಾಗಿರುತ್ತಾರೆ, ಸಹಜವಾದ ಅಹಂಕಾರ ಕೂಡಾ ಅವರಲ್ಲಿ ಇರುವುದಿಲ್ಲ. ಜಗತ್ತಿನಲ್ಲಿ ಅಹಂಕಾರ ಇಲ್ಲದಿರುವಂತಹ ವ್ಯಕ್ತಿ ಯಾರೂ ಇಲ್ಲ. ಕೇವಲ ಜ್ಞಾನಿ ಪುರಷರು ಮಾತ್ರ ಅಹಂಕಾರ ಇಲ್ಲದೇ ಇರುವಂಥವರು.

ಜ್ಞಾನಿ ಪುರುಷರಂತೂ ಸಾವಿರಾರು ವರ್ಷಗಳಲ್ಲಿ ಎಲ್ಲೋ ಒಂದಿಬ್ಬರ ಕಾಣಲು ಸಿಗುತ್ತಾರೆ. ಉಳಿದಂತೆ ಸಂತರು, ಶಾಸ್ತ್ರದ ಜ್ಞಾನಿಗಳಂತೂ ಬಹಳಷ್ಟು ಮಂದಿ ಕಾಣಲು ಸಿಗುತ್ತಾರೆ. ಹಾಗಾಗಿ ನಮ್ಮಲ್ಲಿ ಶಾಸ್ತ್ರಜ್ಞಾನದ ಪಂಡಿತರಂತೂ ಬಹಳಷ್ಟು ಮಂದಿ ಇದ್ದಾರೆ. ಆದರೆ, ಆತ್ಮದ ಜ್ಞಾನಿಗಳು ಸಿಗುವುದಿಲ್ಲ. ಯಾರು ಆತ್ಮದ ಜ್ಞಾನಿ ಇರುತ್ತಾರೆ, ಅವರಂತೂ ಪರಮ ಸುಖವನ್ನು ಹೊಂದಿರುತ್ತಾರೆ ಹಾಗು ದುಃಖವು ಅವರಿಗೆ ಕಿಂಚಿತ್ತೂ ಕೂಡಾ ಇರುವುದೇ ಇಲ್ಲ. ಹಾಗಾಗಿ, ಅಲ್ಲಿ ನಮ್ಮ ಕಲ್ಯಾಣವಾಗುತ್ತದೆ. ಯಾರು ಸ್ವತಃ ತನ್ನ ಕಲ್ಯಾಣವನ್ನು ಮಾಡಿಕೊಂಡು ಕುಳಿತುಬಿಟ್ಟಿರುತ್ತಾರೆ, ಅಂಥವರೇ ನಮ್ಮ ಕಲ್ಯಾಣವನ್ನು ಮಾಡಲು ಸಾಧ್ಯ. ಸ್ವತಃ ದಡ ಸೇರಿ ಪಾರಾಗಿರುವವರು ಉಳಿದವರನ್ನು ಪಾರುಮಾಡಲು ಸಾಧ್ಯ. ಅದುಬಿಟ್ಟು, ತಾನೇ ಮುಳುಗುತ್ತಿರುವಾಗ ಉಳಿದವರನ್ನು ದಡ ಮುಟ್ಟಿಸಲು ಎಂದಿಗೂ ಸಾಧ್ಯವಿಲ್ಲ.

# 10) ಶ್ರೀ ದಾದಾ ಭಗವಾನ್ ಯಾರು?

## 'ನಾನು' ಮತ್ತು 'ದಾದಾ ಭಗವಾನ್' ಒಂದೇ ಅಲ್ಲ

**ಪ್ರಶ್ನಕರ್ತ:** ಹಾಗಾದರೆ, ನೀವು ಹೇಗೆ 'ಭಗವಾನ್' ಎಂದು ಕರೆಸಿಕೊಳ್ಳುತ್ತೀರಾ?

**ದಾದಾಶ್ರೀ**: 'ನಾನು' ಸ್ವತಃ 'ಭಗವಾನ್' ಅಲ್ಲ. 'ದಾದಾ ಭಗವಾನ್'ರಿಗೆ ನಾನು ಸಹ ನಮಸ್ಕಾರ ಮಾಡುತ್ತೇನೆ. ನಾನು 356 ಡಿಗ್ರಿಯಲ್ಲಿದ್ದೇನೆ ಹಾಗೂ 'ದಾದಾ ಭಗವಾನ್'ರು 360 ಡಿಗ್ರಿಯ ಸಂಪೂರ್ಣತೆಯನ್ನು ಹೊಂದಿರುವವರಾಗಿದ್ದಾರೆ. ನನ್ನಲ್ಲೂ ಇನ್ನು ನಾಲ್ಕು ಡಿಗ್ರಿಯ ಕಡಿಮೆಯಿದೆ. ಆದುದರಿಂದ ನಾನು ಕೂಡಾ 'ದಾದಾ ಭಗವಾನ್'ರಿಗೆ ನಮಸ್ಕರಿಸುತ್ತೇನೆ.

**ಪ್ರಶ್ನಕರ್ತ:** ಯಾಕಾಗಿ?

**ದಾದಾಶ್ರೀ:** ಕಾರಣವೇನೆಂದರೆ, ನನಗೂ ಸಹ ನಾಲ್ಕು ಡಿಗ್ರಿ ಪೂರ್ಣಗೊಳಿಸಬೇಕಾಗಿದೆ. ನಾನು ಕೂಡಾ ಪೂರ್ಣಗೊಳಿಸಬೇಕಲ್ಲವೇ? ನಾಲ್ಕು ಡಿಗ್ರಿ ಕಡಿಮೆಯಾಗಿ ನಪಾಸು ಆಗಿರುವುದರಿಂದ, ಮತ್ತೆ ಪಾಸುಮಾಡಿಕೊಳ್ಳದಿದ್ದರೆ ಆಗುತ್ತದೆಯೇ?

**ಪ್ರಶ್ನಕರ್ತ:** ನಿಮಗೆ 'ಭಗವಾನ್' ಆಗಬೇಕೆನ್ನುವ ಮೋಹವಿರುವುದು ನಿಜವೇ?

**ದಾದಾಶ್ರೀ:** 'ಭಗವಾನ್' ಆಗಬೇಕೆನ್ನುವುದು, ನನಗೆ ಬಹಳ ಹೊರೆಯೆಂದು ಅನ್ನಿಸುತ್ತದೆ. ನಾನಂತೂ ಲಘುತ್ತಮ ಪುರುಷ. ಈ 'ವರ್ಲ್ಡ್'ನಲ್ಲಿ ನನಗಿಂತ ಲಘು ಯಾರೂ ಇಲ್ಲ. ಅಂತಹ ಲಘುತ್ತಮ ಪುರುಷ ನಾನು. ಹಾಗಾಗಿ ನನಗೆ ಭಗವಂತನಾಗಬೇಕೆನ್ನುವುದು ಬಹಳ ಹೊರೆ ಎಂದೆನ್ನಿಸುತ್ತದೆ. ಅಲ್ಲದೆ ನಾಚಿಕೆಗೇಡು ಎನ್ನಿಸುತ್ತದೆ.

**ಪ್ರಶ್ನಕರ್ತ:** ಭಗವಂತನಾಗಲು ಬೇಕಿಲ್ಲ ಎಂದಮೇಲೆ, ಆ ನಾಲ್ಕು ಡಿಗ್ರಿಯನ್ನು ಪೂರ್ಣಗೊಳಿಸಲು ಮಾಡುತ್ತಿರುವ ಪುರುಷಾರ್ಥವು ಯಾಕಾಗಿ?

**ದಾದಾಶ್ರೀ:** ಅದು ನಾನು ಮೋಕ್ಷಕ್ಕೆ ಹೋಗುವ ಸಲುವಾಗಿ ಮಾಡುವುದಾಗಿದೆ. ನಾನು ಭಗವಂತನಾಗಿ ಏನು ಮಾಡಬೇಕಾಗಿದೆ? ಭಗವಂತನೆಂದರೆ, ಭಗವತ್ ಗುಣಗಳನ್ನು ವ್ಯಕ್ತಪಡಿಸುವುದಾಗಿದೆ. ಆ ಗುಣವುಳ್ಳವರೆಲ್ಲಾ ಭಗವಂತನಂತೆ. ಭಗವಂತ ಎನ್ನುವುದು ವಿಶೇಷಣ! ಅದನ್ನು ಹೇಗೆಂದರೆ ಹಾಗೆ ತಿಳಿದುಕೊಂಡು ಮನುಷ್ಯರು ಭಗವಂತನಾಗಲು ಸಿದ್ಧರಾಗಿ ಬಿಡುತ್ತಾರೆ. ನಂತರ ಅಂಥವರನ್ನು ಜನರು ಭಗವಂತನೆಂದು ಕರೆಯಲು ಪ್ರಾರಂಭಿಸಿಬಿಡುತ್ತಾರೆ.

## ನನ್ನೊಳಗೆ ಪ್ರಕಟಗೊಂಡಿದ್ದಾರೆ, ಹದಿನಾಲ್ಕು ಲೋಕದ ಒಡೆಯ

**ಪ್ರಶ್ನಕರ್ತ:** 'ದಾದಾ ಭಗವಾನ್' ಶಬ್ದದ ಪ್ರಯೋಗವನ್ನು ಯಾರಿಗಾಗಿ ಮಾಡಿರುವುದಾಗಿದೆ?

**ದಾದಾಶ್ರೀ:** 'ದಾದಾ ಭಗವಾನ್' ಅದು ನಾನಲ್ಲ, ನಾನಂತೂ ಜ್ಞಾನಿಪುರುಷ.

**ಪ್ರಶ್ನಕರ್ತ:** ಯಾವ 'ದಾದಾ ಭಗವಾನ್'?

**ದಾದಾಶ್ರೀ:** 'ದಾದಾ ಭಗವಾನ್', ಹದಿನಾಲ್ಕು ಲೋಕದ ಒಡೆಯರು. ಅವರು ನಿಮ್ಮಲ್ಲಿಯೂ ಇದ್ದಾರೆ, ಆದರೆ ನಿಮ್ಮಲ್ಲಿ ಪ್ರಕಟಗೊಂಡಿಲ್ಲ. ನಿಮ್ಮೊಳಗೆ ಅವ್ಯಕ್ತ ರೂಪದಲ್ಲಿ ಇದ್ದಾರೆ ಹಾಗು ನನ್ನೊಳಗೆ ವ್ಯಕ್ತಗೊಂಡಿದ್ದಾರೆ. ಯಾರು ವ್ಯಕ್ತಗೊಂಡಿದ್ದಾರೆ, ಅವರೇ ಫಲವನ್ನು

ನೀಡುವಂಥವರಾಗಿದ್ದಾರೆ. ಯಾವುದೇ ವಿಚಾರವಿರಲಿ, ಒಂದು ಸಲ ನಮ್ಮಿಂದ ಹೇಳಲ್ಪಟ್ಟರೆ ಸಾಕು, ಆ ಕೆಲಸವು ನೆರವೇರಿ ಬಿಡುವಂಥದ್ದಾಗಿದೆ. ಆದರೆ, ನನ್ನೊಳಗಿರುವ ಅವರನ್ನು ಗಮನದಲ್ಲಿರಿಸಿ ಹೇಳಿದರೆ ಮಾತ್ರ ಕಲ್ಯಾಣವಾಗುತ್ತದೆ, ಹಾಗು ಸಂಸಾರದ ವಿಚಾರದಲ್ಲಿ ಯಾವೆಲ್ಲಾ ಅಡಚಣೆಗಳಿವೆ ಅವುಗಳೆಲ್ಲವೂ ದೂರವಾಗುತ್ತವೆ. ಆದರೆ ಅಲ್ಲಿ ಲೋಭವನ್ನು ಮಾಡಲು ಹೋಗಬಾರದು. ಲೋಭವನ್ನು ಮಾಡಲು ಹೋದರೆ, ಅದಕ್ಕೆ ಕೊನೆಯೇ ಇಲ್ಲ. ನಿಮಗೆ ಈಗ ಅರ್ಥವಾಯಿತೇ? 'ದಾದಾ ಭಗವಾನ್' ಅಂದರೆ ಯಾರು? ಎಂದು.

ಇಲ್ಲಿ ಯಾರು ಕಾಣಿಸುತ್ತಿದ್ದಾರೆ, ಅವರು 'ದಾದಾ ಭಗವಾನ್' ಅಲ್ಲ. ನಿಮಗೆ ಕಾಣಿಸುತ್ತಿರುವವನನ್ನೇ 'ದಾದಾ ಭಗವಾನ್' ಎಂದು ತಿಳಿದಿರುವಿರಿ ಅಲ್ಲವೇ? ಆದರೆ ಕಾಣಿಸುತ್ತಿರುವವನು, ಭಾದ್ರಣ್ ಹಳ್ಳಿಯ ಪಟೇಲ್; ನಾನು 'ಜ್ಞಾನಿ ಪುರುಷ' ಹಾಗು ನನ್ನೊಳಗೆ ಪ್ರಕಟಗೊಂಡು ವಿರಾಜಮಾನರಾಗಿರುವವರು 'ದಾದಾ ಭಗವಾನ್'. ಹದಿನಾಲ್ಕು ಲೋಕದ ಒಡೆಯ, ನನ್ನೊಳಗೆ ಪ್ರಕಟವಾಗಿದ್ದಾರೆ. ಅವರನ್ನು ನಾನು ನೋಡಿದ್ದೇನೆ, ಸ್ವತಃ ಅನುಭವವು ಕೂಡಾ ಉಂಟಾಗಿದೆ. ಹಾಗಾಗಿ ಗ್ಯಾರೆಂಟಿಯಿಂದ ಹೇಳುತ್ತಿದ್ದೇನೆ, ಅವರು ನನ್ನೊಳಗೆ ಪ್ರಕಟಗೊಂಡಿದ್ದಾರೆ ಎಂದು.

ಅಲ್ಲದೆ, ಇಲ್ಲಿ ಮಾತುಗಳನ್ನು ಆಡುತ್ತಿರುವವರು ಯಾರು? ಟೇಪ್-ರೆಕಾರ್ಡರ್ ಮಾತನಾಡುತ್ತಿದೆ ಏಕೆಂದರೆ, 'ದಾದಾ ಭಗವಾನ್'ರಲ್ಲಿ ಮಾತನಾಡುವ ಶಕ್ತಿ ಇರುವುದಿಲ್ಲ, ಹಾಗಾಗಿ ಈ 'ಪಟೇಲ್' ಅವನಂತೂ 'ಟೇಪ್-ರೆಕಾರ್ಡರ್'ನ ಆಧಾರದಿಂದ ಮಾತನಾಡುತ್ತಾನೆ. ಏಕೆಂದರೆ 'ಭಗವಾನ್' ಹಾಗು 'ಪಟೇಲ್' ಇಬ್ಬರು ಬೇರ್ಪಡಲಾಗಿದೆ. ಹಾಗಾಗಿ, ಅಲ್ಲಿ ಅಹಂಕಾರ ಮಾಡಲು ಸಾಧ್ಯವಿಲ್ಲ. ಅದು ಟೇಪ್-ರೆಕಾರ್ಡರ್ ಮಾತನಾಡುತ್ತಿರುವುದು, ನಾನು ಅದರ ಜ್ಞಾತಾ-ದೃಷ್ಟಾ ಆಗಿದ್ದೇನೆ. ನಿಮ್ಮಲ್ಲಿಯೂ ಟೇಪ್-ರೆಕಾರ್ಡರ್ ಮಾತನಾಡುತ್ತಿದೆ, ಆದರೆ ನಿಮ್ಮ ಮನಸ್ಸಿನಲ್ಲಿ 'ನಾನು ಮಾತನಾಡುತ್ತಿದ್ದೇನೆ' ಎನ್ನುವ ಗರ್ವರಸವು (ಅಹಂಕಾರವು) ಉತ್ಪನ್ನವಾಗುತ್ತದೆ. ಅದು ಬಿಟ್ಟರೆ, ನಾನು ಕೂಡಾ ದಾದಾ ಭಗವಾನರಿಗೆ ನಮಸ್ಕಾರ ಮಾಡುತ್ತೇನೆ. ನಮ್ಮದು ಸಹ 'ದಾದಾ ಭಗವಾನ್'ರ ಜೊತೆ ಭಿನ್ನತೆಯ ವ್ಯವಹಾರವೇ ಆಗಿದೆ. ಬೇರಿದ್ದು ವ್ಯವಹರಿಸುವುದಾಗಿದೆ. ಆದರೂ ಜನರು ಏನೆಂದು ತಿಳಿಯುತ್ತಾರೆ, ನಾನೇ 'ದಾದಾ ಭಗವಾನ್' ಎಂದು. ಇಲ್ಲ, ನಾನೇ ದಾದಾ ಭಗವಾನ್ ಹೇಗೆ ಆಗಲು ಸಾಧ್ಯ? ಇವನು ಭಾದ್ರಣ್ ಹಳ್ಳಿಯ ಪಟೇಲ.

# 11) ಅಕ್ರಮ ಮಾರ್ಗವು ಈಗಲೂ ಚಾಲ್ತಿಯಲ್ಲಿದೆ.

## ಜ್ಞಾನಿಗಳ ವಂಶಾವಳಿ ಮುಂದುವರೆಯುತ್ತದೆ

ನಮ್ಮ ನಂತರವೂ ಜ್ಞಾನಿಗಳ ವಂಶಾವಳಿಯನ್ನು ನಾವು, ಬಿಟ್ಟುಹೋಗುತ್ತಿದ್ದೇವೆ. ನಮ್ಮ ವಾರಸುದಾರರನ್ನು ಬಿಟ್ಟುಹೋಗುತ್ತೇವೆ. ಹಾಗಾಗಿ ಜ್ಞಾನಿಗಳ ಪರಂಪರೆಯು ಮುಂದುವರೆದುಕೊಂಡು ಹೋಗುತ್ತಲೇ ಇರುತ್ತದೆ. ಆದುದರಿಂದ ಸಜೀವವಾಗಿರುವ ಮೂರ್ತಿಯನ್ನು ಕಂಡುಕೊಳ್ಳಿ. ಅವರಿಲ್ಲದೆ ಬೇರೆ ಯಾವ ಉಪಾಯವೂ ಇಲ್ಲ.

ನಾವಂತೂ ಅನೇಕರಿಗೆ ನಮ್ಮ ಕೈಯಿಂದಲೇ ಸಿದ್ಧಿಯನ್ನು ನೀಡುವುದಾಗಿದೆ. ನಂತರ ಬರುವವರಿಗೆ ಈ ಜ್ಞಾನದ ಅಗತ್ಯವು ಇದೆಯೋ, ಇಲ್ಲವೋ? ಮತ್ತೆ ಬರುವ ಜನರಿಗೂ ಈ ಮಾರ್ಗವು ಬೇಕಾಗಿದೆ ಅಲ್ಲವೇ?

## ಯಾರನ್ನು ಜಗತ್ತು ಸ್ವೀಕಾರ ಮಾಡುತ್ತದೆ, ಅವರಿಂದ ಮುಂದುವರೆಯುತ್ತದೆ

**ಪ್ರಶ್ನಕರ್ತ:** ನೀವು ಹೇಳುತ್ತೀರಿ, 'ನೀವು ಹೊರಟು ಹೋದಾಗ, ನಿಮ್ಮ ಹಿಂದೆ ನಲ್ವತ್ತು-ಐವತ್ತು ಸಾವಿರ ಜನ ರೋಧಿಸುವವರು ಇರುತ್ತಾರೆ. ಆದರೆ, ಶಿಷ್ಯನೆಂದು ಯಾರೂ ಇಲ್ಲ.' ಎಂದು. ಇಲ್ಲಿ ನೀವು ಏನನ್ನು ಹೇಳಬಯಸುತ್ತಿದ್ದೀರಿ?

**ದಾದಾಶ್ರೀ:** ನನ್ನ ಬಳಿ ಶಿಷ್ಯರೆಂದು ಒಬ್ಬರೂ ಇಲ್ಲ. ಇಲ್ಲಿ ಯಾವ ಗದ್ದುಗೆಯೂ ಇಲ್ಲ. ಗದ್ದುಗೆ ಇದ್ದರೆ, ಆ ಗದ್ದುಗೆಗೆ ವಾರಸುದಾರರು ಇರುತ್ತಾರೆ! ನೀವುಗಳು ಪಿತ್ರಾರ್ಜಿತದ (ವಂಶ ಪರಂಪರೆಯ) ರೀತಿಯಿಂದ ವಾರಸುದಾರರಾಗಿಕೊಂಡು ಬರುತ್ತೀರಾ! ಆದರೆ, ಇಲ್ಲಿ ಯಾರಿಂದ ನಡೆಸಲು ಸಾಮರ್ಥ್ಯವಿದೆಯೋ ಅವರು ಮುಂದುವರಿಸಿಕೊಂಡು ಹೋಗುತ್ತಾರೆ. ಯಾರು ಎಲ್ಲರಿಗೂ ಶಿಷ್ಯರಾಗಿ ಇರುತ್ತಾರೆ, ಅವರಿಂದ ಕೆಲಸವು ಮುಂದುವರಿಯುತ್ತದೆ. ಇಲ್ಲಿ ಏನಿದ್ದರೂ ಲೋಕದ ಜನರು ಯಾರನ್ನು ಸ್ವೀಕಾರ ಮಾಡುತ್ತಾರೆ, ಅವರಿಂದ ಮುಂದುವರಿಯುತ್ತದೆ. ಯಾರು ಲಘುತ್ತಮವನ್ನು ಹೊಂದಿರುತ್ತಾರೆ, ಅವರನ್ನು ಜಗತ್ತು ಸ್ವೀಕರಿಸುತ್ತದೆ!

# 12) ಆತ್ಮದೃಷ್ಟಿಯನ್ನು ಹೊಂದಿದ ನಂತರ...

## ಆತ್ಮಪ್ರಾಪ್ತಿಯ ಲಕ್ಷಣಗಳು

'ಜ್ಞಾನ' ಪಡೆಯುವ ಮೊದಲು ನೀವು ಚಂದುಭಾಯ್, ಹಾಗು ಈಗ ಜ್ಞಾನವನ್ನು ಪಡೆದ ನಂತರ ಶುದ್ಧಾತ್ಮ! ಇದರಿಂದ ನಿಮಗೆ ಏನಾದರೂ ಅನುಭವದಲ್ಲಿ ಬದಲಾಣೆ ಕಂಡುಬರುತ್ತಿದೆಯೇ?

**ಪ್ರಶ್ನಕರ್ತ:** ಹೌದು.

**ದಾದಾಶ್ರೀ:** 'ನಾನು ಶುದ್ಧಾತ್ಮ' ಎನ್ನುವ ಅರಿವು ನಿಮಗೆ ಎಷ್ಟು ಸಮಯ ಇರುತ್ತದೆ?

**ಪ್ರಶ್ನಕರ್ತ:** ಏಕಾಂತದಲ್ಲಿ ಒಬ್ಬನೇ ಕುಳಿತಿರುವಾಗ.

**ದಾದಾಶ್ರೀ:** ಸರಿ. ನಂತರ ನಿಮ್ಮ ಭಾವನೆಯಲ್ಲಿ ಏನೆಂದು ಇರುತ್ತದೆ? ಯಾವಾಗಲಾದರು ನಿಮಗೆ 'ನಾನು ಚಂದುಭಾಯ್' ಎನ್ನುವ ಭಾವನೆ ಉಂಟಾಗಿದೆಯೇ? ನಿಜವಾಗಿ, ಈಗ ನಿಮಗೆ, 'ನೀವು ಚಂದುಭಾಯ್' ಎನ್ನುವುದು ಎಂದಾದರೂ ಭಾಸವಾಗುತ್ತದೆಯೇ?

**ಪ್ರಶ್ನಕರ್ತ:** ಜ್ಞಾನವನ್ನು ಪಡೆದ ಮೇಲೆ ಹಾಗೆ ಅನ್ನಿಸುತ್ತಿಲ್ಲ.

**ದಾದಾಶ್ರೀ:** ಹಾ. ಜ್ಞಾನ ಪಡೆದ ನಂತರ 'ನಾನು ಶುದ್ಧಾತ್ಮ!' ಎನ್ನುವುದೊಂದೇ ಭಾವನೆಯು ಎಲ್ಲರಲ್ಲೂ ಉಂಟಾಗುತ್ತದೆ. ಹಾಗಾಗಿ 'ನೀವು ಶುದ್ಧಾತ್ಮ!' ಎನ್ನುವುದು ನಿಮಗೆ ನಿರಂತರವಾಗಿ ಭಾವನೆಯಲ್ಲಿ ಉಳಿದುಬಿಡುವುದೇ ಆಗಿದೆ.

**ಪ್ರಶ್ನಕರ್ತ:** ಆದರೆ ಅನೇಕ ಬಾರಿ ವ್ಯವಹಾರದಲ್ಲಿ ಶುದ್ಧಾತ್ಮದ ಅರಿವು ಇರುವುದಿಲ್ಲ.

**ದಾದಾಶ್ರೀ:** ಆಗ 'ನಾನು ಚಂದುಭಾಯ್' ಎಂದು ಧ್ಯಾನದಲ್ಲಿ ಇರುತ್ತದೆಯೇ? ಮೂರು ಗಂಟೆಗಳ ಕಾಲ ಶುದ್ಧಾತ್ಮ ಎನ್ನುವುದು ಧ್ಯಾನದಲ್ಲಿ ಇರುವುದಿಲ್ಲ, ಹಾಗು ಮೂರು ಗಂಟೆಗಳ ನಂತರ ನಿಮ್ಮನ್ನು, 'ನೀವು ಚಂದುಭಾಯ್ ಹೌದಾ ಅಥವಾ ಶುದ್ಧಾತ್ಮ?' ಎಂದು ಕೇಳಿದರೆ, ಆಗ ಏನು ಹೇಳುತ್ತೀರಿ?

**ಪ್ರಶ್ನಕರ್ತ:** ಶುದ್ಧಾತ್ಮ.

**ದಾದಾಶ್ರೀ:** ಹಾಗಾದರೆ, ಅದು ನಿಮ್ಮ ಧ್ಯಾನದಲ್ಲಿ ಇದೆ. ಉದಾಹರಣೆಗೆ: ಒಬ್ಬ ಸಾಹುಕಾರನಿಗೆ ಹೆಂಡ ಕುಡಿದ ಸಮಯದಲ್ಲಿ ಅವನ ಅರಿವಿಕೆ ಎಲ್ಲಾ ಹೊರಟುಹೋಗಿರುತ್ತದೆ. ಆದರೆ, ಹೆಂಡದ ಅಮಲು ಇಳಿದ ಮೇಲೆ ಆಗ?

**ಪ್ರಶ್ನಕರ್ತ:** ಆಮೇಲೆ ಜಾಗೃತಗೊಳ್ಳಲಾಗುತ್ತದೆ.

**ದಾದಾಶ್ರೀ:** ಹಾಗೆಯೇ ಇಲ್ಲಿಯು ಕೂಡಾ ಬೇರೊಂದರ ಹೊರಗಿನ ಪರಿಣಾಮವಾಗಿದೆ..

ನಾನು ನಿಮಗೆ, 'ನಿಜವಾಗಿ ನೀವು, ಚಂದುಭಾಯ್ ಹೌದಾ ಅಥವಾ ಶುದ್ಧಾತ್ಮ ಹೌದಾ?' ಎಂದು ಕೇಳಿದರೆ, ಆಗ ನೀವೇನು ಹೇಳುತ್ತೀರಿ, 'ಶುದ್ಧಾತ್ಮ!' ಹೀಗೆ ನಾನು ಕೇಳಿದಾಗಲೆಲ್ಲಾ, ನಿಮ್ಮ ಉತ್ತರವು ಇದೇ ಆಗಿದ್ದರೆ, ಆಗ ನನಗೆ ತಿಳಿಯುತ್ತದೆ, ನಮ್ಮ ಜ್ಞಾನವು ಭದ್ರವಾಗಿ ನಿಮ್ಮೊಳಗೆ ಕುಳಿತುಬಿಟ್ಟಿದೆ ಎಂದು. ನಂತರ ನೀವು ಏನೇ ಮಾಡಿದರು ಈ ಜ್ಞಾನವು ಹೊರಟುಹೋಗುವುದಿಲ್ಲ. ಇದು ಜ್ಞಾನದ ಪರಿಣಾಮವಾಗಿದೆ.

## ಬಂತು ಅಪೂರ್ವವಾದ ಅರಿವು

ಇದರ ಬಗ್ಗೆ ಶ್ರೀಮದ್ ರಾಜಚಂದ್ರರು ಏನೆಂದು ಹೇಳಿದ್ದಾರೆ? **"ಸದ್ಗುರುನಾ ಉಪದೇಶಥಿ ಆವ್ಯೋ ಅಪೂರ್ವ ಭಾನ್, ನಿಜಪದ್ ನಿಜಮಾಹಿ ಲಹ್ಯೊ, ದೂರ್ ಥಯು ಅಜ್ಞಾನ್ "** ಪೂರ್ವದಲ್ಲಿ ದೇಹಧ್ಯಾಸದ್ದೇ ಅರಿವಿತ್ತು. ಪೂರ್ವದಲ್ಲಿ ದೇಹಧ್ಯಾಸ ರಹಿತವಾದ ಅರಿವು ನಮಗೆ ಇರಲೇ ಇಲ್ಲ. ಈಗ ಅಪೂರ್ವವಾದ ಅರಿವು, ಅದು ಆತ್ಮದ ಅರಿವು ನಮಗೆ ಬಂತು. ಅದು ತನ್ನಯ ನಿಜ ಸ್ಥಾನವಾಗಿತ್ತು. ಆದರೂ 'ನಾನು ಚಂದುಭಾಯ್' ಎಂದು ಹೇಳಲಾಗಿತ್ತು, ಈಗ ಆ 'ನಾನು' ನಿಜದೊಳಗೆ ಕುಳಿತುಕೊಳ್ಳಲಾಗಿದೆ. ಯಾವ ನಿಜವಾದ ಸ್ಥಾನವಾಗಿತ್ತು, ಆ ನಿಜದಲ್ಲಿ ಕುಳಿತುಕೊಳ್ಳಲಾಗಿದೆ. ಹಾಗು ಯಾವ ಅಜ್ಞಾನವಿತ್ತು, 'ನಾನು ಚಂದುಭಾಯ್' ಎನ್ನುವ ಆ ಅಜ್ಞಾನವು ದೂರವಾಯಿತು.

## ಇದನ್ನು ದೇಹಧ್ಯಾಸವೆಂದು ಕರೆಯಲಾಗುತ್ತದೆ

ಈ ಜಗತ್ತಿನಲ್ಲಿ ಇರುವಲ್ಲಿಯವರೆಗೆ ದೇಹಧ್ಯಾಸವು ಬಿಟ್ಟುಹೋಗುವುದಿಲ್ಲ ಹಾಗೂ ತನ್ನಯ ಸ್ವರೂಪದಲ್ಲಿ ಬರಲು ಸಾಧ್ಯವಾಗುವುದಿಲ್ಲ. ಈಗ ನೀವು ಸ್ವರೂಪದಲ್ಲಿ ಇರುವುದರಿಂದ Egoism gone, ಮಮಕಾರ ಹೊರಟುಹೋಯಿತು. 'ನಾನು ಚಂದುಲಾಲ್' ಎನ್ನುವುದನ್ನು ದೇಹಧ್ಯಾಸವೆಂದು ಕರೆಯಲಾಗುತ್ತದೆ. ಹಾಗು 'ನಾನು ಶುದ್ಧಾತ್ಮ' ಎನ್ನುವ ಲಕ್ಷ್ಯಯು (ಗುರಿಯು) ಸ್ಥಿತವಾದ ಮೇಲೆ ಯಾವ ರೀತಿಯ ಅಧ್ಯಾಸವೂ ಉಳಿದಿರುವುದಿಲ್ಲ. ಈಗ ಇನ್ನೇನೂ ಉಳಿದಿಲ್ಲ. ಆದರೂ ಕೆಲವೊಮ್ಮೆ ತಪ್ಪುಗಳಾದಾಗ ಸಹಜವಾಗಿಯೇ ಕಳವಳ ಉಂಟಾಗುತ್ತದೆ.

# ಶುದ್ಧಾತ್ಮ ಸ್ಥಾನವು ಶುದ್ಧವೇ ಆಗಿದೆ

ಈ 'ಜ್ಞಾನ'ವನ್ನು ತೆಗೆದುಕೊಂಡ ಬಳಿಕ, 'ನಾನು ಮಾಡಿದ್ದೇನೆ' ಎನ್ನುವ ಮೊದಲಿಗಿದ್ದ ಭ್ರಾಂತಿಯು ಮುರಿದುಬೀಳುತ್ತದೆ. ಹಾಗಾಗಿ, ನೀವು ಶುದ್ಧವೇ ಆಗಿರುವುದಾಗಿದೆ; ಈ ಅರಿವನ್ನು ಉಳಿಸಿಕೊಳ್ಳುವ ಸಲುವಾಗಿ ಶುದ್ಧಾತ್ಮ ಎಂದು ಹೇಳುವುದಾಗಿದೆ. ಹೊರಗೆ, ಯಾರೊಂದಿಗೆ ಏನು ಬೇಕಾದರೂ ನಡೆಯಲಿ, ಯಾರನ್ನಾದರು ಚಂದುಭಾಯ್ ತೆಗಳುತ್ತಿದ್ದರು, ಬೈಯುತ್ತಿದ್ದರು ಸಹ ನೀವು ಶುದ್ಧವೇ ಆಗಿರುವುದಾಗಿದೆ. ನಂತರ ನಾವು, 'ಚಂದುಭಾಯ್'ಗೆ ಹೇಳಬೇಕು, 'ಭಾಯ್, ಬೇರೆಯವರಿಗೆ ದುಃಖವಾಗುವ ಹಾಗೆ ಯಾಕೆ ಅತಿಕ್ರಮಣ ಮಾಡುತ್ತಿದ್ದೀಯಾ? ಈಗ ಅದಕ್ಕಾಗಿ ಪ್ರತಿಕ್ರಮಣ ಮಾಡು.' ಎಂದು.

ಯಾರಿಗೇ ಆಗಲಿ ದುಃಖವಾಗುವಂತೆ ಏನನ್ನಾದರೂ ಹೇಳಲಾಗಿದ್ದರೆ, ಅದನ್ನು ಅತಿಕ್ರಮಣವೆಂದು ಕರೆಯಲಾಗುತ್ತದೆ. ಆಗ ಪ್ರತಿಕ್ರಮಣವನ್ನು ಮಾಡಬೇಕು.

ಪ್ರತಿಕ್ರಮಣ ಅಂದರೇನು? ನಿಮಗೆ, ಅದು ನಿಮ್ಮದೇ ತಪ್ಪೆಂದು ಅರಿವಿಗೆ ಬರಬೇಕು, ಆ ರೀತಿಯಲ್ಲಿ ಕ್ಷಮೆಯಾಚಿಸಬೇಕು. 'ನನ್ನಿಂದ ಇಂತಹ ದೋಷವು ಉಂಟಾಗಿದೆ ಎನ್ನುವುದು ನನ್ನ ಅರಿವಿಗೆ ಬಂದಿದೆ, ಹಾಗಾಗಿ ಮತ್ತೆ ಆ ತಪ್ಪನ್ನು ಮಾಡುವುದಿಲ್ಲವೆಂದು decide ಮಾಡುತ್ತೇನೆ. ಹೀಗೆ ನಾನು ಮಾಡುವುದು ತಪ್ಪು, ಮುಂದೆಂದೂ ಹೀಗಾಗಬಾರದು. ಎಂದಿಗೂ ಹೀಗೆ ಮಾಡುವುದಿಲ್ಲ' ಎಂದು ಪ್ರತಿಜ್ಞೆಯನ್ನು ಮಾಡಬೇಕು. ಆದರೂ ಮತ್ತೆ ಹಾಗೆಯೇ ಉಂಟಾದರೆ, ಹಾಗು ಮೇಲಿಂದ ಮೇಲೆ ಅದೇ ರೀತಿಯ ತಪ್ಪುಗಳಾಗುತ್ತಿದ್ದರೆ ಮತ್ತೆ ಪಶ್ಚಾತ್ತಾಪವನ್ನು ಮಾಡಬೇಕು. ಅದು ಎಷ್ಟು ಬಾರಿ ಉಂಟಾಗುತ್ತದೆ, ಅಷ್ಟು ಬಾರಿ ಅದಕ್ಕೋಸ್ಕರ ಪಶ್ಚಾತ್ತಾಪವನ್ನು ಮಾಡುವುದರಿಂದ ನಿಮ್ಮಿಂದಾಗುವ ತಪ್ಪುಗಳು ಕಡಿಮೆಯಾಗುತ್ತಾ ಹೋಗುತ್ತವೆ. ಹೀಗೆ ನಿಧಾನವಾಗಿ ಕಡಿಮೆಗೊಂಡು ಕೊನೆಗೆ ಸಂಪೂರ್ಣವಾಗಿ ಅಂತ್ಯಗೊಳ್ಳುತ್ತವೆ.

**ಪ್ರಶ್ನಕರ್ತ:** ಯಾವ ವ್ಯಕ್ತಿಯೇ ಆಗಿರಲಿ, ಆ ವ್ಯಕ್ತಿಗಾಗಿ ಯಾವ ರೀತಿಯಲ್ಲಿ ಪ್ರತಿಕ್ರಮಣವನ್ನು ಮಾಡಬೇಕು?

**ದಾದಾಶ್ರೀ:** ಮನಸ್ಸು-ವಚನ-ಕಾಯ, ಭಾವಕರ್ಮ, ದ್ರವ್ಯಕರ್ಮ, ನೋಕರ್ಮ, (ಆ ವ್ಯಕ್ತಿಯ ಹೆಸರು) ಹಾಗು ಆ (ಹೆಸರಿ)ನ ಸರ್ವ ಮಾಯೆಯಿಂದ ವಿಭಿನ್ನವಾಗಿರುವ (ಅವರ) ಶುದ್ಧಾತ್ಮನನ್ನು ಗಮನದಲ್ಲಿರಿಸಿಕೊಂಡು, 'ನನ್ನಿಂದ ಏನೆಲ್ಲಾ ತಪ್ಪುಗಳನ್ನು ಮಾಡಲಾಗಿದೆ ಎಂದು ನೆನಪಿಸಿಕೊಂಡು (ಆಲೋಚನೆ), ಆ ತಪ್ಪುಗಳಿಗಾಗಿ ನನಗೆ ಪಶ್ಚಾತ್ತಾಪವು ಉಂಟಾಗುತ್ತಿದೆ

ಹಾಗೂ ಅದಕ್ಕಾಗಿ ಕ್ಷಮೆಯಾಚಿಸುತ್ತೇನೆ (ಪ್ರತಿಕ್ರಮಣ), ಅಂತಹ ತಪ್ಪುಗಳನ್ನು ಇನ್ನೆಂದಿಗೂ ಮಾಡುವುದಿಲ್ಲವೆಂದು ದೃಢವಾದ ನಿಶ್ಚಯವನ್ನು ಮಾಡುತ್ತೇನೆ.' ಹೀಗೆಂದು ಪ್ರತಿಜ್ಞೆಯನ್ನು (ಪ್ರತ್ಯಾಖ್ಯಾನ) ಮಾಡಬೇಕು. 'ನಾವು' ಸ್ವತಃ 'ಚಂದುಭಾಯ್'ಯ ಜ್ಞಾತಾ-ದೃಷ್ಟರಾಗಿದ್ದು, ಚಂದುಭಾಯ್ ಯಾವ ರೀತಿ ಪ್ರತಿಕ್ರಮಣ ಮಾಡಿದ್ದಾನೆ, ಎಷ್ಟರ ಮಟ್ಟಿಗೆ ಮಾಡಿದ್ದಾನೆ ಹಾಗು ಎಷ್ಟು ಸಲ ಮಾಡಿದ್ದಾನೆ ಎನ್ನುವುದನ್ನು ನೋಡಬೇಕು.

## ಪ್ರಜ್ಞಾ ಒಳಗಿನಿಂದಲೇ ಎಚ್ಚರಿಸುತ್ತದೆ

ಇದು ವಿಜ್ಞಾನವಾಗಿರುವುದರಿಂದ ನಮಗೆ ಅದರ ಅನುಭವವು ಉಂಟಾಗುತ್ತದೆ ಹಾಗು ಒಳಗಿನಿಂದಲೇ ಎಚ್ಚರಿಸುತ್ತದೆ. ಕ್ರಮಿಕ್-ಮಾರ್ಗದಲ್ಲಿ, ನಾವೇ ಸುಧಾರಣೆಯ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆದರೆ, ಇಲ್ಲಿ (ಅಕ್ರಮ ಮಾರ್ಗದಲ್ಲಿ) ಪ್ರಜ್ಞಾ ಶಕ್ತಿಯು ಒಳಗಿನಿಂದಲೇ ಎಚ್ಚರಿಸುತ್ತದೆ.

**ಪ್ರಶ್ನಕರ್ತ:** ಒಳಗಿನಿಂದ ಎಚ್ಚರಿಸುವುದು ಈಗ ಅನುಭವಕ್ಕೆ ಬಂದಿದೆ.

**ದಾದಾಶ್ರೀ:** ಈಗ ನಮಗೆ, ಈ ಮಾರ್ಗವು ದೊರಕಿದೆ; ಹಾಗು ಯಾವ ಶುದ್ಧಾತ್ಮದ boundary ಇದೆ, ಅದರ ದ್ವಾರದ ಒಳಗೆ ಪ್ರವೇಶವನ್ನು ಸಹ ಮಾಡಿಬಿಟ್ಟಿರುವುದಾಗಿದೆ. ಇನ್ನು ಅಲ್ಲಿಂದ ಯಾರೂ ಹಿಂದಕ್ಕೆ ಕಳುಹಿಸಲು ಸಾಧ್ಯವಿಲ್ಲ. ಯಾರಿಗೂ ಹಿಂದಕ್ಕೆ ಕಳುಹಿಸುವ ಅಧಿಕಾರವೂ ಇಲ್ಲ, ಅಂತಹ ಜಾಗಕ್ಕೆ ನೀವು ಬಂದುಬಿಟ್ಟುರುವುದಾಗಿದೆ!

ಪದೇ ಪದೇ ಎಚ್ಚರಿಕೆಯನ್ನು ಯಾರು ನೀಡುತ್ತಿದ್ದಾರೆ? ಪ್ರಜ್ಞಾ! 'ಜ್ಞಾನ'ವು ಪ್ರಾಪ್ತಿಯಾಗದ ಹೊರತು ಪ್ರಜ್ಞಾ ಪ್ರಾರಂಭವಾಗುವುದಿಲ್ಲ. ನೀವು ಸಮ್ಕಿತ್ ಹೊಂದಲಾಗಿದ್ದರೆ, ಆಗ ಪ್ರಜ್ಞಾ ಪ್ರಾರಂಭವಾಗುತ್ತದೆ. ಸಮ್ಕಿತ್ ಪ್ರಾಪ್ತಿಯಾದ ಮೇಲೆ ಪ್ರಜ್ಞಾ ಶಕ್ತಿಯು ಪ್ರಾರಂಭವಾಗುವುದು ಹೇಗೆ? ಅದು, ಬಿದಿಗೆಯ ಚಂದ್ರನ ಬೆಳಕಿನಷ್ಟು ಪ್ರಾರಂಭವಾಗಿರುತ್ತದೆ. ಅದೇ ನಮಗೆ ಸಂಪೂರ್ಣವಾಗಿ full ಪ್ರಜ್ಞಾ ಉತ್ಪನ್ನವಾಗಿ ಬಿಟ್ಟಿರುವುದಾಗಿದೆ. Full ಪ್ರಜ್ಞಾ ಅಂದರೆ, ಮೋಕ್ಷಕ್ಕೆ ಕರೆದುಕೊಂಡು ಹೋಗುವುದಕ್ಕೋಸ್ಕರವೇ ಅದು ಎಚ್ಚರಿಕೆಯನ್ನು ನೀಡುತ್ತಲಿರುತ್ತದೆ. ಹಿಂದೆ, ಭರತ ಮಹಾರಾಜನನ್ನು ಎಚ್ಚರಿಸಲು, ಎಚ್ಚರಿಸುವವನನ್ನು ಇಟ್ಟುಕೊಳ್ಳಲಾಗಿತ್ತು. ಎಚ್ಚರಿಸಲು ಕೆಲಸಗಾರನನ್ನು ನೇಮಿಸಲಾಗಿತ್ತು. ಅವನು ಪ್ರತಿ ಹದಿನೈದು ನಿಮಿಷಕ್ಕೊಮ್ಮೆ ಎಚ್ಚರಿಸಬೇಕಿತ್ತು, 'ರಾಜ ಭರತ, ಎಚ್ಚೆತ್ತುಕೋ.., ಎಚ್ಚೆತ್ತುಕೋ.., ಎಚ್ಚೆತ್ತುಕೋ..' ಎಂದು. ಹೀಗೆ ಮೂರು ಸಲ ಹೇಳಬೇಕಾಗಿತ್ತು. ಆದರೆ, ನಿಮಗೆ ಒಳಗಿನಿಂದಲೇ

ಪ್ರಜ್ಞಾ ಎಚ್ಚರಿಸುತ್ತದೆ. 'ಅದು ಹಾಗಲ್ಲ ಅಥವಾ ಹೀಗಲ್ಲ' ಎಂದು, ಪ್ರಜ್ಞಾ ನಿರಂತರವಾಗಿ ಎಚ್ಚರಿಸುತ್ತಲೇ ಇರುತ್ತದೆ. ದಿನವಿಡೀ ಎಚ್ಚರಿಕೆ ನೀಡುತ್ತಲೇ ಇರುತ್ತದೆ. ಹಾಗೂ ಇದೇ ಆತ್ಮದ ಅನುಭವವಾಗಿದೆ! ನಿರಂತರವಾಗಿ ಇಡೀ ದಿನವೆಲ್ಲಾ ಎಚ್ಚರಿಕೆಯಿಂದ ಇರಲಾಗುವುದೇ ಆತ್ಮದ ಅನುಭವ!

## ಅನುಭವವು ಒಳಗೆ ಉಂಟಾಗುವುದೇ ಆಗಿದೆ

ಯಾವ ದಿನ ಜ್ಞಾನವನ್ನು ನೀಡಲಾಗಿರುತ್ತದೆ, ಆ ದಿನದ ಅನುಭವವನ್ನು ಎಂದೂ ಮರೆತುಹೋಗುವುದಿಲ್ಲ. ನಾವು ಯಾವ ದಿನದ್ದು ಜ್ಞಾನವನ್ನು ಕೊಡಲಾಗಿರುತ್ತದೆ, ಅಂದು ಉಂಟಾಗಿರುವ ಅನುಭವವು ಸದಾಕಾಲ ಉಳಿಯುತ್ತದೆ. ಆದರೂ ನಿಮ್ಮ ಪೂರ್ವಜನ್ಮದ ಕರ್ಮಗಳು ನಿಮ್ಮನ್ನು ಆವರಿಸಿಕೊಂಡುಬಿಡುತ್ತವೆ, ಅನುಭವಿಸಲೇ ಬೇಕಾಗಿರುವಂತಹ ಬಾಕಿ ಉಳಿದಿರುವ ಕರ್ಮಗಳು ನಿಮಗೆ ಗೊಂದಲಕ್ಕೆ ಒಳಪಡಿಸುತ್ತವೆ. ಆಗ ನಾನು ಮಾಡುವುದಾದರೂ ಏನು?

**ಪ್ರಶ್ನಕರ್ತ:** ದಾದಾ, ಅವುಗಳಿಂದ ನನಗೆ ಈಗ ಅಷ್ಟೇನೂ ಗೊಂದಲಗಳು ಉಂಟಾಗುವುದಿಲ್ಲ.

**ದಾದಾಶ್ರೀ:** ಹಾಗಲ್ಲ. ನಿಮಗೆ ಉಂಟಾಗದಿರುವುದು ಬೇರೆ ವಿಚಾರವಾಗಿದೆ. ಆದರೆ ಕೆಲವೊಮ್ಮೆ ಅನುಭವಿಸಲೇ ಬೇಕಾಗಿರುವಂತಹ ಕರ್ಮಗಳು ಹೆಚ್ಚಿನ ಮಟ್ಟದಲ್ಲಿ ಬಂದು ನಿಮ್ಮನ್ನು ಆವರಿಸಿಕೊಂಡು ಬಿಡುತ್ತವೆ. ಐದು ಅನುಭವಿಸಬೇಕಾದ ಕರ್ಮಗಳಿದ್ದರೆ ಅಂಥವರಿಗೆ ಐದು ಬರುತ್ತವೆ, ಎರಡು ಅನುಭವಿಸಬೇಕಿದ್ದವರಿಗೆ ಎರಡು, ಹಾಗು ಇಪ್ಪತ್ತು ಅನುಭವಿಸಬೇಕಿದ್ದವರಿಗೆ ಇಪ್ಪತ್ತು ಬಾರಿ ಎದುರಾಗುತ್ತವೆ. ನಾನು ನಿಮ್ಮನ್ನು ಶುದ್ಧಾತ್ಮ ಸ್ಥಾನದಲ್ಲಿ ಇರಿಸಲಾಗಿದ್ದರೂ ನಂತರ ಹೊರಗಿನ ವ್ಯವಹಾರದಲ್ಲಿ ಅನುಭವಿಸಲೇ ಬೇಕಾಗಿರುವಂತಹದ್ದು ಮಾರನೇ ದಿವಸ ಎದುರಾದಾಗ, ಸ್ವಲ್ಪ suffocation ಉಂಟಾಗುತ್ತದೆ.

## ಈಗ ಉಳಿದಿರುವುದೇನು ಬಾಕಿ?

ಆಧ್ಯಾತ್ಮಿಕ ವಿಜ್ಞಾನದಲ್ಲಿ, ಒಂದು 'ಕ್ರಮ' ವಿಜ್ಞಾನ, ಮತ್ತೊಂದು 'ಅಕ್ರಮ' ವಿಜ್ಞಾನ. ಇವೆರಡು ಜ್ಞಾನವಂತೂ ವಿತರಾಗಿಗಳ ಜ್ಞಾನವೇ ಆಗಿವೆ. ಅವೆರಡರಲ್ಲೂ ವ್ಯತ್ಯಾಸವೇ ಇಲ್ಲ. ಅಕ್ರಮ್ ವಿಜ್ಞಾನದಲ್ಲಿ ನಾವು, ನಿಮಗೆ ಜ್ಞಾನವನ್ನು ನೀಡಿದ ನಂತರ ಆತ್ಮದ ಅನುಭವವು ಉಂಟಾಗ ತೊಡಗುತ್ತದೆ. ಅದರ ಬಳಿಕ ನಿಮಗೆ ಯಾವ ಕೆಲಸ ಬಾಕಿ ಉಳಿದಿದೆ? ಅದು, ಜ್ಞಾನಿ

ಪುರುಷರ ಆಜ್ಞೆಯನ್ನು ಪಾಲಿಸಬೇಕಾಗಿರುವುದು. 'ಆಜ್ಞೆಯೇ ಧರ್ಮವಾಗಿದೆ ಹಾಗು ಆಜ್ಞೆಯೇ ತಪಸ್ಸಾಗಿದೆ' ಅಲ್ಲದೆ, ನಮ್ಮ ಆಜ್ಞೆಯು ಸಂಸಾರವನ್ನು ನಡೆಸುವುದರಲ್ಲಿ ಯಾವ ತೊಂದರೆಯನ್ನೂ ಉಂಟುಮಾಡುವುದಿಲ್ಲ. ಸಂಸಾರದಲ್ಲಿ ಇದ್ದರೂ ಸಹ ಸಂಸಾರದ ಪರಿಣಾಮಗಳು ನಿಮ್ಮನ್ನು ಸ್ಪರ್ಶಿಸುವುದಿಲ್ಲ, ಅಂತಹ ಈ ಅಕ್ರಮ್ ವಿಜ್ಞಾನವಾಗಿದೆ.

ಶೀಘ್ರವಾಗಿ ಯಾರಿಗೆ ಕೇವಲ ಇನ್ನೊಂದು ಜನ್ಮದಲ್ಲೇ ಮೋಕ್ಷಕ್ಕೆ ಹೋಗಬೇಕೆಂದಿದೆ, ಅಂಥವರು ನಾವು ಹೇಳಿರುವ ಪ್ರಮಾಣದಂತೆ ಆಜ್ಞೆಯನ್ನು ಪಾಲಿಸಿದರೆ, ಇನ್ನೊಂದೇ ಒಂದು ಜನ್ಮದಲ್ಲಿ ಮೋಕ್ಷ ಪ್ರಾಪ್ತಿಯಾಗುವಂತಹ ವಿಜ್ಞಾನವು ಇದಾಗಿದೆ. ಮೋಕ್ಷ ನೀಡುವಂತಹ ವಿಜ್ಞಾನವು ಇದಾಗಿದ್ದರೂ ಸಹ, ಕಾಲದ ಪರಿಮಿತಿಯಿಂದಾಗಿ ಈ ಜನ್ಮದಲ್ಲೇ ಸೀದಾ ಇಲ್ಲಿಂದ ಮೋಕ್ಷ ಪ್ರಾಪ್ತಿಯು ಸಾಧ್ಯವಿಲ್ಲ.

## ಮೋಕ್ಷಮಾರ್ಗದಲ್ಲಿ ಆಜ್ಞೆಯೇ ಧರ್ಮ...

ಯಾರಿಗೆ ಮೋಕ್ಷಕ್ಕೆ ಹೋಗಬೇಕೆಂದಿದೆ, ಅವರಿಗೆ ಕ್ರಿಯೆಗಳನ್ನು ಮಾಡಬೇಕಾದ ಅವಶ್ಯಕತೆ ಇಲ್ಲ. ಯಾರಿಗೆ ದೇವಗತಿಗೆ ಹೋಗಬೇಕೆಂದಿದೆ, ಭೌತಿಕದ ಸುಖವನ್ನು ಅನುಭವಿಸಬೇಕೆಂದಿದೆ, ಅಂಥವರಿಗೆ ಕ್ರಿಯೆಗಳನ್ನು ಮಾಡಬೇಕಾದ ಅವಶ್ಯಕತೆಯಿದೆ. ಮೋಕ್ಷಕ್ಕೆ ಹೋಗಬೇಕೆಂದಿದ್ದರೆ, ಅಂಥವರಿಗೆ ಆತ್ಮಜ್ಞಾನ ಹಾಗು ಜ್ಞಾನಿಯ ಆಜ್ಞೆ ಇವೆರಡರ ಅವಶ್ಯಕತೆಯು ಅನಿವಾರ್ಯವಾಗಿದೆ.

ಮೋಕ್ಷಮಾರ್ಗದಲ್ಲಿ ತಪಸ್ಸು-ತ್ಯಾಗ ಇದ್ಯಾವುದನ್ನೂ ಮಾಡಬೇಕಾಗಿ ಬರುವುದಿಲ್ಲ. ಕೇವಲ ಜ್ಞಾನಿ ಪುರುಷರ ಸಾನಿಧ್ಯವು ದೊರಕಿದರೆ, ಆಗ, ಜ್ಞಾನಿಗಳ ಆಜ್ಞೆಯೇ ಧರ್ಮ ಹಾಗು ಆಜ್ಞೆಯೇ ತಪಸ್ಸು. ಹಾಗೂ ಅದುವೇ ಜ್ಞಾನ, ದರ್ಶನ, ಚಾರಿತ್ರ್ಯ ಹಾಗು ತಪಸ್ಸಾಗಿದೆ, ಇವುಗಳ ಪ್ರತ್ಯಕ್ಷ ಫಲವೇ ಮೋಕ್ಷವಾಗಿದೆ.

## 'ಜ್ಞಾನಿ'ಗಳ ಸಾಮೀಪ್ಯದಲ್ಲೇ ಇರಬೇಕು

ಜ್ಞಾನಿಯ ಬಗ್ಗೆ ಪ್ರೇಮಭಾವವು ಎಂದೂ ವ್ಯಕ್ತವಾಗಿಲ್ಲ. ಜ್ಞಾನಿಯ ಬಗ್ಗೆ ಪ್ರೇಮಭಾವವು ವ್ಯಕ್ತಗೊಂಡರೆ, ಅಂದಿನಿಂದಲೇ ಎಲ್ಲದಕ್ಕೂ ಪರಿಹಾರವು ಸಿಗುವುದಾಗಿದೆ. ಪ್ರತಿಯೊಂದು ಜನ್ಮದಲ್ಲಿಯೂ ಹೆಂಡತಿ-ಮಕ್ಕಳನ್ನು ಬಿಟ್ಟು ಬೇರೇನೂ ಇಲ್ಲವೇ ಇಲ್ಲಾ!

ಭಗವಾನ್ ಮಹಾವೀರರು ಹೇಳಿದ್ದಾರೆ, 'ಜ್ಞಾನಿ ಪುರುಷರಿಂದ ಸಮ್ಕಿತ್ ಹೊಂದಿದ ಮೇಲೆ ಜ್ಞಾನಿ ಪುರುಷರ ಹಿಂದೆ ಬೀಳಬೇಕು.'

**ಪ್ರಶ್ನಕರ್ತ**: ಅವರ ಹಿಂದೆ ಬೀಳಬೇಕೆನ್ನುವುದು ಯಾವ ಅರ್ಥದಲ್ಲಿ ಹೇಳಿರುವುದಾಗಿದೆ?

**ದಾದಾಶ್ರೀ:** ಯಾವ ಅರ್ಥ ಅಂದರೆ, ಈ ಜ್ಞಾನವು ದೊರೆತ ಮೇಲೆ ಇನ್ನ್ಯಾವ ಆರಾಧನೆಯೂ ಉಳಿದಿಲ್ಲ. ಆದರೆ, ಪ್ರಾಪ್ತಿಯಾಗಿರುವುದು ಅಕ್ರಮ್ ಜ್ಞಾನವೆಂದು ನಮಗೆ ತಿಳಿದಿದೆ. ಈ ಜ್ಞಾನವನ್ನು ಪ್ರಾಪ್ತಿಮಾಡಿಕೊಂಡ ಜನರು ಲೆಕ್ಕವಿಲ್ಲದಷ್ಟು 'ಫೈಲ್'ಗಳನ್ನು ಹೊತ್ತುಕೊಂಡು ಬಂದಿರುವುದಾಗಿದೆ. ಅಷ್ಟೊಂದೆಲ್ಲಾ 'ಫೈಲ್'ಗಳಿಂದ ನಿಮ್ಮನ್ನು ಬೇರ್ಪಡಿಸಲಾಗಿದೆ. ಆದರೆ, ಅದರರ್ಥ ನಿಮ್ಮ ಕೆಲಸ ಸಂಪೂರ್ಣವಾಗಿ ಮುಗಿದುಹೋಯಿತು ಎಂದಲ್ಲ. ಈ ಕಾಲದಲ್ಲಿ 'ಫೈಲ್'ಗಳು ವಿಪರೀತವಾಗಿರುವುದರಿಂದ, ನಿಮ್ಮನ್ನು ನಾನು ಇಲ್ಲೇ ಇರಿಸಿಕೊಂಡುಬಿಟ್ಟರೆ, ನಿಮ್ಮ 'ಫೈಲ್'ಗಳಿಂದ ಕರೆಯು ಬರುತ್ತದೆ. ಆದುದರಿಂದ ನಿಮಗೆ ವಿನಾಯಿತಿ ಕೊಡಲಾಗಿದೆ. ಅದೇನೆಂದರೆ, ಮನೆಗೆ ಹಿಂದಿರುಗಿ ಹೋಗಿ ನಿಮ್ಮೆಲ್ಲಾ 'ಫೈಲ್'ಗಳನ್ನು ಸಮಭಾವದಿಂದ (ಸಂಬಾಳಿಸಿಕೊಂಡು) ಪೂರ್ಣಗೊಳಿಸಿದ ನಂತರ ಎಲ್ಲಾ ವ್ಯವಹಾರವು ಮುಗಿದ ಮೇಲೆ ಜ್ಞಾನಿಗಳ ಸಾಮೀಪ್ಯದಲ್ಲೇ ಇದ್ದುಬಿಡಬೇಕು.

ಈಗ ನಿಮಗೆ ನಮ್ಮಿಂದ ಸಂಪೂರ್ಣವಾಗಿ ಲಾಭವನ್ನು ಪಡೆಯಲು ಸಾಧ್ಯವಾಗದೆ ಇರುವಾಗ, ನಿರಂತರ ಹಗಲು-ರಾತ್ರಿ ಜ್ಞಾನಿಗಳ ವಾಕ್ಯಗಳು ನೆನಪಾಗುತ್ತಿರಬೇಕು, ಅದೆಷ್ಟೇ 'ಫೈಲ್'ಗಳಿದ್ದರೂ ಜ್ಞಾನಿ ಪುರುಷರು ಹೇಳಿದ್ದಾರೆ, ಆಜ್ಞೆಯನ್ನು ನೀಡಿದ್ದಾರೆ, ಅದರಂತೆ 'ಫೈಲ್'ಗಳನ್ನು ಸಮಭಾವದಿಂದ ಪೂರ್ಣಗೊಳಿಸಬೇಕು ಎಂದು. ಅವರ ಆಜ್ಞೆಯೇ ಧರ್ಮವಾಗಿದೆ ಅಲ್ಲವೇ? ಅದೇ ನಿಮ್ಮ ಧರ್ಮವಾಗಬೇಕು. ಯಾವಾಗಲು ನೆನಪಿನಲ್ಲಿರಬೇಕು ಇವೆಲ್ಲಾ 'ಫೈಲ್'ಗಳು ಕಡಿಮೆಯಾದರೆ, ನಾನು ಇನ್ನೂ ಹೆಚ್ಚಿನ ಜ್ಞಾನದ ಲಾಭವನ್ನು ಪಡೆಯಬಹುದು, ಎಂದು.

## ಅಂಥವರಿಗಂತೂ ಮಹಾವಿದೇಹ ಕ್ಷೇತ್ರವು ಸಮ್ಮುಖವಾಗುತ್ತದೆ

ಯಾರಿಗೆ ಶುದ್ಧಾತ್ಮದ ಲಕ್ಷ್ಯ ಯು ಸ್ಥಿರವಾಗಿ ಇದ್ದುಬಿಡುತ್ತದೆಯೋ ಅಂಥವರು ಇನ್ನು ಈ ಭರತ ಕ್ಷೇತ್ರದಲ್ಲಿ ಇರಲು ಸಾಧ್ಯವೇ ಇಲ್ಲ. ಯಾರಿಗೆ ಆತ್ಮದ ಗುರಿ ಸ್ಥಿರವಾಗಿ ಬಿಟ್ಟಿರುತ್ತದೆಯೋ ಅಂಥವರು ಮಹಾವಿದೇಹ ಕ್ಷೇತ್ರಕ್ಕೆ ಹೋಗಲೇ ಬೇಕಾಗಿರುವುದು ನಿಯಮವಾಗಿದೆ! ಇಲ್ಲಿ, ಈ ದುಷ್ಷ ಕಾಲದಲ್ಲಿ ಇರಲು ಸಾಧ್ಯವೇ ಇಲ್ಲ. ಶುದ್ಧಾತ್ಮದ ಧ್ಯೇಯವು

ಸ್ಥಿರವಾದರೆ, ಇನ್ನು ಮಹಾವಿದೇಹ ಕ್ಷೇತ್ರದಲ್ಲಿ ಒಂದು ಅಥವಾ ಎರಡು ಜನ್ಮಗಳಲ್ಲಿ ತೀರ್ಥಂಕರರ ದರ್ಶನ ಮಾಡಿ ಮೋಕ್ಷಕ್ಕೆ ಹೊರಟುಬಿಡುವುದಾಗಿದೆ. ಅಷ್ಟೊಂದು ಸುಲಭದ, ಸರಳವಾದ ಮಾರ್ಗವಾಗಿದೆ ಇದು! ನಮ್ಮ ಆಜ್ಞೆಯಲ್ಲಿ ಇದ್ದುಬಿಡಬೇಕು.'ಆಜ್ಞೆಯೇ ಧರ್ಮ ಹಾಗು ಆಜ್ಞೆಯೇ ತಪಸ್ಸು!' ಸಮಭಾವದಿಂದ ಬಗೆಹರಿಸಿಕೊಳ್ಳಬೇಕಾಗಿದೆ. ಯಾವುದೆಲ್ಲಾ ಆಜ್ಞೆಗಳನ್ನು ತಿಳಿಸಿಕೊಡಲಾಗಿದೆ, ಅವುಗಳಲ್ಲಿ ಪರಿಪೂರ್ಣವಾಗಿ ಪಾಲಿಸಲು ಸಾಧ್ಯವಾಗದೆ ಹೋದರೂ, ಎಷ್ಟು ಪಾಲಿಸಲಾಗುತ್ತದೆಯೋ ಅಷ್ಟನ್ನು ಪಾಲಿಸಲು ಪ್ರಯತ್ನಿಸಬೇಕು. ಸಂಪೂರ್ಣವಾಗಿ ಪಾಲಿಸಿದರೆ, 'ಮಹಾವೀರ ಭಗವಾನ್'ರ ಹಾಗೆ ಇರಲು ಸಾಧ್ಯವಾಗುತ್ತದೆ! ಒಂದು Real ಹಾಗು ಮತ್ತೊಂದು Relative ಎಂದು ಅವೆರಡನ್ನು ಬೇರೆ ಬೇರೆಯಾಗಿ ನೋಡುತ್ತಲೇ ಇದ್ದಾಗ, ನಿಮ್ಮ ಚಿತ್ತವು ಬೇರೆಡೆಗೆ ಸೆಳೆಯುವುದಿಲ್ಲ. ಆದರೆ, ಮನಸ್ಸಿನಿಂದ ವಿಚಾರಗಳು ಹೊರಬರುವಾಗ, ನಿಮ್ಮ ಸ್ಥಾನವನ್ನು ನೀವು ಮರೆತುಬಿಟ್ಟಾಗ, ಸ್ವಲ್ಪ ಗೊಂದಲಕ್ಕೆ ಒಳಗಾಗಿಬಿಡುತ್ತೀರಿ.

# 13) ಐದು ಆಜ್ಞೆಗಳ ಮಹತ್ವ

## 'ಜ್ಞಾನ' ಪಡೆದುಕೊಂಡ ನಂತರದ ಸಾಧನೆ ಏನು?

**ಪ್ರಶ್ನಕರ್ತ:** ಈ ಜ್ಞಾನವನ್ನು ಪಡೆದುಕೊಂಡ ನಂತರ ಮಾಡಬೇಕಾದ ಸಾಧನೆ ಏನು?

**ದಾದಾಶ್ರೀ:** ಸಾಧನೆ ಎಂದರೆ, ಈ ಐದು ಆಜ್ಞೆಗಳನ್ನು ಪಾಲನೆ ಮಾಡುವುದಿದೆಯಲ್ಲಾ, ಅದೇ! ಈಗ ಬೇರೆ ಯಾವ ಸಾಧನೆಯನ್ನು ಮಾಡಬೇಕಾಗಿಲ್ಲ. ಬೇರೆಲ್ಲಾ ಸಾಧನೆಗಳು ಬಂಧನವನ್ನು ಉಂಟುಮಾಡುತ್ತವೆ. ಈ ಐದು ಆಜ್ಞೆಗಳು ಬಂಧನದಿಂದ ಮುಕ್ತರನ್ನಾಗಿ ಮಾಡುತ್ತವೆ.

## ಸಮಾಧಿ ಸ್ಥಿತಿಯ ಅನುಭವವಾಗುತ್ತದೆ, ಈ ಆಜ್ಞೆಗಳಿಂದ

**ಪ್ರಶ್ನಕರ್ತ:** ನಿಮ್ಮ ಯಾವ ಈ ಐದು ಆಜ್ಞೆಗಳಿವೆ, ಅವುಗಳಲ್ಲದೆ ಇನ್ನೂ ಹೆಚ್ಚಿನದ್ದೇನಾದರೂ ಇದೆಯೇ?

**ದಾದಾಶ್ರೀ:** ಐದು ಆಜ್ಞೆಗಳು ನಿಮಗೆ, ನಿಮ್ಮ ಸುತ್ತಲು ಬೇಲಿ ಇದ್ದಂತೆ. ಯಾರಿಗೂ ಒಳನುಗ್ಗಿ ನಿಮ್ಮ ವಸ್ತುಗಳನ್ನು ಕಳ್ಳತನ ಮಾಡಲು ಸಾಧ್ಯವಾಗದಂತೆ ಹಾಕಿರುವ ಬೇಲಿಯಾಗಿದೆ. ಈ ಬೇಲಿ ಭದ್ರವಾಗಿದ್ದರೆ, ಆಗ ಒಳಗೆ exact ನಾವು ನೀಡಿರುವ ಜ್ಞಾನವು ಹೇಗಿತ್ತೋ ಹಾಗೆ

ಉಳಿದುಕೊಳ್ಳುತ್ತದೆ. ಹಾಗು ಬೇಲಿಯು ಸಡಿಲಗೊಂಡರೆ, ಯಾರಾದರೂ ಬಂದು ಒಳಗೆ ಸೇರಿಕೊಂಡರೆ, ಆಗ ಕೆಟ್ಟುಹೋಗುತ್ತದೆ. ಆಗ ಮತ್ತೆ ನಾನೇ repair ಮಾಡಲು ಬರಬೇಕಾಗುತ್ತದೆ. ಹಾಗಾಗಿ ಈ ಐದು ಆಜ್ಞೆಗಳಲ್ಲಿ ನಿರಂತರವಾಗಿ ಇದ್ದರೆ, ಸಮಾಧಿ ಇರುತ್ತದೆ, ಇದಕ್ಕೆ ನಾನು ಗ್ಯಾರೆಂಟಿ ನೀಡುತ್ತೇನೆ.

ನಾನು, ಈ ಐದು ಆಜ್ಞೆಗಳ ವಾಕ್ಯಗಳನ್ನು ನಿಮ್ಮ 'ಪ್ರೊಟೆಕ್ಷನ್'ಗಾಗಿ ನೀಡುತ್ತಿದ್ದೇನೆ. ಈ ಜ್ಞಾನವನ್ನಂತೂ ನಾನು ನಿಮಗೆ ನೀಡಿದ್ದೇನೆ ಹಾಗು ಈ ಬೇಧಜ್ಞಾನದಿಂದ ಬೇರ್ಪಟ್ಟಿದ್ದೂ ಆಗಿದೆ. ಆದರೆ, ಈ ಬೇರ್ಪಟ್ಟಿರುವುದು ಇನ್ನು ಮುಂದಕ್ಕೂ ಪ್ರತ್ಯೇಕವಾಗಿಯೇ ಇರಬೇಕಾಗಿದೆ. ಆದುದರಿಂದ ಅದರ ರಕ್ಷಣೆಗಾಗಿ ಈ ಐದು ಆಜ್ಞೆಗಳನ್ನು ನೀಡುತ್ತಿರುವುದಾಗಿದೆ. ಏಕೆಂದರೆ, ಕಾಲವೇ ಹಾಗಿದೆ. ಈ ಕಲಿಯುಗವು ಎಲ್ಲವನ್ನೂ ಲೂಟಿ ದೋಚಿಕೊಂಡು ಹೋಗದಿರಲಿ ಎಂದು. ಈ ಬೋಧನೆಯ ಬೀಜವು ಚಿಗುರಲು ನೀರು ಹಾಗು ಗೊಬ್ಬರವನ್ನು ಸಿಂಪಡಿಸಿ ಬೇಕಾಗುತ್ತದೆ ಅಲ್ಲವೇ? ಜೊತೆಗೆ ರಕ್ಷಣೆಗಾಗಿ ಅದರ ಸುತ್ತಲೂ ಬೇಲಿಯನ್ನು ಹಾಕಬೇಕೋ, ಬೇಡವೋ?

## ದೃಢ ನಿಶ್ಚಯವೇ ಆಜ್ಞೆಯನ್ನು ಪಾಲಿಸಲು ಪ್ರೇರೇಪಿಸುತ್ತದೆ

ದಾದಾರವರ ಆಜ್ಞೆಯನ್ನು ಪಾಲಿಸಬೇಕೆಂದು ನಿಶ್ಚಯಿಸುವುದೇ ಬಹಳ ಘನವಾದ ವಿಚಾರವಾಗಿದೆ. ನಮ್ಮ ಆಜ್ಞೆಯನ್ನು ಪಾಲಿಸುವುದಾಗಿ ನಿರ್ಧರಿಸಬೇಕಾಗಿದೆ. ನಿಮ್ಮಿಂದ ಆಜ್ಞೆಯನ್ನು ಪಾಲಿಸಲಾಗಿದೆಯೋ ಅಥವಾ ಇಲ್ಲವೋ ಎಂದೇನೂ ನೋಡಬೇಕಾಗಿಲ್ಲ. ಆಜ್ಞೆಯನ್ನು ಎಷ್ಟು ಪಾಲಿಸಲಾಗುತ್ತದೆ ಅಷ್ಟು ಒಳಿತು. ಆದರೆ, ಆಜ್ಞೆಯನ್ನು ಪಾಲಿಸಲೇ ಬೇಕೆನ್ನುವ ನಿಶ್ಚಯವು ದೃಢವಾಗಿರಬೇಕು.

**ಪ್ರಶ್ನಕರ್ತ:** ಪಾಲಿಸುವಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾದರೆ ತೊಂದರೆಯಿಲ್ಲವೇ?

**ದಾದಾಶ್ರೀ:** ತೊಂದರೆ ಏನೂ ಇಲ್ಲ. ಆದರೆ, ನಾವು ನಿರ್ಧರಿಸಬೇಕು, 'ಆಜ್ಞೆಯನ್ನು ಪಾಲಿಸಲೇ ಬೇಕು!' ಎಂದು. ಬೆಳಿಗ್ಗೆ ಏಳುವಾಗಲೇ ನಿರ್ಧರಿಸಬೇಕು, 'ಐದು ಆಜ್ಞೆಗಳಲ್ಲಿ ದಿನಪೂರ್ತಿ ಇರಬೇಕು ಹಾಗು ಪಾಲಿಸಬೇಕು' ಎಂದು. ನಿರ್ಧರಿಸುವಾಗಲೇ ನೀವು ನಮ್ಮ ಆಜ್ಞೆಯಲ್ಲಿ ಇದ್ದಂತೆ, ನಮಗೆ ಅದಷ್ಟೇ ಬೇಕಾಗಿರುವುದು. ನಿಮ್ಮಿಂದ ಪಾಲಿಸಲಾಗದೆ ಇರುವುದಕ್ಕೆ causes (ಕಾರಣಗಳನ್ನು) ನಾನು ತಿಳಿದಿದ್ದೇನೆ. ಆದರೆ, ಪಾಲಿಸಲೇ ಬೇಕೆನ್ನುವ ನಿಶ್ಚಯವನ್ನಷ್ಟೇ ನೀವು ಮಾಡಬೇಕಾಗಿರುವುದು.

ನಮ್ಮ ಜ್ಞಾನದಿಂದ ಮೋಕ್ಷವನ್ನು ಹೊಂದುವುದೇ ಆಗಿದೆ. ಅಲ್ಪ-ಸ್ವಲ್ಪ ಆಜ್ಞೆಯಲ್ಲಿ ಇದ್ದರೂ ಸಹ ಮೋಕ್ಷವು ಪ್ರಾಪ್ತಿಯಾಗುವುದರಲ್ಲಿ ಎರಡು ಮಾತಿಲ್ಲ. ಈಗ ಆಜ್ಞೆಯನ್ನು ಪಾಲಿಸದೆ ಇದ್ದರೂ, ಈ ಜ್ಞಾನವನ್ನು ತೆಗೆದುಕೊಂಡಿರುವುದರಿಂದ ಒಂದಲ್ಲಾ ಒಂದು ದಿನ ಅವರಿಗೆ ಈ ಜ್ಞಾನವು ಚಿಗುರೊಡೆಯದೆ ಇರುವುದಿಲ್ಲ. ಹಾಗಾಗಿ, ಎಷ್ಟೋ ಸಲ ಜನರು ನನ್ನನ್ನು ಪ್ರಶ್ನಿಸುತ್ತಾರೆ, 'ಜ್ಞಾನವನ್ನು ತೆಗೆದುಕೊಂಡು ಆಜ್ಞೆಯ ಪಾಲನೆಯನ್ನು ಮಾಡದೇ ಇರುವವರ ಬಗ್ಗೆ ಏನು ಹೇಳುತ್ತೀರಾ?' ಎಂದು. ಅದಕ್ಕೆ ನಾನು ಹೇಳುವುದೇನೆಂದರೆ, 'ನಿಮಗೆ ಅದನ್ನು ನೋಡಬೇಕಾದ ಅಗತ್ಯವಿಲ್ಲ. ಅದನ್ನು ನೋಡಬೇಕಾಗಿರುವ ಅವಶ್ಯಕತೆಯು ನನ್ನದಾಗಿದೆ. ಜ್ಞಾನವನ್ನು ಅವರು ನನ್ನಿಂದ ಪಡೆದಿದ್ದಾರೆ! ನಿಮಗೇನೂ ನಷ್ಟವಾಗಿಲ್ಲವಲ್ಲಾ!' ಕಾರಣವೇನೆಂದರೆ, ಈ ಜ್ಞಾನದಿಂದ ಪಾಪಗಳೆಲ್ಲಾ ಭಸ್ಮವಾಗದೆ ಉಳಿಯುವುದಿಲ್ಲ. ಹಾಗಾಗಿ, ಎಲ್ಲರೊಳಗೆ ಹಗುರವಾದಂತೆ ಅನುಭವವಾಗುತ್ತದೆ. ಆಮೇಲೆ ಈ ಐದು ವಾಕ್ಯಗಳನ್ನು ಪಾಲನೆಮಾಡಿದರೆ ಗುರಿಯನ್ನು ತಲುಪಿಬಿಡಬಹುದು. ನಾವು ಸದಾ ಐದು ವಾಕ್ಯಗಳಲ್ಲೇ ಇರುತ್ತೇವೆ ಹಾಗು ನಾವು ಯಾವುದನ್ನು ಪಾಲಿಸುತ್ತಿದ್ದೇವೆ, ಅದನ್ನೇ ನಿಮಗೂ ಸಹ ನೀಡಲಾಗಿದೆ. ಆಜ್ಞೆಯಲ್ಲಿ ಇದ್ದುಬಿಟ್ಟರೆ ಕೆಲಸವು ಪೂರ್ಣಗೊಳ್ಳುತ್ತದೆ. ತನ್ನಯ ಜಾಣತನದಿಂದ ಲಕ್ಷಾಂತರ ಜನ್ಮಗಳಿಂದಲೂ ಎಷ್ಟೇ ಪ್ರಯತ್ನ ಪಟ್ಟರೂ ಏನೂ ಪ್ರಯೋಜನವಾಗಲಿಲ್ಲ. ಈಗಲೂ ಸಹ ಆಜ್ಞೆಯನ್ನು ಪಾಲಿಸುವಾಗ ತನ್ನ ಬುದ್ಧಿವಂತಿಕೆಯಿಂದಲೇ ಪಾಲಿಸಲು ಮುಂದಾಗುವುದಾಗಿದೆ, ಅಲ್ಲದೆ ಆಜ್ಞೆಯನ್ನು ತಿಳಿದುಕೊಳ್ಳುವಾಗಲೂ ಸಹ ತನಗೆ ತಿಳಿಯುವ ಹಾಗೆ! ಹಾಗಾಗಿ ಅಲ್ಲಿ ಸ್ವಲ್ಪ leakage ಆಗುತ್ತಲಿರುತ್ತದೆ. ಆದರೂ ತನಗೆ, ಈ ಆಜ್ಞೆಯನ್ನು ಪಾಲಿಸಬೇಕೆನ್ನುವ ಭಾವನೆಯು ಉಂಟಾಗಬೇಕಿದ್ದರು ಸಹ ಅಲ್ಲಿ ಜಾಗೃತಿಯ ಅವಶ್ಯಕತೆಯಿದೆ.

ಆಜ್ಞೆಯನ್ನು ಪಾಲಿಸುವುದು ಮರೆತುಹೋದರೆ, ಪ್ರತಿಕ್ರಮಣ ಮಾಡಬೇಕು. ಮರೆತುಹೋಗುವುದು ಮನುಷ್ಯನ ಸ್ವಭಾವ. ಆದರೆ, ಪಾಲಿಸಲು ಮರೆತು ಹೋದಾಗ, ಪ್ರತಿಕ್ರಮಣವನ್ನು ಹೇಗೆ ಮಾಡಬೇಕೆಂದರೆ, 'ಹೇ ದಾದಾ, ಈ ಎರಡು ಗಂಟೆಗಳ ಕಾಲ ನಾನು ನಿಮ್ಮ ಆಜ್ಞೆಯ ಪಾಲನೆಯನ್ನು ಮರೆತು ಬಿಟ್ಟಿದ್ದೇನೆ. ಆದರೆ, ನನಗೆ ಆಜ್ಞೆಯನ್ನು ಪಾಲಿಸಬೇಕೆನ್ನುವುದೇ ಆಗಿದೆ. ಹಾಗಾಗಿ ನನಗೆ ಕ್ಷಮೆ ನೀಡಿ.' ಹೀಗೆ ಹೇಳುವುದರಿಂದ ಎಲ್ಲದರಲ್ಲಿಯೂ pass. ನೂರಕ್ಕೆ ನೂರು full marks. ಹೀಗೆ ಕ್ಷಮೆಯಾಚಿಸಿದಾಗ, ನಿಮ್ಮ ಜವಾಬ್ದಾರಿ ಮುಗಿಯಿತು. ನಮ್ಮ ಆಜ್ಞೆಯಲ್ಲಿ ಇದ್ದುಬಿಟ್ಟರೆ, ಇಡೀ worldನಲ್ಲಿ ಯಾವುದೊಂದು ಸ್ಪರ್ಶಿಸುವುದಿಲ್ಲ. ನಮ್ಮ ಆಜ್ಞೆಯನ್ನು ಪಾಲಿಸಿದರೆ, ನಿಮಗೆ ಏನೊಂದೂ ಅಂಟಿಕೊಳ್ಳುವುದಿಲ್ಲ. ಇನ್ನು ಆಜ್ಞೆಯನ್ನು ನೀಡಿದವರಿಗೆ ಅಂಟಿಕೊಳ್ಳುತ್ತದೆಯೇ? ಇಲ್ಲ. ಏಕೆಂದರೆ, ಅವರೂ ಸಹ ಪರರ

ಹಿತಕ್ಕಾಗಿಯೇ ಮಾಡುವುದಾಗಿದೆ. ಹಾಗಾಗಿ ಅವರನ್ನೂ ಕೂಡಾ ಸ್ಪರ್ಶಿಸುವುದಿಲ್ಲ ಹಾಗು dissolve ಆಗಿಬಿಡುತ್ತದೆ.

## ಇದು ಭಗವಂತನ ಆಜ್ಞೆ!

ದಾದಾರವರ ಆಜ್ಞೆಯನ್ನು ಪಾಲನೆ ಮಾಡುವುದೆಂದರೆ, ಈ 'ಎ. ಎಮ್. ಪಟೇಲ್'ನ ಆಜ್ಞೆ ಅಲ್ಲ. ಸ್ವತಃ 'ದಾದಾ ಭಗವಾನ್'ರವರ, ಹದಿನಾಲ್ಕು ಲೋಕದ ಒಡೆಯನ ಆಜ್ಞೆ ಆಗಿದೆ. ಅದರ ಗ್ಯಾರೆಂಟಿ ನಾನು ಕೊಡುತ್ತೇನೆ. ನನ್ನ ಮೂಲಕ ಎಲ್ಲಾ ವಿಚಾರಗಳು ಹೊರಗೆ ಬೀಳುತ್ತಿವೆ. ಆದುದರಿಂದ ನೀವು ಈ ಆಜ್ಞೆಯನ್ನು ಪಾಲಿಸಬೇಕು. ಇದು ನನ್ನ ಆಜ್ಞೆ ಅಲ್ಲ, 'ದಾದಾ ಭಗವಾನ್'ರ ಆಜ್ಞೆ ಆಗಿದೆ. ನಾನೂ ಕೂಡಾ ಆ ಭಗವಂತನ ಆಜ್ಞೆಯಲ್ಲಿಯೇ ಇರುತ್ತೇನಲ್ಲಾ!

-ಜೈ ಸಚ್ಚಿದಾನಂದ್

# ನಿತ್ಯಕ್ರಮ

## ಪ್ರಾತಃ ವಿಧಿ

- ಶ್ರೀ ಸಿಮಂಧರ ಸ್ವಾಮಿಗೆ ನಮಸ್ಕರಿಸುತ್ತೇನೆ. -(5)
- ವಾತ್ಸಲ್ಯ ಮೂರ್ತಿ ದಾದಾ ಭಗವಾನರಿಗೆ ನಮಸ್ಕರಿಸುತ್ತೇನೆ. -(5)
- ಪ್ರಾಪ್ತ ಮನಸ್ಸು-ವಚನ-ಕಾಯದಿಂದ ಈ ಜಗತ್ತಿನ ಯಾವುದೇ ಜೀವಿಗೂ ಕಿಂಚಿತ್ತು ಕೂಡಾ ದುಃಖವು ಉಂಟಾಗಬಾರದು, ಉಂಟಾಗಬಾರದು, ಉಂಟಾಗಬಾರದು. -(5)
- ಕೇವಲ 'ಶುದ್ಧಾತ್ಮಾನುಭವ' ವಿನಾ ಈ ಜಗತ್ತಿನ ಯಾವುದೇ ವಿನಾಶಿ ವಸ್ತುವನ್ನು 'ನಾನು' ಬಯಸುವುದಿಲ್ಲ. -(5)
- ಪ್ರಕಟ ಜ್ಞಾನಿ ಪುರುಷ 'ದಾದಾ ಭಗವಾನ್'ರ ಆಜ್ಞೆಯಲ್ಲಿಯೇ ನಿರಂತರವಾಗಿರಲು ಪರಮ ಶಕ್ತಿಯು ಪ್ರಾಪ್ತಿಯಾಗಲಿ, ಪ್ರಾಪ್ತಿಯಾಗಲಿ, ಪ್ರಾಪ್ತಿಯಾಗಲಿ. -(5)
- ಜ್ಞಾನಿ ಪುರುಷ 'ದಾದಾ ಭಗವಾನ್'ರ ವಿತರಾಗ ವಿಜ್ಞಾನವು ಯಥಾರ್ಥದಂತೆ ಸಂಪೂರ್ಣವಾಗಿ, ಸರ್ವರೀತಿಯಿಂದ ಕೇವಲ ಜ್ಞಾನ, ಕೇವಲ ದರ್ಶನ ಹಾಗೂ ಕೇವಲ ಚಾರಿತ್ರ್ಯದಲ್ಲಿ ಪರಿಣಮಿಸಲಿ, ಪರಿಣಮಿಸಲಿ,ಪರಿಣಮಿಸಲಿ. -(5)

# ನಮಸ್ಕಾರ ವಿಧಿ

- ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಾಗಿ, ವರ್ತಮಾನದ ಮಹಾವಿದೇಹ ಕ್ಷೇತ್ರದಲ್ಲಿ ವಿಹರಿಸುತ್ತಿರುವ ತೀರ್ಥಂಕರ ಭಗವಾನ್ 'ಶ್ರೀ ಸಿಮಂಧರ ಸ್ವಾಮಿ'ಗೆ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(40)
- ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಾಗಿ, ವರ್ತಮಾನದ ಮಹಾವಿದೇಹ ಕ್ಷೇತ್ರ ಹಾಗೂ ಅನ್ಯ ಕ್ಷೇತ್ರಗಳಲ್ಲಿ ವಿಹರಿಸುತ್ತಿರುವ 'ಓಂ ಪರಮೇಷ್ಟಿ ಭಗವಂತರಿಗೆ' ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಾಗಿ, ವರ್ತಮಾನದ ಮಹಾವಿದೇಹ ಕ್ಷೇತ್ರ ಹಾಗೂ ಅನ್ಯ ಕ್ಷೇತ್ರಗಳಲ್ಲಿ ವಿಹರಿಸುತ್ತಿರುವ 'ಪಂಚ ಪರಮೇಷ್ಟಿ ಭಗವಂತರಿಗೆ' ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಾಗಿ, ವರ್ತಮಾನದ ಮಹಾವಿದೇಹ ಕ್ಷೇತ್ರ ಹಾಗೂ ಅನ್ಯ ಕ್ಷೇತ್ರಗಳಲ್ಲಿ ಸಂಚರಿಸುತ್ತಿರುವ ತೀರ್ಥಂಕರ ಮಹಾಪುರುಷರಿಗೆ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- ವಿತರಾಗ ಶಾಸನದ 'ದೇವ-ದೇವಿ'ಯರಿಗೆ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- ನಿಷ್ಪಕ್ಷಪಾತಿ ಶಾಸನದ 'ದೇವ-ದೇವಿ'ಯರಿಗೆ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- 'ಇಪತ್ತನಾಲ್ಕು ತೀರ್ಥಂಕರ ಭಗವಂತರಿಗೆ' ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- 'ಶ್ರೀ ಕೃಷ್ಣ ಭಗವಾನರಿಗೆ' ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)

- ಭರತಕ್ಷೇತ್ರದಲ್ಲಿ ಹಾಲಿ ವಿಹರಿಸುತ್ತಿರುವ ಸರ್ವಜ್ಞ 'ಶ್ರೀ ದಾದಾ ಭಗವಾನರಿಗೆ' ನಿಶ್ಚಯದಿಂದ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- 'ದಾದಾ ಭಗವಾನ್'ರ ಸಮಸ್ತ 'ಸಮ್ಕಿತಧಾರಿ ಮಹಾತ್ಮರಿಗೆ' ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- ಇಡೀ ಬ್ರಹ್ಮಾಂಡದ ಸಕಲ ಜೀವಿಗಳ 'ರಿಯಲ್ ಸ್ವರೂಪ'ಕ್ಕೆ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. -(5)
- 'ರಿಯಲ್ ಸ್ವರೂಪ' ಅದುವೇ 'ಭಗವತ್ ಸ್ವರೂಪವಾಗಿದೆ', ಹಾಗಾಗಿ ಇಡೀ ಜಗತ್ತನ್ನು 'ಭಗವತ್ ಸ್ವರೂಪ'ವಾಗಿ ದರ್ಶನ ಮಾಡುತ್ತೇನೆ. -(5)
- 'ರಿಯಲ್ ಸ್ವರೂಪ' ಅದುವೇ 'ಶುದ್ಧಾತ್ಮ ಸ್ವರೂಪವಾಗಿದೆ', ಹಾಗಾಗಿ ಇಡೀ ಜಗತ್ತನ್ನು 'ಶುದ್ಧಾತ್ಮ ಸ್ವರೂಪ'ವಾಗಿ ದರ್ಶನ ಮಾಡುತ್ತೇನೆ. -(5)
- 'ರಿಯಲ್ ಸ್ವರೂಪ' ಅದುವೇ 'ತತ್ತ್ವ ಸ್ವರೂಪವಾಗಿದೆ', ಹಾಗಾಗಿ ಇಡೀ ಜಗತ್ತನ್ನು ತತ್ತ್ವಜ್ಞಾನವೆಂದೇ ದರ್ಶನ ಮಾಡುತ್ತೇನೆ. -(5)

(ವರ್ತಮಾನದ ತೀರ್ಥಂಕರ ಶ್ರೀ ಸಿಮಂಧರ ಸ್ವಾಮಿಗೆ, ಪರಮ ಪೂಜ್ಯ 'ದಾದಾ ಭಗವಾನ್'ರ ಮಾಧ್ಯಮದ ಮೂಲಕ ಪ್ರತ್ಯಕ್ಷವಾಗಿ ನಮಸ್ಕಾರವು ತಲುಪುತ್ತದೆ. ಮೇಲೆ ತಿಳಿಸಿರುವ ಸಂಖ್ಯಾನುಸಾರ ಪ್ರತಿನಿತ್ಯ ಒಂದು ಬಾರಿಯಾದರೂ ನಮಸ್ಕಾರ ವಿಧಿಯನ್ನು ಮಾಡತಕ್ಕದ್ದು.)

# ನವ್-ಕಲಮೊ (ಒಂಬತ್ತು ಸೂತ್ರಗಳು)

**1.** ಹೇ ದಾದಾ ಭಗವಾನ್! ಯಾವುದೇ ದೇಹಧಾರಿ ಜೀವಾತ್ಮದ 'ಅಹಂ'ಗೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ, ಮಾಡಿಸದೆ, ಅಥವಾ ಮಾಡುವವರಿಗೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ಯಾವುದೇ ದೇಹಧಾರಿ ಜೀವಾತ್ಮದ 'ಅಹಂ'ಗೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ ಇರುವಂತಹ ಸ್ಯಾದ್ವಾದ್ (ಆತ್ಮಜಾಗೃತಿಯೊಂದಿಗೆ, ನಿರ್ದೋಷದ ದೃಷ್ಟಿಯಿಂದ ಮತ್ತು ಎಲ್ಲರಿಗೂ ಸಮಾಧಾನವಾಗುವಂತಹ) ವಾಣಿ, ಸ್ಯಾದ್ವಾದ್ ವರ್ತನೆ ಹಾಗೂ ಸ್ಯಾದ್ವಾದ್ ಮನನ ಮಾಡುವಂತೆ ನನಗೆ ಪರಮ ಶಕ್ತಿ ನೀಡಿ.

**2.** ಹೇ ದಾದಾ ಭಗವಾನ್! ಯಾವುದೇ ಧರ್ಮದ ಪ್ರಮಾಣಕ್ಕೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ, ಮಾಡಿಸದೆ, ಅಥವಾ ಮಾಡುವವರಿಗೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ಯಾವುದೇ ಧರ್ಮದ ಪ್ರಮಾಣಕ್ಕೆ ಕಿಂಚಿತ್ತೂ ಕೂಡಾ ನೋವನ್ನು ಉಂಟುಮಾಡದೆ ಇರುವಂತಹ ಸ್ಯಾದ್ವಾದ್ ವಾಣಿ, ಸ್ಯಾದ್ವಾದ್ ವರ್ತನೆ ಹಾಗೂ ಸ್ಯಾದ್ವಾದ್ ಮನನ ಮಾಡುವಂತೆ ನನಗೆ ಪರಮ ಶಕ್ತಿ ನೀಡಿ.

**3.** ಹೇ ದಾದಾ ಭಗವಾನ್! ಯಾರೇ ದೇಹಧಾರಿ ಉಪದೇಶಕರು, ಸಾಧು, ಸಾಧ್ವಿ ಅಥವಾ ಆಚಾರ್ಯರ ಅವಹೇಳನ, ಅಪರಾಧ, ಅವಿನಯವನ್ನು ಮಾಡದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

**4.** ಹೇ ದಾದಾ ಭಗವಾನ್! ಯಾವುದೇ ದೇಹಧಾರಿ ಜೀವಾತ್ಮ ಪ್ರತಿ ಕಿಂಚಿತ್ತೂ ಕೂಡಾ ಅಭಾವ, ತಿರಸ್ಕಾರವನ್ನು ಎಂದಿಗೂ ಮಾಡದೆ, ಮಾಡಿಸದೆ ಅಥವಾ ಮಾಡುವವರಿಗೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

**5.** ಹೇ ದಾದಾ ಭಗವಾನ್! ಯಾವುದೇ ದೇಹಧಾರಿ ಜೀವಾತ್ಮದೊಂದಿಗೆ ಎಂದಿಗೂ ಕಠೋರ ಭಾಷೆ, ವ್ಯಂಗ್ಯ ಭಾಷೆಯನ್ನು ಮಾತನಾಡದೆ, ಮಾತನಾಡಿಸದೆ, ಮಾತನಾಡುವ ಪ್ರತಿ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ಯಾರೇ ಕಠೋರವಾಗಿ, ವ್ಯಂಗ್ಯವಾಗಿ ಮಾತನಾಡಿದರೂ, ಮೃದು-ಋಜು ಭಾಷೆಯನ್ನು ಮಾತನಾಡುವಂತೆ ನನಗೆ ಶಕ್ತಿ ನೀಡಿ.

**6.** ಹೇ ದಾದಾ ಭಗವಾನ್! ಯಾವುದೇ ದೇಹಧಾರಿ ಜೀವಾತ್ಮ ಪ್ರತಿ ಸ್ತ್ರೀ, ಪುರುಷ ಅಥವಾ ನಪುಂಸಕ, ಯಾವುದೇ ಲಿಂಗಧಾರಿಯಾಗಿರಲಿ, ಅವರ ಬಗ್ಗೆ ಕಿಂಚಿತ್ತೂ ಕೂಡಾ ವಿಷಯ-ವಿಕಾರಕ್ಕೆ ಸಂಬಂಧಪಟ್ಟ ದೋಷಗಳು, ಇಚ್ಛೆಗಳು, ಚೇಷ್ಟೆಗಳು ಅಥವಾ ವಿಚಾರಕ್ಕೆ ಸಂಬಂಧಪಟ್ಟ ದೋಷಗಳನ್ನು ಮಾಡದೆ, ಮಾಡಿಸದೆ ಅಥವಾ ಮಾಡುವ ಪ್ರತಿ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ. ನಿರಂತರ ನಿರ್ವಿಕಾರಿಯಾಗಿರಲು ನನಗೆ ಪರಮ ಶಕ್ತಿ ನೀಡಿ.

**7.** ಹೇ ದಾದಾ ಭಗವಾನ್! ಯಾವುದೇ ರಸದಲ್ಲಿ ಲುಬ್ಧನಾಗದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

ಸಮರಸಿ (ಷಡ್ರಸಗಳ) ಆಹಾರವನ್ನು ಸೇವಿಸುವಂತೆ ಪರಮ ಶಕ್ತಿ ನೀಡಿ.

**8.** ಹೇ ದಾದಾ ಭಗವಾನ್! ಯಾವುದೇ ದೇಹಧಾರಿ ಜೀವಾತ್ಮಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಜೀವಂತ ಅಥವಾ ಮೃತ್ಯು ಹೊಂದಿರುವ, ಯಾವುದಕ್ಕೂ

ಕಿಂಚಿತ್ತೂ ಕೂಡಾ ಅವಹೇಳನ, ಅಪರಾಧ, ಅವಿನಯವನ್ನು ಮಾಡದೆ, ಮಾಡಿಸದೆ ಅಥವಾ ಮಾಡುವವರಿಗೆ ಅನುಮೋದಿಸದೆ ಇರುವಂತೆ ನನಗೆ ಪರಮ ಶಕ್ತಿ ನೀಡಿ.

**9.** ಹೇ ದಾದಾ ಭಗವಾನ್! ಜಗತ್-ಕಲ್ಯಾಣವನ್ನು ಮಾಡಲು ನಿಮಿತ್ತನಾಗುವಂತೆ ನನಗೆ ಪರಮ ಶಕ್ತಿ ನೀಡಿ, ಶಕ್ತಿ ನೀಡಿ, ಶಕ್ತಿ ನೀಡಿ.

(ಇಷ್ಟು ನೀವು 'ದಾದಾ' ಬಳಿ ಪ್ರಾರ್ಥಿಸಿಕೊಳ್ಳಬೇಕು. ಪ್ರತಿನಿತ್ಯ 'ಮೆಕ್ಯಾನಿಕಲ್'ನಂತೆ ಓದುವುದಲ್ಲ, ಇವುಗಳನ್ನು ನಿಮ್ಮೊಳಗೆ ಅಳವಡಿಸಿಕೊಳ್ಳಬೇಕು; ಪ್ರತಿನಿತ್ಯ ಉಪಯೋಗ ಪೂರ್ವಕವಾಗಿ, ಭಾವನೆಯನ್ನು ಮಾಡುವಂತಹ ವಾಕ್ಯಗಳಾಗಿವೆ. ಇದಿಷ್ಟರಲ್ಲೇ ಎಲ್ಲಾ ಶಾಸ್ತ್ರಗಳ ಸಾರವು ಬಂದುಬಿಡುತ್ತದೆ.)

****

# ಪ್ರತಿಕ್ರಮಣದ ವಿಧಿ

ಪ್ರತ್ಯಕ್ಷ 'ದಾದಾ ಭಗವಾನ್'ರ ಸಾಕ್ಷಿಯಾಗಿ, ದೇಹಧಾರಿ *(ವ್ಯಕ್ತಿಯ ಹೆಸರು) ಮನಸ್ಸು-ವಚನ-ಕಾಯದ ಯೋಗ, ಭಾವಕರ್ಮ-ದ್ರವ್ಯಕರ್ಮ-ನೊಕರ್ಮದಿಂದ ಭಿನ್ನವಾಗಿರುವ ಹೇ ಶುದ್ಧಾತ್ಮ ಭಗವಾನ್! ನಿಮ್ಮ ಸಾಕ್ಷಿಯಾಗಿ ಇಲ್ಲಿಯವರೆಗೆ, ನನ್ನಿಂದ ಯಾವ ಯಾವ **ದೋಷಗಳು ಆಗಿವೆಯೋ, ಅವುಗಳಿಗಾಗಿ ಕ್ಷಮೆಯಾಚಿಸುತ್ತೇನೆ. ಪಶ್ಚಾತ್ತಾಪ ಪಡುತ್ತೇನೆ. ಆಲೋಚನೆ-ಪ್ರತಿಕ್ರಮಣ-ಪ್ರತ್ಯಾಖ್ಯಾನ್ (ಪ್ರತಿಜ್ಞೆಯನ್ನು) ಮಾಡುತ್ತೇನೆ ಹಾಗೂ ಮತ್ತೆ ಇಂತಹ ದೋಷಗಳನ್ನು ಇನ್ನೆಂದಿಗೂ ಮಾಡುವುದಿಲ್ಲವೆಂದು ದೃಢ ನಿಶ್ಚಯವನ್ನು ಮಾಡುತ್ತೇನೆ. ನನ್ನನ್ನು ಕ್ಷಮಿಸಿ, ಕ್ಷಮಿಸಿ, ಕ್ಷಮಿಸಿ.

* ಯಾರೊಂದಿಗೆ ಮನಸ್ತಾಪವು ಉಂಟಾಗಿರುತ್ತದೆ, ಆ ವ್ಯಕ್ತಿಯ ಹೆಸರನ್ನು ಹೇಳಿಕೊಳ್ಳುವುದು.

** ಯಾವ ದೋಷವಾಗಿರುತ್ತದೆ, ಅದನ್ನು ಮನಸ್ಸಿನಲ್ಲಿ ನೆನಪುಮಾಡಿಕೊಳ್ಳುವುದು.

(ನೀವು ಶುದ್ಧಾತ್ಮ ಹಾಗೂ ಯಾರು ದೋಷವನ್ನು (ತಪ್ಪನ್ನು) ಮಾಡಿದ್ದಾರೋ, ಅವನಿಂದ (File-1) ಪ್ರತಿಕ್ರಮಣವನ್ನು ಮಾಡಿಸಬೇಕು. 'ಚಂದುಭಾಯ್' (File-1) ದೋಷಗಳ ಪ್ರತಿಕ್ರಮಣವನ್ನು ಮಾಡಬೇಕು.)

# ಶುದ್ಧಾತ್ಮನಲ್ಲಿ ಪ್ರಾರ್ಥನೆ

(ಪ್ರತಿನಿತ್ಯ ಒಂದು ಬಾರಿ)

ಹೇ ಅಂತರ್ಯಾಮಿ ಪರಮಾತ್ಮ! ತಾವು ಪ್ರತಿಯೊಂದು ಜೀವಿಯಲ್ಲೂ ಆಸೀನರಾಗಿರುವಿರಿ, ಹಾಗೆಯೇ ನನ್ನಲ್ಲಿ ಕೂಡಾ ಆಸೀನರಾಗಿರುವಿರಿ. ತಮ್ಮ ಸ್ವರೂಪ ಅದೇ ನನ್ನ ಸ್ವರೂಪವಾಗಿದೆ. ನನ್ನ ಸ್ವರೂಪ ಶುದ್ಧಾತ್ಮ.

ಹೇ ಶುದ್ಧಾತ್ಮ ಭಗವಾನ್! ನಾನು ತಮಗೆ ಅಭೇದ ಭಾವದಿಂದ ಅತ್ಯಂತ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ.

ಅಜ್ಞಾನದಿಂದಾಗಿ ನಾನು ಯಾವ ಯಾವ *** ದೋಷಗಳನ್ನು ಮಾಡಿದ್ದೇನೆ, ಆ ಎಲ್ಲಾ ದೋಷಗಳನ್ನು ತಮ್ಮ ಮುಂದೆ ವ್ಯಕ್ತಪಡಿಸುತ್ತೇನೆ. ಅವುಗಳಿಗಾಗಿ ಹೃದಯಪೂರ್ವಕವಾಗಿ ಬಹಳ ಪಶ್ಚಾತ್ತಾಪ ಪಡುತ್ತೇನೆ ಹಾಗೂ ತಮ್ಮಲ್ಲಿ ಕ್ಷಮೆಯಾಚಿಸುತ್ತೇನೆ. ಹೇ ಪ್ರಭು! ನನ್ನನ್ನು ಕ್ಷಮಿಸಿ, ಕ್ಷಮಿಸಿ, ಕ್ಷಮಿಸಿ ಹಾಗೂ ಮತ್ತೆ ಅಂತಹ ದೋಷಗಳನ್ನು ಮಾಡದ ಹಾಗೆ ತಾವು ನನಗೆ ಶಕ್ತಿಯನ್ನು ನೀಡಿ, ಶಕ್ತಿಯನ್ನು ನೀಡಿ, ಶಕ್ತಿಯನ್ನು ನೀಡಿ.

ಹೇ ಶುದ್ಧಾತ್ಮ ಭಗವಾನ್! ತಾವು ಹೀಗೊಂದು ಕೃಪೆ ಮಾಡಿ, ಅದೇನೆಂದರೆ ನಮ್ಮ ನಡುವೆ ಭೇದಭಾವವು ಅಳಿಯಲಿ ಹಾಗು ಅಭೇದ-ಸ್ವರೂಪವು ಪ್ರಾಪ್ತಿಯಾಗಲಿ. ನಾವು ತಮ್ಮಲ್ಲಿ ಅಭೇದ ಸ್ವರೂಪದಿಂದ ತನ್ಮಯರಾಗಿಬಿಡುವಂತಾಗಲಿ.

*** ಯಾವ ದೋಷವು ಉಂಟಾಗಿತ್ತೋ ಅದನ್ನು ಮನಸ್ಸಿನಲ್ಲಿ ನೆನಪಿಸಿಕೊಳ್ಳಬೇಕು.

****

ಆತ್ಮಜ್ಞಾನಿ ಪುರುಷರಾದ 'ಏ. ಎಂ. ಪಟೇಲ್'ರೊಳಗೆ ಪ್ರಕಟಗೊಂಡಿರುವ

**'ದಾದಾ ಭಗವಾನ್ ನಾ ಅಸೀಮ ಜೈ ಜೈಕಾರ ಹೋ'**

(ಪ್ರತಿನಿತ್ಯ ಕಡಿಮೆಯೆಂದರೆ 8 ನಿಮಿಷದಿಂದ 48 ನಿಮಿಷದವರೆಗೆ ಹೇಳಿಕೊಳ್ಳಬೇಕು.)

*****

## ದಾದಾ ಭಾಗವಾನ್ ಫೌಂಡೇಶನ್ ನಿಂದ ಪ್ರಕಾಶಿತವಾದ ಕನ್ನಡ ಹಾಗೂ ಹಿಂದಿ ಪುಸ್ತಕಗಳು

### ಕನ್ನಡ ಪುಸ್ತಕಗಳು

1. ಆತ್ಮ ಸಾಕ್ಷಾತ್ಕಾರ
2. ಅಡ್ಜಸ್ಟ್ ಎವ್ರಿವೇರ್
3. ಸಂಘರ್ಷಣೆಯನ್ನು ತಪ್ಪಿಸಿ
4. ಮೃತ್ಯು
5. ಅಂತಃಕರಣದ ಸ್ವರೂಪ
6. ನಾನು ಯಾರು?

### ಹಿಂದಿ ಪ್ರಸ್ತಕಗಳು

1. ಜ್ಞಾನಿ ಪುರುಷ್ ಕೀ ಪಹಚಾನ್
2. ಸರ್ವ್ ದುಃಖೋಂ ಸೇ ಮುಕ್ತಿ
3. ಕರ್ಮ್ ಕಾ ಸಿದ್ಧಾಂತ್
4. ಆತ್ಮಬೋಧ್
5. ಅಂತಃಕರಣ್ ಕಾ ಸ್ವರೂಪ್
6. ಜಗತ್ ಕರ್ತಾ ಕೌನ್?
7. ಭುಗತೇ ಉಸೀ ಕಾ ಭೂಲ್
8. ಅಡ್ಜಸ್ಟ್ ಎವೆರಿವ್ಹೇರ್
9. ಟಕರಾವ್ ಟಾಲಿಎ
10. ಹುವಾ ಸೋ ನ್ಯಾಯ್
11. ಚಿಂತಾ
12. ಕ್ರೋಧ್
13. ಮೈ ಕೌನ್ ಹೂಂ?
14. ದಾನ್
15. ಮಾನವ ಧರ್ಮ
16. ಪ್ರೇಮ್
17. ಅಹಿಂಸಾ
18. ಪ್ರತಿಕ್ರಮಣ್ (ಸಂ.)
19. ಪಾಪ್–ಪುಣ್ಯ್
20. ಕರ್ಮ್ ಕಾ ವಿಜ್ಞಾನ್
21. ಚಮತ್ಕಾರ್
22. ವಾಣಿ, ವ್ಯವಹಾರ್ ಮೇ...
23. ಪೈಸೋಂಕಾ ವ್ಯವಹಾರ್
24. ಪತಿ–ಪತ್ನಿ ಕಾ ದಿವ್ಯ ವ್ಯವಹಾರ್
25. ಮಾತಾ ಪಿತಾ ಔರ್ ಬಚ್ಚೋಂಕಾ...
26. ಸಮಝ್ ಸೇ ಪ್ರಾಪ್ತ್ ಬ್ರಹ್ಮಚರ್ಯ್(ಪೂ & ಉ)
27. ನಿಜದೋಷ್ ದರ್ಶನ್ ಸೇ...
28. ಕ್ಲೇಶ್ ರಹಿತ್ ಜೀವನ್
29. ಗುರು–ಶಿಷ್ಯ್
30. ಸೇವಾ–ಪರೋಪಕಾರ್
31. ತ್ರಿಮಂತ್ರ್
32. ಭಾವನಾ ಸೇ ಸುಧರೇ ಜನ್ಮೋಜನ್ಮ್
33. ಸತ್ಯ-ಅಸತ್ಯ ಕೆ ರಹಸ್ಯ
34. ಮೃತ್ಯು ಕೆ ರಹಸ್ಯ
35. ದಾದಾ ಭಗವಾನ್ ಕೌನ್?
36. ಆಪ್ತವಾಣಿ – 1 ರಿಂದ 9
37. ಆಪ್ತವಾಣಿ – 13 (ಪೂ & ಉ)
38. ಆಪ್ತವಾಣಿ – 14 (1)

ದಾದಾ ಭಗವಾನ್ ಫೌಂಡೇಶನ್‌ನಿಂದ ಗುಜರಾತಿ ಭಾಷೆಯಲ್ಲೂ ಹಲವಾರು ಪುಸ್ತಕಗಳು ಪ್ರಕಾಶಿತವಾಗಿವೆ. www.dadabhagwan.org ಇಲ್ಲಿ ಸಹ ನೀವು ಈ ಎಲ್ಲಾ ಪುಸ್ತಕಗಳನ್ನು ಪಡೆಯಬಹುದು.ದಾದಾ ಭಗವಾನ್ ಫೌಂಡೇಶನ್‌ನಿಂದ ಪ್ರತಿ ತಿಂಗಳು ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 'ದಾದಾವಾಣಿ' ಮ್ಯಾಗಜಿನ್ ಪ್ರಕಾಶಿತವಾಗುತ್ತದೆ.

# ಸಂಪರ್ಕಿಸಿ


ದಾದಾ ಭಗವಾನ್ ಪರಿವಾರ

**ಅಡಾಲಜ್:** ತ್ರಿಮಂದಿರ್ ಸಂಕುಲ್, ಸಿಮಂಧರ್ ಸಿಟಿ, ಅಹಮದಾಬಾದ್–ಕಲೋಲ್ ಹೈವೇ, ಪೋಸ್ಟ್: ಅಡಾಲಜ್, ಜಿ.–ಗಾಂಧೀನಗರ್, ಗುಜರಾತ್ –382421. ಫೋನ್: (079) 39830100,

**Email: info@dadabhagwan.org**

**ಕರ್ನಾಟಕ:**

ಬೆಂಗಳೂರು : 9590979099 ಹುಬ್ಬಳ್ಳಿ: 9513216111

ಬೆಳಗಾವಿ: 9945894202

| | | | |
|---|---|---|---|
| **ಮುಂಬೈ**: | 9323528901 | **ಹೈದರಾಬಾದ್**: | 9989877786 |
| **ದೆಹಲಿ**: | 9810098564 | **ಚೆನ್ನೈ**: | 9380159957 |
| **ಪೂನಾ**: | 9422660497 | **ಜಬಲ್ಪುರ:** | 9425160428 |
| **ಜಯಪುರ**: | 9351408285 | **ಅಮರಾವತಿ**: | 9422915064 |
| **ಭೂಪಾಲ**: | 9425024405 | **ಬಿಲಾಯ್**: | 9827481336 |
| **ಇಂದೋರ್**: | 9893545351 | **ಪಟ್ನಾ**: | 9431015601 |
| **ಕೊಲ್ಕತ್ತಾ:** | 033–32933885 | | |

| | | | |
|---|---|---|---|
| **USA:** | +1877-505-(3232) | **Australia:** | +61 421127947 |
| **UK:** | +44330-111-(3232) | **New Zealand:** | +64210376434 |
| **Kenya:** | +254772722063 | **Singapore:** | +6581129229 |
| **UAE:** | +971557316937 | | |

**Website: www.dadabhagwan.org**



## ಜೀವನದ ಧ್ಯೇಯ

ಈ ಸಂಸಾರವನ್ನು ನಮ್ಮಿಂದ ಪೋಷಿಸಲು ಸಾಧ್ಯವಾಗುವುದಾದರೆ, ಮುಂದಕ್ಕೆ ಅಲ್ಲಿ ಇನ್ನೇನನ್ನೂ ತಿಳಿದುಕೊಳ್ಳಬೇಕಾದ ಅವಶ್ಯಕತೆಯಿಲ್ಲ. ಆದರೆ ಸಂಸಾರದಿಂದ ನಮಗೇನಾದರೂ ತೊಂದರೆ ಉಂಟಾಗುತ್ತಿದ್ದರೆ, ಆಗ ನಾವು ಅಧ್ಯಾತ್ಮವನ್ನು ತಿಳಿದುಕೊಳ್ಳಬೇಕಾಗಿರುವುದು ಬಹಳ ಅನಿವಾರ್ಯವಾಗಿದೆ.

ಅಧ್ಯಾತ್ಮದಲ್ಲಿ 'ಸ್ವರೂಪ'ವನ್ನು ತಿಳಿಯಬೇಕಾಗಿರುವುದು ಮುಖ್ಯವಾಗಿದೆ.

'ನಾನು ಯಾರು' ಎನ್ನುವುದು ತಿಳಿದುಬಂದರೆ, ಆಗ ಎಲ್ಲಾ puzzles solve ಆಗಿಬಿಡುತ್ತವೆ.

-ದಾದಾ ಶ್ರೀ

dadabhagwan.org

Printed in India

Price ₹ 20